Reg NO(PRGI NO): KNKAN/25/A0970 • ಸಂಪುಟ 1 • ಸಂಚಿಕೆ 89 email: tatvanishtadaily@gmail.com 9481559555 08384 452643 3₹ ಪುಟ 6 ರವಿವಾರ | ನವೆಂಬರ್ | 30 | 2025

# ತತ್ವನಿಷ್ಠ

ನಾಡಿನ ನಿಖರ ನುಡಿ

**ದಿನದರ್ಶಿ**

ಬಾಂದಳದ ಬಾಣು; ರವಿಕಿರಣಗಳ ನೀಳ್ಕೋಲು |
ಇಂದುಮಣಿನುಣ್ಣು; ತಾರೆಗಳ ಕಣ್ಮಿನುಗು ||
ಚೆಂದದಂಗಾಂಗಭಾವದಿ ಮೊದಲ ಪಾಠವಿದು |
ಸೌಂದರ್ಯಗುರು ಪ್ರಕೃತಿ - ಮಂಕುತಿಮ್ಮ ||





## ಇಂದು ಭಗವದ್ಗೀತಾ ಮಹಾ ಸಮರ್ಪಣೆ

● **ತತ್ವನಿಷ್ಠ, ಶಿವಮೊಗ್ಗ:** ಶ್ರೀ ಭಗವದ್ಗೀತಾ ಅಭಿಯಾನ- 2025 ಸಾಲಿನ ರಾಜ್ಯ ಮಟ್ಟದ ಮಹಾ ಸಮರ್ಪಣೆ ಸಮಾರಂಭ ನ. 30ರಂದು ಬೆಳಿಗ್ಗೆ 10:30ಕ್ಕೆ ನಗರದ ಅಲ್ಲಮಪ್ರಭು ಮೈದಾನನಲ್ಲಿ ನಡೆಯಲಿದೆ. ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನದ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ, ಹರಿಹರಪುರದ ಶ್ರೀ ಸ್ವಯಂ ಪ್ರಕಾಶ ಸುತ್ತಿದಾನಂದ ಸರಸ್ವತೀ ಶ್ರೀ, ಶ್ರೀ ಬೆಕ್ಕಿನ ಕಲ್ಮಠದ ಡಾ. ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಶ್ರೀ, ಶ್ರೀ ಆದಿಚುಂದನಗಿರಿ ಶಾಖಾ ಮಠದ ಶ್ರೀ ನಾದಮಯಾನಂದನಾಥ ಶ್ರೀ ಸಾನ್ನಿಧ್ಯ ವಹಿಸಲಿದ್ದಾರೆ. ಕೇರಳ ರಾಜ್ಯಪಾಲ ರಾಜೇಂದ್ರ ವಿಶ್ವನಾಥ ಅರ್ಲೇಕರ್, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಪಾಲ್ಗೊಳ್ಳಲಿದ್ದಾರೆ.





















## ಪಂಚಾಂಗ

ಸಂವತ್ಸರ: ವಿಶ್ವಾವಸು. ಮಾಸ: ಮಾರ್ಗಶಿರ.
ಪಕ್ಷ: ಶುಕ್ಲಪಕ್ಷ. ತಿಥಿ: ದಶಮೀ. ನಕ್ಷತ್ರ: ಉತ್ತರಾ ಭಾದ್ರ.
ಸೂರ್ಯೋದಯ: ಬೆಳಿಗ್ಗೆ-06:56. ಸೂರ್ಯಾಸ್ತ: ಸಂಜೆ-05:24.
ರಾಹು ಕಾಲ: ಮಧ್ಯಾಹ್ನ-04:05ರಿಂದ ಸಂಜೆ-05:24ರ ವರೆಗೆ.
ಗುಳಿಕ ಕಾಲ: ಮಧ್ಯಾಹ್ನ-02:47ರಿಂದ ಮಧ್ಯಾಹ್ನ-04:05ರ ವರೆಗೆ.



**ಶ್ರೀ ವಿಠ್ಠಲ ಭಟ್ಟ ಕೆಕ್ಕಾರು**
ಖ್ಯಾತ ಜ್ಯೋತಿಷಿಗಳು, ಆಧ್ಯಾತ್ಮಿಕ ಚಿಂತಕರು
9113295125

## ರಾಶಿ ಫಲ

- **ಮೇಷ**: ಕೆಲಸದಲ್ಲಿ ಚುರುಕುತನ. ಗುರಿ ಸಾಧನೆ ಸಾಧ್ಯ.
- **ವೃಷಭ**: ಹಣಕಾಸಿನಲ್ಲಿ ಲಾಭ. ಹೂಡಿಕೆ ಫಲಕಾರಿ. ಅನಿರೀಕ್ಷಿತ ಯಶಸ್ಸು ಸಿಗುತ್ತದೆ.
- **ಮಿಥುನ**: ಸ್ನೇಹ ಸಂಬಂಧ ಬಲವಾಗುತ್ತದೆ. ಹಳೆಯ ಗೆಳೆಯರ ಭೇಟಿ.
- **ಕಟಕ**: ಆರೋಗ್ಯ ಸುಧಾರಣೆ. ಚೈತನ್ಯ ಹೆಚ್ಚಾಗುತ್ತದೆ.
- **ಸಿಂಹ**: ವೃತ್ತಿಯಲ್ಲಿ ಪ್ರಗತಿ. ಹೊಸ ಹೊಣೆಗಾರಿಕೆ ಬರಬಹುದು.
- **ಕನ್ಯಾ**: ಮಾತುಗಳಲ್ಲಿ ಎಚ್ಚರಿಕೆ ಕುಟುಂಬ ಶಾಂತಿಗೆ ಆದ್ಯತೆ ಕೊಡಿ.
- **ತುಲಾ**: ಪ್ರಯಾಣ ಶುಭ. ಹೊಸ ಅನುಭವ ಸಂತೋಷ ತರಬಹುದು.
- **ವೃಶ್ಚಿಕ**: ಆರ್ಥಿಕ ವ್ಯವಹಾರ ಯಶಸ್ವಿ. ಲಾಭದ ದಿನ. ಸ್ವತಂತ್ರ ಪ್ರಯತ್ನಗಳು ಫಲಪ್ರದ.
- **ಧನು**: ಧೈರ್ಯದಿಂದ ನಿರ್ಧಾರ ಮಾಡಿ. ಯಶಸ್ಸು ಖಚಿತ.
- **ಮಕರ**: ಮನೆಯವರ ಬೆಂಬಲ. ಮನಸ್ಸಿಗೆ ನೆಮ್ಮದಿ. ಚಿಂತನಶೀಲ ವಿಧಾನ ಅವಲಂಬಿಸಿ.
- **ಕುಂಭ**: ಕಲಾತ್ಮಕ ಚಟುವಟಿಕೆ ಯಶಸ್ವಿ. ಜನಪ್ರಿಯತೆ ಹೆಚ್ಚುತ್ತದೆ.
- **ಮೀನ**: ಧ್ಯಾನದಿಂದ ಮನಸ್ಸು ಹಗುರವಾಗುತ್ತದೆ. ಆಧ್ಯಾತ್ಮಿಕ ಚಿಂತನೆ ಲಾಭಕಾರಿ.

## ಅಡಿಕೆ ಧಾರಣೆ

### ಶಿರಸಿ

| | ಕನಿಷ್ಠ | ಗರಿಷ್ಠ |
|---|---|---|
| ಆಪಿ | ------ | ------ |
| ರಾಶಿ | 53299 | 56598 |
| ಬೆಟ್ಟೆ | 41223 | 50909 |
| ಕೆಂಪು ಗೋಟು | 30099 | 30099 |
| ಬಿಳಿ ಗೋಟು | 26560 | 38923 |
| ಹಳೆ ಚಾಲಿ | ------ | ------ |
| ಹೊಸ ಚಾಲಿ | 44114 | 49298 |
| ಕೋಕಾ | ------ | ------ |
| ಕಾಳು ಮೆಣಸು | 62899 | 69629 |

## ಟಿಎಸ್‌ಎಸ್ ಧಾರಣೆ

ರವಾ- 43, ಮೈದಾ- 43, ಗೋಧಿ ಹಿಟ್ಟು- 41, ಕಡ್ಲೆ ಹಿಟ್ಟು- 90, ಚಿರೋಟಿ ರವಾ- 43, ಗೋಧಿಹಿಟ್ಟು ಚಕ್ಕಿ- 41, ಕೇಸರಿ ರವಾ ಗೋಲ್ಡನ್ ಬನ್ನಿ- 45, ಶೇಂಗಾಬೀಜ- 130, ಸಕ್ಕರೆ(ಮಧ್ಯಮ)- 43.50, ಸಕ್ಕರೆ(ಸಣ್ಣದು)- 43, ಹೈ ಪ್ರೆಶರ್ ವಾಶರ್ ಐಡಿಯಲ್- ಐಡಿಎಸ್‌ಆರ್210- 10200, ರೂಬಿ ಟ್ಯಾಂಕ್ 1000 ಲೀ- 6000, ಪಿವಿಸಿ ಟ್ಯಾಂಕ್ ಕನೆಕ್ಟರ್ 32ಮೀಮೀ- 60, ಪಿವಿಸಿ ಪೈಪ್ 1" (32ಎಂ.ಎಂ.-10ಕೆಜಿ) ಏವೋನ್- 196, ಎಲ್‌ಬೋ 140ಮೀಮೀ- 145, ಡ್ರಿಪ್ ಜೆಟ್ -ಬ್ಲೂ 6 ಎಟಿಎಸ್- 6, ಎಲ್‌ಬೋ 90ಮಿಮಿ (3')- 75, ಡ್ರಿಪ್ ಪೈಪ್ 12ಮಿ.ಮಿ./ಮೀ.- 6, ಬೆಂಡ್ 45' (ಪುಶ್) 40ಮಿ.ಮಿ.- 14.

# ಯಕ್ಷಗಾನ ತಾಳಮದ್ದಲೆಯಿಂದ ಜ್ಞಾನ ವೃದ್ಧಿ: ವೆಂಕಟಾಚಲ ಭಟ್ಟ





● **ತತ್ವನಿಷ್ಠ, ಶಿರಸಿ:** ಪುರಾಣ ಕಥಿತವಾದ ಯಕ್ಷಗಾನ ತಾಳಮದ್ದಲೆಗಳು ನ್ಯಾಯ, ನೀತಿ, ಧರ್ಮವನ್ನು ಸಾರುವ ಜ್ಞಾನ ದಾಸೋಹಗಳಾಗಿವೆ ಎಂದು ವಿದ್ವಾನ್ ವೆಂಕಟಾಚಲ ಭಟ್ಟ ಸುಕರ್ಮ ಅಭಿಪ್ರಾಯಪಟ್ಟರು.

ಅವರು ಯಡಳ್ಳಿ ಸುಕರ್ಮದಲ್ಲಿ ಭಾಗೀರಥಿ ಮತ್ತು ಆರ್.ಟಿ. ಭಟ್ಟ ಕಬ್ಗಾಲ ಕುಟುಂಬದವರು ಏರ್ಪಡಿಸಿದ್ದ ಗಂಗಾ ಸಮಾರಾಧನೆ ನಿಮಿತ್ತ ವಸುಂಧರಾ ಸಮೂಹ ಸೇವಾ ಸಂಸ್ಥೆಯ ಸಂಯೋಜನೆಯಲ್ಲಿ ಜರುಗಿದ ತಾಳಮದ್ದಲೆ ಉದ್ಘಾಟಿಸಿ ಮಾತನಾಡಿ, ತಾಳಮದ್ದಲೆಯ ಮಾತುಗಳು ಮಂತ್ರವಾಗಿ ನಮ್ಮ ಸಂಸ್ಕೃತಿಯ ರಕ್ಷಣೆಗೆ ಪೂರಕವಾಗಿವೆ ಎಂದರು.

ಮುಖ್ಯ ಅತಿಥಿಗಳಾದ ಎಮ್.ಎಸ್. ಹೆಗಡೆ ಮಾತನಾಡಿ, ಬೌದ್ಧಿಕ ವಿಕಾಸಕ್ಕೆ ಪೂರಕವಾದ ತಾಳಮದ್ದಲೆಯಲ್ಲಿ ಹೆಚ್ಚು ಹೆಚ್ಚು ಮಕ್ಕಳು, ಶಿಕ್ಷಕರು ಭಾಗವಹಿಸುವಂತೆ ಪ್ರೇರಣೆ ನೀಡಲಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಪ್ರಾಚಾರ್ಯ ಆರ್.ಎಸ್. ಹೆಗಡೆ ಬೆಳ್ಳೆಕೇರಿ, ಉತ್ತಮ ವಿಧಾಯಕ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿರುವ ವಸುಂಧರಾ ಸಂಸ್ಥೆಯ ಕಾರ್ಯವನ್ನು ಶ್ಲಾಘಿಸಿದರು. ಸಂಸ್ಥೆಯ ಮುಖ್ಯಸ್ಥ ಆರ್.ಟಿ. ಭಟ್ಟ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಜಿ.ಆರ್. ಭಟ್ ಗುಳ್ಳಾಪುರ ನಿರೂಪಿಸಿದರು. ಕಿಶೋರ್ ಹೆಗಡೆ ಮತ್ತು ಡಾ. ಪ್ರಣವಕುಮಾರ ಭಟ್ಟ ಕಲಾವಿದರನ್ನು ಗೌರವಿಸಿದರು. ನಿರ್ದೇಶಕ ವಿಶ್ವೇಶ್ವರ ಭಟ್ ವಂದಿಸಿದರು.

ನಂತರ ನಡೆದ ಪಾದುಕಾ ಪ್ರದಾನ ತಾಳಮದ್ದಲೆಯಲ್ಲಿ ಪ್ರಸಿದ್ಧ ಭಾಗವತ ಶಂಕರ ಭಟ್ಟ ಬ್ರಹ್ಮೂರು ಮತ್ತು ಗಜಾನನ ಭಟ್ಟ ತೊಳಗೆರೆಯವರ ಸುಶ್ರಾವ್ಯವಾದ ದ್ವಂದ್ವ ಗಾಯನ ಮತ್ತು ನರಸಿಂಹ ಹೆಗಡೆ ಮೂರೂರು ಮತ್ತು ಗಜಾನನ ಹೆಗಡೆ ಕಂಚಿಕೈ ಇವರ ಮದ್ದಲೆ ವಾದನ ಗಜಾನನ ಹೆಗಡೆ ಸಾಂತೂರು ಇವರ ಚೆಂಡೆ ವಾದನ ಒಳಗೊಂಡ ಹಿಮ್ಮೇಳವು ರಂಜಿಸಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು.

ಮುಮ್ಮೇಳದಲ್ಲಿ ರಾಮನಾಗಿ ವಿ. ಮಹೇಶ್ ಭಟ್ಟ ಇಡುಗುಂದಿ, ಭಾರತೀಯನಾಗಿ ಆರ್.ಟಿ. ಭಟ್ಟ ಕಬ್ಗಾಲ, ವಸಿಷ್ಠನಾಗಿ ಎಮ್.ವಿ. ಹೆಗಡೆ ಅಮ್ಮಿಮನೆ, ಗುಹನಾಗಿ ನಾರಾಯಣ ಭಟ್ಟ ಬ್ರಹ್ಮೂರು, ಲಕ್ಷ್ಮಣನಾಗಿ ವಿಶ್ವೇಶ್ವರ ಭಟ್ ತೊರಗೋಡು, ಸೀತೆಯಾಗಿ ಗಣಪತಿ ಭಟ್ ಬ್ರಹ್ಮೂರು ಭಾಗವಹಿಸಿ ಉತ್ತಮ ಅರ್ಥಧಾರಿಕೆಯೊಂದಿಗೆ ಆಖ್ಯಾನವನ್ನು ಯಶಸ್ವಿಗೊಳಿಸಿದರು.

# ಪ್ರಮುಖ ಬೇಡಿಕೆ: ಡಿ. 6ಕ್ಕೆ ಸಮಾವೇಶ

## ಅಧಿವೇಶನದಲ್ಲಿ ಅರಣ್ಯವಾಸಿಗಳ ಸಮಸ್ಯೆ ಗಮನ ಸೆಳೆಯಲು ಯತ್ನ: ರವೀಂದ್ರ





● **ತತ್ವನಿಷ್ಠ, ಕಾರವಾರ:** ಅರಣ್ಯವಾಸಿಗಳ ಸಮಸ್ಯೆಗಳಿಗೆ ಸ್ಪಂದಿಸಿದ ಆರು ಪ್ರಮುಖ ಬೇಡಿಕೆಯ ಕುರಿತು ಮುಂಬರುವ ಚಳಿಗಾಲ ಅಧಿವೇಶನದಲ್ಲಿ ಅರಣ್ಯ ಭೂಮಿ ಹಕ್ಕಿಗೆ ಸಂಬಂಧಿಸಿದ ಪರಿಹಾರವನ್ನು ನಿರ್ಣಯಿಸಿ ಅರಣ್ಯವಾಸಿಗಳ ಪರ ನಿಲುವನ್ನು ಪ್ರಕಟಿಸಬೇಕು ಎಂದು ಡಿ. 6ರಂದು ಕಾರವಾರದಲ್ಲಿ ಜರುಗಲಿರುವ ಬೃಹತ್ ಸಮಾವೇಶದಲ್ಲಿ ಸರ್ಕಾರದ ಗಮನಕ್ಕೆ ತರಲಾಗುವುದು ಎಂದು ರಾಜ್ಯ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯ ಅಧ್ಯಕ್ಷ ರವೀಂದ್ರ ನಾಯ್ಕ ತಿಳಿಸಿದರು.

ಅವರು ಶುಕ್ರವಾರ ಕಾರವಾರ ಪತ್ರಿಕಾ ಭವನದಲ್ಲಿ ಡಿ. 6ರಂದು ಜರುಗಲಿರುವ ಅರಣ್ಯವಾಸಿಗಳ ಸಮಾವೇಶದ ಲಾಂಛನ ಬಿಡುಗಡೆಗೊಳಿಸಿ ಮಾತನಾಡಿದರು.

ಸಾಂದರ್ಭಿಕ ದಾಖಲೆ ಅಡಿಯಲ್ಲಿ ಅರಣ್ಯ ಭೂಮಿ ಹಕ್ಕು ನೀಡುವುದು. ಅಲ್ಲದೇ, ಈಗಿರುವ ಕಾನೂನು ಅಡಿಯಲ್ಲಿ ಈ ಹಿಂದೆ ಎಚ್.ಕೆ. ಪಾಟೀಲ್ ಮತ್ತು ಆರ್.ವಿ. ದೇಶಪಾಂಡೆಯವರು ಹಕ್ಕು ಪತ್ರ ನೀಡಿದ ಮಾನದಂಡದ ಅಡಿಯಲ್ಲಿ ಇನ್ನಿತರ ಅರಣ್ಯವಾಸಿಗಳಿಗೂ ಹಕ್ಕು ಪತ್ರ ನೀಡಬೇಕು. ಅರಣ್ಯ ಹಕ್ಕು ಕಾಯಿದೆ ಅಡಿಯಲ್ಲಿ ಅರ್ಜಿ ಪುನರ್ ಪರಿಶೀಲನೆ ಆಗುವವರೆಗೂ ಒಕ್ಕಲೆಬ್ಬಿಸುವ ಪ್ರಕ್ರಿಯೆ ಜರುಗಿಸಬಾರದು ಹಾಗೂ ಕಾನೂನು ಬಾಹಿರವಾಗಿ ಅರಣ್ಯವಾಸಿಗಳ ಮೇಲೆ ದೌರ್ಜನ್ಯ ನಿಯಂತ್ರಿಸಬೇಕು ಎಂದ ಅವರು, 1998ರಲ್ಲಿ 35 ಸಾವಿರ ಕುಟುಂಬಗಳ ಮೇಲೆ ದಾಖಲಿಸಿದ ಕ್ರಿಮಿನಲ್ ಪ್ರಕರಣಗಳ ಆಧಾರದ ಮೇಲೆ 27 ವರ್ಷಗಳ ನಂತರ ಒಕ್ಕಲೆಬ್ಬಿಸುವ ಪ್ರಕ್ರಿಯೆ ಜರುಗಿಸುವುದು ಕಾನೂನು ಬಾಹಿರ ಪ್ರಕ್ರಿಯೆ ಎಂದು ಘೋಷಿಸಲು ಬೇಡಿಕೆ ಪಟ್ಟಿಯಲ್ಲಿ ಸೇರಲ್ಪಟ್ಟಿದೆ ಎಂದರು.

1978ರ ಪೂರ್ವದ ಕೇಂದ್ರ ಸರ್ಕಾರ ಜಿಲ್ಲೆಯಲ್ಲಿ ಅನುಮತಿ ನೀಡಿದ 2513 ಪ್ರಕರಣ, ಎರಡು ಸಾವಿರದಷ್ಟು ಹಂಗಾಮಿ ಲಾಗಣಿ ಅತೀ ಶೀಘ್ರವಾಗಿ ಭೂಮಿ ಹಕ್ಕು ದೊರಕಿಸುವುದು ಹಾಗೂ ಅಸರ್ಮಕ ಜಿಪಿಎಸ್ ಮೇಲ್ಮನವಿಗೆ ಪುನರ್ ಜಿಪಿಎಸ್ ಮಾಡಲು ಸರ್ಕಾರ ನಿರ್ಧಾರಗೊಳಿಸುವುದು ಎಂಬ ಆರು ಪ್ರಮುಖ ಬೇಡಿಕೆಗಳನ್ನು ಸಮಾವೇಶದಲ್ಲಿ ಪ್ರಸ್ತಾಪಿಸಲಾಗುವುದು.

ಅರಣ್ಯವಾಸಿಗಳ ಸಮಸ್ಯೆಗಳ ಕುರಿತು ಮುಂಬರುವ ಬೆಳಗಾವಿ ಚಳಿಗಾಲ ಅಧಿವೇಶನದಲ್ಲಿ ಅರಣ್ಯವಾಸಿಗಳ ಸಮಸ್ಯೆಗಳ ಕುರಿತು ಚರ್ಚಿಸಿ ನಿರ್ಣಯ ತೆಗೆದುಕೊಳ್ಳಬೇಕು. ಹಾಗೂ ಅರಣ್ಯ ಭೂಮಿ ಹಕ್ಕು ಹೋರಾಟಗಾರರೊಂದಿಗೆ ಉನ್ನತ ಮಟ್ಟದ ಸಭೆ ಸಂಘಟಿಸಲು ಅವರು ಆಗ್ರಹಿಸಿದರು.

ಕಾನೂನು ಬಾಹಿರ ಮತ್ತು ಕಾನೂನಿಗೆ ವ್ಯತಿರಿಕ್ತವಾಗಿ ಅರ್ಜಿಗಳು ತಿರಸ್ಕಾರವಾಗುತ್ತಿರುವ ಕುರಿತು ಹಾಗೂ ಅರಣ್ಯ ಹಕ್ಕು ಕಾಯಿದೆ ಅರ್ಜಿ ಪರಿಶೀಲನೆಯಲ್ಲಿ ಇರುವಾಗಲೇ ಒಕ್ಕಲೆಬ್ಬಿಸುವ ಪ್ರಕ್ರಿಯೆ ಜರುಗುತ್ತಿರುವ ಬಗ್ಗೆ ಡಿ. 6ರಂದು ಜಿಲ್ಲಾದ್ಯಂತ ಆಗಮಿಸಿದ ಅರಣ್ಯವಾಸಿಗಳು ಜಿಲ್ಲಾಧಿಕಾರಿಗೆ ಬೃಹತ್ ಸಂಖ್ಯೆಯಲ್ಲಿ ಅರಣ್ಯವಾಸಿಗಳು ಆಕ್ಷೇಪಣಾ ಪತ್ರ ಸಲ್ಲಿಸಲಿದ್ದಾರೆ ಎಂದರು.

ಕುಮಟಾ ಅಧ್ಯಕ್ಷ ಮಂಜು ಮರಾಠಿ, ಅಂಕೋಲಾ ರಮಾನಂದ ನಾಯ್ಕ ಅಚವೆ, ಜಿಲ್ಲಾ ಸಂಚಾಲಕ ರಾಜೇಶ ನಾಯ್ಕ, ಸಂಚಾಲಕ ಅರವಿಂದ ಗೌಡ, ಅಮೋಸ್, ಯೋಗೇಂದ್ರ ಗೌಡ ಸೇರಿ ಮತ್ತಿತರರು ಇದ್ದರು.

## ಸುಡೊಕು 63

| | | | | | | | | |
|---|---|---|---|---|---|---|---|---|
| 7 | | 2 | 1 | | 6 | | | |
| | 5 | 4 | | | | | | |
| | 1 | 8 | | 4 | | | 3 | |
| | | | | | 3 | | | |
| | | 6 | 2 | 9 | 5 | | | 7 |
| | | | 4 | 6 | | | | 9 |
| 2 | | 5 | | | | 4 | | 1 |
| 4 | 9 | | | | | 8 | | 3 |
| | 6 | 3 | | | 4 | | 7 | 5 |

ಈ ಸುಡೊಕು ಸಂಖ್ಯಾಬಂಧದಲ್ಲಿರುವ ಎಲ್ಲ ಸಾಲುಗಳಲ್ಲಿ ಮತ್ತು ಕಂಬಗಳಲ್ಲಿ ಒಂದರಿಂದ ಒಂಬತ್ತರ ತನಕ ಅಂಕಿಗಳಿರಬೇಕು. ಪ್ರತಿ 3x3 ಬಾಕ್ಸ್‌ನಲ್ಲೂ ಒಂದರಿಂದ ಒಂಬತ್ತರೊಳಗಿನ ಅಂಕಿಗಳಿರಬೇಕು ಮತ್ತು ಯಾವುದೇ ಅಂಕಿ ಪುನರಾವರ್ತನೆ ಆಗಬಾರದು.

### ಸುಡೊಕು 62ರ ಉತ್ತರ

| | | | | | | | | |
|---|---|---|---|---|---|---|---|---|
| 9 | 7 | 5 | 8 | 2 | 4 | 1 | 6 | 3 |
| 2 | 8 | 4 | 1 | 3 | 6 | 7 | 5 | 9 |
| 3 | 1 | 6 | 7 | 9 | 5 | 8 | 4 | 2 |
| 8 | 4 | 3 | 6 | 1 | 9 | 5 | 2 | 7 |
| 7 | 5 | 2 | 4 | 8 | 3 | 6 | 9 | 1 |
| 1 | 6 | 9 | 5 | 7 | 2 | 4 | 3 | 8 |
| 6 | 9 | 7 | 2 | 5 | 8 | 3 | 1 | 4 |
| 5 | 2 | 8 | 3 | 4 | 1 | 9 | 7 | 6 |
| 4 | 3 | 1 | 9 | 6 | 7 | 2 | 8 | 5 |

# ಸಂಹಿತಾ ಮ್ಯೂಸಿಕ್ ಫೋರಮ್‌ನ ಸಂಗೀತ ಸಮ್ಮೇಳನ ಸಂಪನ್ನ



● **ತತ್ವನಿಷ್ಠ, ಶಿರಸಿ:** ನಗರದ ಸಂಹಿತಾ ಮ್ಯೂಸಿಕ್ ಫೋರಮ್ 16ನೇ ವಾರ್ಷಿಕ ಸಂಗೀತ ಸಮ್ಮೇಳನ ಸಂಸ್ಥೆಯ ವಿದ್ಯಾರ್ಥಿಗಳ ಹಾಗೂ ಅತಿಥಿ ಕಲಾವಿದರ ಕಾರ್ಯಕ್ರಮಗಳೊಂದಿಗೆ ನಡೆಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ ಗಾಯನ ವಾದನದ ಪ್ರತಿಭಾ ಪ್ರದರ್ಶನ ಜರುಗಿತು. ಪ್ರಾಧ್ಯಾಪಕಿ ಕಾವ್ಯಶ್ರೀ ಅನಂತ ಹೆಗಡೆ ತಮ್ಮ ಗಾಯನದಲ್ಲಿ ರಾಗ ಬೈರಾಗಿ ಹಾಗೂ ಭಕ್ತಿ ರಚನೆ ಭಾವಪೂರ್ಣವಾಗಿ ಪ್ರಸ್ತುತಪಡಿಸಿದರು. ಅನಂತ ಹೆಗಡೆ ತಬಲಾ, ಪ್ರಜ್ವಲ್ ಹೆಗಡೆ ಹಾರ್ಮೋನಿಯಂನಲ್ಲಿ ಸಹಕರಿಸಿದರು.

ಸಭಾ ಕಾರ್ಯಕ್ರಮದಲ್ಲಿ ಮಲೆನಾಡು ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆ ಕಾರ್ಯದರ್ಶಿ ಎಲ್.ಎಂ. ಹೆಗಡೆ ಗೋಳಿಕೊಪ್ಪ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮಕ್ಕಳು ಸಂಸ್ಕೃತಿ ಸಂಪ್ರದಾಯಗಳಿಂದ ದೂರ ಸರಿಯುತ್ತಿದ್ದು ಅಪಾಯಕಾರಿ ಜಂಕ್‌ಫುಡ್ ಹಾಗೂ ಮೊಬೈಲ್‌ನತ್ತ ಅತಿಯಾಗಿ ಆಕರ್ಷಿತರಾಗುತ್ತಿದ್ದರೆ, ಈ ಕುರಿತು ಹೆಚ್ಚಿನ ಜಾಗೃತಿ ಅವಶ್ಯ ಎಂದರು.

ಡಾ. ಯುವರಾಜ, ಡಾ. ಮಂಜುಳಾ, ಸಂಸ್ಥಾಪಕ ಪ್ರಾಚಾರ್ಯ ಅನಂತ ಹೆಗಡೆ ವಾಜಗಾರ, ಪ್ರಾಧ್ಯಾಪಕಿ ಕಾವ್ಯಶ್ರೀ ಹೆಗಡೆ ಪಾಲ್ಗೊಂಡಿದ್ದರು.

ಸಂಹಿತಾ ಮ್ಯೂಸಿಕ್ ಫೋರಮ್ ಅಧ್ಯಕ್ಷ ಸುಬ್ರಾಯ ಹೆಗಡೆ ಕುಪ್ಪನಮನೆ ಅಧ್ಯಕ್ಷತೆ ವಹಿಸಿದ್ದರು.

**ವಿಭಿನ್ನ ಕಾರ್ಯಕ್ರಮ:** ತಬಲಾ ಮಾಂತ್ರಿಕ ಉಸ್ತಾದ ಝಾಕೀರ್ ಹುಸೇನ್ ಸ್ಮರಣೆಯಲ್ಲಿ ಅನಂತ ಹೆಗಡೆ ವಾಜಗಾರ ನಿರ್ದೇಶಿಸಿದ ಅನುನಾದ ಶಾಸ್ತ್ರೀಯ ಗೀತ ವಾದ್ಯ ಸಂಯೋಜನೆ ಕೇಳುಗರಿಗೆ ಮುದ ನೀಡಿತು. ಸಂತೂರ್‌ನಲ್ಲಿ ದಯಾನಂದ ಹೆಗಡೆ ಕೋವೇಸರ, ಸಿತಾರನಲ್ಲಿ ಪ್ರಜ್ವಲ್ ಹೆಗಡೆ ತಟ್ಟೀಸರ, ಗಾಯನದಲ್ಲಿ ಕಾವ್ಯಶ್ರೀ ಅನಂತ ಹೆಗಡೆ ವಾಜಗಾರ, ನಿಧಿ ಅಡಿಗ ಅಕ್ಕಿಆಲೂರ, ತೇಜಸ್ವಿನಿ ಭಟ್ ಹೊಸ್ತೋಟ, ತಬಲಾದಲ್ಲಿ ವಿವೇಕ ಹೆಗಡೆ, ಶ್ರೀಧರ ಹೆಗಡೆ, ಪನ್ನಗ ಹೆಗಡೆ ಪಾಲ್ಗೊಂಡರು.

ಆಮಂತ್ರಿತ ಕಲಾವಿದೆ ವಸುಧಾ ಶರ್ಮ ಸಾಗರ ತಮ್ಮ ಗಾಯನದಲ್ಲಿ ರಾಗ ಪೂರಿಯಾ ಕಲ್ಯಾಣ ಹಾಗೂ ಭಜನ್ ಪ್ರಸ್ತುತ ಪಡಿಸಿದರು. ಗಣೇಶ ಗುಂಡ್ಕಲ್ ತಬಲಾ ಹಾಗೂ ಸಂವತ್ಸರ ಹಾರ್ಮೋನಿಯಂನಲ್ಲಿ ಸಹಕರಿಸಿದರು. ಸಂಸ್ಥೆಯ ಪ್ರಾಚಾರ್ಯ ಅನಂತ ಹೆಗಡೆ ವಾಜಗಾರ ಅವರ ತಬಲಾ ವಾದನದಲ್ಲಿ ಝಪ್ ತಾಲ ಅದ್ಭುತವಾಗಿ ಮೂಡಿಬಂತು. ರಶ್ಮಿ ಹೆಗಡೆ ಹಾಗೂ ಗಣೇಶ ಬಿಳೇಕಲ್ ನಿರೂಪಿಸಿದರು. ಗಜಾನನ ಹೆಗಡೆ ಪ್ರಾಸ್ತಾವಿಕವಾಗಿ ಮಾತನಾಡಿದರು.

## ತತ್ವನಿಷ್ಠ ವರದಿಗಾರರು

ಶಿರಸಿ-ಮಂಜುನಾಥ ಈರಗೊಪ್ಪ 8971124937
ಯಲ್ಲಾಪುರ-ಶ್ರೀಧರ ವೈದಿಕ 9483490345
ಸಿದ್ದಾಪುರ-ನಿತಿನ ಹೆಗಡೆ ಮುತ್ತಿಗೆ 8550855071
ಅಂಕೋಲಾ-ರಾಘು ಕಾಕರಮಠ 9449999775
ಭಟ್ಕಳ-ಆರ್.ಕೆ. ಭಟ್ಕಳ 9448221117
ಕುಮಟಾ-ಗಣೇಶ ಜೋಶಿ ಸಂಕೊಳ್ಳಿ 9482212898
ದಾಂಡೇಲಿ-ಅಕ್ಷಯ ಗೋಸಾವಿ 9663591069
ಬನವಾಸಿ-ಸುಧೀರ ನಾಯರ 9481608757
ಕಾರವಾರ-ಸುನೀಲ್ ಹಣಕೋಣ 9902355539

# ಡಿ. 2ರಂದು ಕಾರವಾರ ತಾಲೂಕು ಮಟ್ಟದ ಚದುರಂಗ ಸ್ಪರ್ಧೆ ಆಯೋಜನೆ

● **ತತ್ವನಿಷ್ಠ, ಕಾರವಾರ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಕಾರವಾರ ತಾಲೂಕು ಮಟ್ಟದ ಚದುರಂಗ ಸ್ಪರ್ಧೆಯನ್ನು ಡಿ. 2ರಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಹಬ್ಬುವಾಡ, ಕಾರವಾರದಲ್ಲಿ ಆಯೋಜಿಸಲಾಗಿದೆ.

ಈ ಪಂದ್ಯಾವಳಿಯಲ್ಲಿ ಭಾಗವಹಿಸುವ ಸ್ಪರ್ಧಾಳುಗಳು ಡಿ. 1ರಂದು ಸಂಜೆ 6 ಗಂಟೆಯೊಳಗಾಗಿ ಹೆಸರನ್ನು ನೋಂದಾಯಿಸಿಕೊಳ್ಳಬೇಕು.

ಸ್ಪರ್ಧೆಯಲ್ಲಿ ಭಾಗವಹಿಸುವ ಸ್ಪರ್ಧಾಳುಗಳು ಕಾರವಾರ ತಾಲೂಕಿನಲ್ಲಿ ವ್ಯಾಸಂಗ ಮಾಡುತ್ತಿರಬೇಕು. ಭಾಗವಹಿಸುವ ಸರ್ಧಾಳುಗಳು ಜನನ ಪ್ರಮಾಣ ಪತ್ರ ಮತ್ತು ಆಧಾರ ಕಾರ್ಡ್ ಜೆರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ತರಬೇಕು. ಸರ್ಧಾಳುಗಳು ಸ್ವತಹ ತಾವೇ ಚೆಸ್ ಬೋರ್ಡ್ ತರತಕ್ಕದ್ದು, ಒಂದು ಶಾಲೆಯಿಂದ ಒಂದರಿಂದ ಏಳನೇ ತರಗತಿಯ ಬಾಲಕರು 1 ಬಾಲಕಿಯರು 1 ಹಾಗೂ ಎಂಟರಿಂದ ಹತ್ತನೇ ತರಗತಿಯ ಬಾಲಕರು 1 ಬಾಲಕಿಯರು 1 ಭಾಗವಹಿಸಲು ಮಾತ್ರ ಅವಕಾಶ.

ಭಾಗವಹಿಸುವ ಸ್ಪರ್ಧಾಳುಗಳು ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ ನೀಡಲಾಗುವುದಿಲ್ಲ. ಒಂದರಿಂದ ಏಳನೇ ತರಗತಿಯ ವಿಜೇತ 3 ಬಾಲಕರು ಮತ್ತು 3 ಬಾಲಕಿಯರು ಹಾಗೂ ಎಂಟರಿಂದ 10ನೇ ತರಗತಿಯ 3 ಬಾಲಕರು ಮತ್ತು 3 ಬಾಲಕಿಯರನ್ನು ಜಿಲ್ಲಾ ಮಟ್ಟಕ್ಕೆ ಆಯ್ಕೆ ಮಾಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಅಥ್ಲೆಟಿಕ್ ತರಬೇತುದಾರ ಶಿವಾನಂದ ನಾಯ್ಕ ಮೊ.ನಂ.: 8722516856 ಹಾಗೂ ಕಚೇರಿ ಮೊಬೈಲ್ ಸಂ.: 9480886551ನ್ನು ಸಂಪರ್ಕಿಸಬಹುದೆಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

## ಹಸಿ ಅಡಿಕೆ ಟೆಂಡರ್

| | ಟಿಎಸ್‌ಎಸ್ | | ಟಿಎಂಎಸ್ | |
|---|---|---|---|---|
| ಹಸಿ ಅಡಿಕೆ | 5710 | 6405 | 4499 | 6499 |
| ಗೋಟು ಅಡಿಕೆ | 6361 | 7429 | 5899 | 7699 |
| ಬತ್ತಡಿಕೆ | 5609 | 5609 | ------ | ----- |
| ಸಿಪ್ಪೆ ಚಾಲಿ | ------ | ----- | 8469 | 9179 |

### ಕದಂಬ ಮಾರ್ಕೆಟಿಂಗ್ ಶಿರಸಿ

| | | |
|---|---|---|
| ಹಸಿ ಅಡಿಕೆ | 5918 | 6410 |
| ಗೋಟು ಅಡಿಕೆ | 6750 | 7301 |
| ಬತ್ತಡಿಕೆ | 8888 | 16389 |

# ಮರುಜೀವ ಪಡೆದ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆ

● **ತತ್ವನಿಷ್ಠ, ಸಿದ್ದಾಪುರ:** ಬಹಳ ದಿನಗಳಿಂದ ಕೆಟ್ಟು ಹೋಗಿದ್ದ ಪಟ್ಟಣದ ಪೊಲೀಸ್ ಠಾಣೆಯ ಸ್ಥಿರ ದೂರವಾಣಿ (ಲ್ಯಾಂಡ್ ಲೈನ್)ಯನ್ನು ಸರಿಪಡಿಸಲಾಗಿದೆ. ಸ್ಥಿರ ದುರವಾಣಿ ಕೆಟ್ಟು ಹೋಗಿ ಸಾರ್ವಜನಿಕರಿಗೆ ಆಗುತ್ತಿದ್ದ ತೊಂದರೆಯ ಕುರಿತು ತತ್ವನಿಷ್ಠ ವರದಿ ಪ್ರಕಟಿಸಿದ ಬೆನ್ನಲ್ಲೇ ಎಚ್ಚೆತ್ತ ಸಂಬಂಧಪಟ್ಟ ಅಧಿಕಾರಿಗಳು, ಫೋನ್ ಕೆಲಸ ನಿರ್ವಹಿಸುವಂತೆ ಮಾಡಿದ್ದಾರೆ.

ತತ್ವನಿಷ್ಠ ಫಲಶ್ರುತಿ


ಕಳೆದ ಕೆಲವು ದಿನಗಳಿಂದ ಸಿದ್ದಾಪುರ ಪೊಲೀಸ್ ಠಾಣೆಯ ಅಧಿಕೃತ ದೂರವಾಣಿ ಸಂಖ್ಯೆ 08389-230283 ಸಂಪರ್ಕಕ್ಕೆ ಸಿಗದೆ, 'ತಾತ್ಕಾಲಿಕವಾಗಿ ಸೇವೆಯಲ್ಲಿಲ್ಲ' ಎಂಬ ಸಂದೇಶ ಬರುತ್ತಿತ್ತು. ಇದರಿಂದಾಗಿ ಗ್ರಾಮೀಣ ಭಾಗದ ಜನರು ಹಾಗೂ ತುರ್ತು ಸೇವೆ ಬಯಸುವ ಸಾರ್ವಜನಿಕರು ಠಾಣೆಯನ್ನು ಸಂಪರ್ಕಿಸಲು ಪರದಾಡುವಂತಾಗಿತ್ತು. ಈ ಕುರಿತು ಪತ್ರಿಕೆಯು ವರದಿ ಪ್ರಕಟಿಸಿ, ಇಲಾಖೆಯ ಗಮನ ಸೆಳೆದಿತ್ತು.ಇದೀಗ ಠಾಣೆಯ ದೂರವಾಣಿ ಸಾರ್ವಜನಿಕರ ಕರೆಗಳಿಗೆ ಲಭ್ಯವಾಗುತ್ತಿದೆ.

## ಪ್ರತಿಭಾ ಕಾರಂಜಿ, ಕಲೋತ್ಸವ

● **ತತ್ವನಿಷ್ಠ, ಕಾರವಾರ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಕ್ಷೇತ್ರ ಸಂಪನ್ಮೂಲ ಕೇಂದ್ರ, ಕಾರವಾರ ಇವರ ಸಂಯುಕ್ತಾಶ್ರಯದಲ್ಲಿ ಕಾರವಾರ ತಾಲೂಕಾ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವವನ್ನು ಡಿ.1 ರಂದು ಬೆಳಗ್ಗೆ 10 ಗಂಟೆಗೆ ಸೇಂಟ್ ಮೈಕಲ್ ಪ್ರೌಢಶಾಲೆ ಕಾರವಾರದಲ್ಲಿ ಹಮ್ಮಿಕೊಳ್ಳಲಾಗಿದೆ. ಸತೀಶ ಕೆ. ಸೈಲ್ ಉದ್ಘಾಟಿಸಲಿದ್ದು, ವಿಧಾನ ಪರಿಷತ್ ಸದಸ್ಯ ಗಣಪತಿ ಡಿ.ಉಳ್ವೇಕರ ಅಧ್ಯಕ್ಷತೆ ವಹಿಸಲಿದ್ದಾರೆ.

### ಪ್ರಗತಿ ಪರಿಶೀಲನಾ ಸಭೆಯಲ್ಲಿ ಡಾ. ತಿಪ್ಪೇಸ್ವಾಮಿ ಕೆ.ಟಿ. ಪ್ರಶಂಸೆ

# ಮಕ್ಕಳ ರಕ್ಷಣಾ ನೀತಿ ಅನುಷ್ಠಾನ: ಉತ್ತರ ಕನ್ನಡ ಜಿಲ್ಲೆ ಮಾದರಿ



● **ತತ್ವನಿಷ್ಠ, ಕಾರವಾರ:** ರಾಜ್ಯ ಮಕ್ಕಳ ರಕ್ಷಣಾ ನೀತಿ 2016 ಅನುಷ್ಠಾನದಲ್ಲಿ ರಾಜ್ಯದಲ್ಲಿಯೇ ಉತ್ತರ ಕನ್ನಡ ಜಿಲ್ಲೆ ಮಾದರಿಯಾಗಿದೆ ಎಂದು ರಾಜ್ಯ ಮಕ್ಕಳ ರಕ್ಷಣಾ ಆಯೋಗದ ಸದಸ್ಯ ಡಾ. ತಿಪ್ಪೇಸ್ವಾಮಿ ಕೆ.ಟಿ. ಹೇಳಿದರು.

ಅವರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ-2009ರ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಕ್ಕಳ ರಕ್ಷಣಾ ನೀತಿ-2016 ಅನುಷ್ಠಾನದಲ್ಲಿ ಉತ್ತರ ಕನ್ನಡ ಜಿಲ್ಲೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಮಕ್ಕಳಿಗೆ ಗುಣಮಟ್ಟದ ಕಲಿಕೆಯ ಜೊತೆ ಮಕ್ಕಳ ಸುರಕ್ಷತೆಯೂ ಅಷ್ಟೇ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಮಕ್ಕಳ ರಕ್ಷಣಾ ನೀತಿ-2016 ಪರಿಣಾಮಕಾರಿ ಅನುಷ್ಠಾನಕ್ಕೆ ಎಲ್ಲಾ ಹಂತದ ಅಧಿಕಾರಿಗಳು ಪ್ರಯತ್ನಿಸಬೇಕು. ಸರ್ಕಾರಿ, ಖಾಸಗಿ ಸೇರಿದಂತೆ ವಿವಿಧ ಇಲಾಖೆಗಳ ಅಡಿ ಕಾರ್ಯನಿರ್ವಹಿಸುವ ಶಾಲೆಗಳಲ್ಲಿ ಕಡ್ಡಾಯವಾಗಿ ಮಕ್ಕಳ ಸುರಕ್ಷತಾ ಸಮಿತಿ ರಚನೆ ಮಾಡಬೇಕು ಎಂದರು.

ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ 2009 ಅಡಿಯಲ್ಲಿ ಮಕ್ಕಳ ಶಿಕ್ಷಣ ಸಮಸ್ಯೆಯ ಕುರಿತು ಆರ್.ಟಿ.ಇ. ದೂರು ಪ್ರಾಧಿಕಾರ ರಚಿಸಿ, ದೂರು ಯಾರಿಗೆ ನೀಡಬೇಕು ಎಂಬುದರ ಕುರಿತು ದೂರು ಪ್ರಾಧಿಕಾರದ ಮುಖ್ಯಸ್ಥರ ಪದನಾಮ, ದೂರವಾಣಿ ಸಂಖ್ಯೆಯುಳ್ಳ ಮಾಹಿತಿ ಫಲಕವನ್ನು ಎಲ್ಲಾ ಶಾಲೆಯ ಹಾಗೂ ವಿಶೇಷವಾಗಿ ಅನುದಾನ ರಹಿತ ಶಾಲೆಯ ಮುಖ್ಯ ಶಿಕ್ಷಕರ ಕೊಠಡಿಯಲ್ಲಿ ಅಳವಡಿಸಬೇಕು. ಇದರ ಜತೆಗೆ ಮಕ್ಕಳ ರಕ್ಷಣಾ ನೀತಿ, ಮಕ್ಕಳ ರಕ್ಷಣಾ ಘಟಕ, ಮಕ್ಕಳ ಸಹಾಯವಾಣಿ, ಪೊಲೀಸ್ ಇಲಾಖೆಯ ಪದನಾಮ ಹಾಗೂ ದೂರವಾಣಿ ಸಂಖ್ಯೆ ಹಾಗೂ ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯ ಫಲಕ ಕಡ್ಡಾಯವಾಗಿ ಪ್ರದರ್ಶಿಸಿಸಬೇಕು ಇದರ ಬಗ್ಗೆ ಅಧಿಕಾರಿಗಳು ಸೂಕ್ತ ಕ್ರಮ ವಹಿಸಬೇಕು ಎಂದರು.

ಶಾಲೆ ಬಿಟ್ಟ ಮಕ್ಕಳು ಮಕ್ಕಳು ಯಾವ ಕಾರಣಕ್ಕೆ ಶಾಲೆ ಬಿಟ್ಟಿದ್ದಾರೆ ಎಂಬದುರ ಕುರಿತು ನಿರ್ದಿಷ್ಟ ಕಾರಣ ಗುರುತಿಸಿ ರಚನಾತ್ಮಕ ಪರಿಹಾರ ನೀಡಬೇಕು. ಶಾಲೆ ಬಿಟ್ಟ ಮಕ್ಕಳ ತಾಲೂಕುವಾರು ಮತ್ತು ಪಂಚಾಯತವಾರು ಪಟ್ಟಿ ತಯಾರಿಸಿ ಪ್ರತಿ 3 ತಿಂಗಳಿಗೊಮ್ಮೆ ನಡೆಯುವ ಸಿಡಬ್ಲೂಸಿ ಸಭೆಯಲ್ಲಿ ಚರ್ಚಿಸಿ ಪರಿಹಾರ ಕಂಡುಕೊಳ್ಳಬೇಕು ಎಂದರು.

ಪಂಚಾಯತ ರಾಜ್ ವ್ಯವಸ್ಥೆಯಲ್ಲಿ ಪ್ರತಿಯೊಂದು ಗ್ರಾಮ ಪಂಚಾಯತಗಳಲ್ಲಿ ಮಹಿಳಾ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿಯಿದ್ದು, ಈ ಸಮಿತಿಯಲ್ಲಿ ಮುಖ್ಯೋಪಾಧ್ಯಾಯರು ಸದಸ್ಯರಾಗಿದ್ದು, ಪ್ರತಿ 3 ತಿಂಗಳಿಗೊಮ್ಮೆ ಸಭೆಯು ಕಡ್ಡಾಯವಾಗಿ ನಡೆಯಬೇಕು. ಈ ಬಗ್ಗೆ ಶಿಕ್ಷಣ ಇಲಾಖೆ ಇಲಾಖೆಯ ಅಧಿಕಾರಿಗಳು ಗಮನಹರಿಸಬೇಕು. ಪಂಚಾಯತ ರಾಜ್ ಮತ್ತು ನಗರ ಸ್ಥಳಿಯ ಸಂಸ್ಥೆಯ ಅಧಿಕಾರಿಗಳಿಗೆ ತರಬೇತಿ ನೀಡಲು ಕ್ರಮ ಕೈಗೊಳ್ಳಬೇಕು ಎಂದರು.

ತರೆದ ಮನೆ ಕಾರ್ಯಕ್ರಮವನ್ನು ಪ್ರತಿ ಗುರುವಾರ 40 ಮಕ್ಕಳ ಪೊಲೀಸ್ ಠಾಣೆಗೆ ಕರೆತಂದು, ಪೊಲೀಸ್ ಮತ್ತು ಕಾನೂನು ವ್ಯವಸ್ಥೆಯ ಎಲ್ಲಾ ಶಾಲೆಗಳ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಬೇಕು. ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಜತೆಗೆ ಗುಣಮಟ್ಟದ ಆಹಾರ ಒದಗಿಸಲು ತಿಳಿಸಿದರು.

ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಸಂದರ್ಭದಲ್ಲಿ ಮುಂಜಾಗ್ರತ ಕ್ರಮವಾಗಿ ಪೊಲೀಸ್ ವೆರಿಫಿಕೇಶನ್ ಕಡ್ಡಾಯವಾಗಿ ಮಾಡಬೇಕು. ಅನಧಿಕೃತವಾಗಿ ಕೋಚಿಂಗ್ ಸೆಂಟರ್‌ಗಳಿದ್ದರೆ ನೋಟಿಸ್ ನೀಡಬೇಕು ಹಾಗೂ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಕೋಚಿಂಗ್ ಸೆಂಟರ್ ನಡೆಸಲು ಕಡ್ಡಾಯವಾಗಿ ಅನುಮತಿ ಪಡೆಯಬೇಕು ಎಂದರು.

ಮಿಷನ್ ವಾತ್ಸಲ್ಯ ಯೋಜನೆ ಅಡಿಯಲ್ಲಿ ಸಂಕಷ್ಟದಲ್ಲಿರುವ ಪ್ರತಿ ಮಗುವಿಗೆ ಪ್ರತಿ ಮಾಹೆ 4000 ರೂ. ಆರ್ಥಿಕ ನೆರವು ನೀಡಲು ಅವಕಾಶವಿದ್ದು, ಜೈವಿಕ ಪೋಷಕರಿಂದ ಬೇರ್ಪಟ್ಟ ಮಕ್ಕಳ ಹಾಗೂ ಏಕ ಪೋಷಕರ ಮಕ್ಕಳ ಸಮೀಕ್ಷೆ ಮಾಡಿ, ವರದಿ ನೀಡಲು ತಿಳಿಸಿದರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸೋನಲ್ ಐಗಳ, ಶಾಲಾ ಮತ್ತು ಸಾಕ್ಷರತಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಲತಾ ನಾಯಕ, ಡಿ.ಆರ್. ನಾಯ್ಕ, ಡಯಟ್ ಪ್ರಿನ್ಸಿಪಾಲ್ ಎನ್.ಆರ್. ಹೆಗಡೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರು, ಕುಮಾರ, ಕೇತ್ರ ಶಿಕ್ಷಣಾಧಿಕಾರಿಗಳು, ಜಿಲ್ಲಾ ಯೋಜನಾ ಉಪ ಸಮನ್ವಯ ಅಧಿಕಾರಿ, ಅಕ್ಷರ ದಾಸೋಹದ ಸಹಾಯಕ ನಿರ್ದೇಶಕರು, ಇತರರು ಉಪಸ್ಥಿತರಿದ್ದರು.

# ದೇವಾಲಯದ ಜೀರ್ಣೋದ್ಧಾರ: ವಿವಿಧ ಕಾರ್ಯಕ್ರಮ



● **ತತ್ವನಿಷ್ಠ, ಭಟ್ಕಳ:** ನಗರದ ಬೋಯಿರಕೇರಿಯಲ್ಲಿನ ಪುರಾತನ ಶಿವ ದೇವಾಲಯದ ಜೀರ್ಣೋದ್ಧಾರದ ಪ್ರಯುಕ್ತ ಶ್ರೀ ದೇವರ ಕಲಾ ಸಂಕೋಚ ಹಾಗೂ ಬಾಲಾಲಯದಲ್ಲಿ ಶ್ರೀ ದೇವರ ಪ್ರತಿಷ್ಠಾಪನೆಯ ಧಾರ್ಮಿಕ ಕಾರ್ಯಕ್ರಮ ಜರುಗಿತು.

ಗೋಕರ್ಣದ ವೇದಮೂರ್ತಿ ಶ್ರೀನಿವಾಸ ಅಡಿಗ ಅವರ ಆಚಾರ್ಯತ್ವದಲ್ಲಿ ದೇವಸ್ಥಾನದ ಅರ್ಚಕ ರಾಘವೇಂದ್ರ ಭಟ್ಟ ಇವರ ನೇತೃತ್ವದಲ್ಲಿ ವಿವಿಧ ಧಾರ್ಮಿಕ ಹೋಮ ಹವನಗಳು ನಡೆದವು. ನಂತರ ಶ್ರೀದೇವರನ್ನು ಬಾಲಾಲಯದಲ್ಲಿ ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ದೇವಸ್ಥಾನದ ಟ್ರಸ್ಟಿಯಲ್ಲೋರ್ವರಾದ ಚಂದ್ರಹಾಸ ಭಟ್ಟ ಮೂಡಭಟ್ಕಳ ಇವರು ದೇವಾಲಯದ ಜೀರ್ಣೋದ್ದಾರಕ್ಕೆ 51,111 ರೂ. ಗಳನ್ನು ದೇಣಿಗೆಯಾಗಿ ನೀಡಿದರು.

ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷ ಗೋವಿಂದ ನಾಯ್ಕ ಮಾತನಾಡಿ ಅತ್ಯಂತ ಪುರಾತನವಾದ ಶಿವನ ದೇವಾಲಯ ಜೀರ್ಣಾವಸ್ಥೆಯಲ್ಲಿ ಇವುದನ್ನು ಮನಗಂಡು ವಿವಿಧ ಸಮಾಜದ ಪ್ರಮುಖ ಭಕ್ತರ ಒಂದು ಸಮಿತಿಯನ್ನು ಮಾಡಿಕೊಂಡು ಅಷ್ಟಮಂಗಳ ಪ್ರಶ್ನೆಯಲ್ಲಿಟ್ಟು ದೇವಸ್ಥಾನದ ಜೀರ್ಣೋಧ್ದಾರಕ್ಕೆ ಮುಂದಡಿ ಇಟ್ಟಿದ್ದೇವೆ. ಅಂದಾಜು 3 ಕೋಟಿ ರೂ. ವೆಚ್ಚದಲ್ಲಿ ದೇವಸ್ಥಾನವನ್ನು ಸಂಪೂರ್ಣ ಶಿಲಾಮಯವಾಗಿ ನಿರ್ಮಾಣ ಮಾಡಲು ತೀರ್ಮಾನಿಸಿದ್ದು ಭಕ್ತರ, ಸಾರ್ವಜನಿಕರ ಬಹುದೊಡ್ಡ ಸಹಕಾರ ಅಗತ್ಯವಾಗಿದೆ ಎಂದರು. ಭಗವಂತನ ಪ್ರೇರಣೆಯಿಂದ ಹಲವು ಭಕ್ತರು ಈ ಕಾರ್ಯಕ್ಕೆ ಈಗಾಗಲೇ ದೇಣಿಗೆ ನೀಡಲು ಮುಂದೆ ಬಂದಿದ್ದಾರೆ ಎಂದರು.

ಈ ಸಂದರ್ಭದಲ್ಲಿ ದೇವಸ್ಥಾನದ ಆಡಳಿತ ಮಂಡಳಿಯ ಪ್ರಮುಖರಾದ ಮಳ್ಳಾ ನಾಯ್ಕ, ಕೃಷ್ಣ ನಾಯ್ಕ, ಉದಯ ಬಸ್ರೂರು, ನಾಗರಾಜ ಶೇಟ, ವಿಠ್ಠಲ್ ನಾಯ್ಕ, ಕೃಷ್ಣ ದೊಮ್ಮನಮನೆ, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಲಚ್ಮಯ್ಯ ನಾಯ್ಕ, ಶ್ರೀಕಾಂತ ನಾಯ್ಕ, ಮನಮೋಹನ ನಾಯ್ಕ, ರಾಮಚಂದ್ರ ನಾಯ್ಕ, ಪಾಂಡುರಂಗ ನಾಯ್ಕ, ವಿನಾಯಕ ಬಸ್ರೂರು, ಗಣೇಶ ನಾಯ್ಕ, ಮಂಜುನಾಥ ನಾಯ್ಕ ಮುಂತಾದವರು ಉಪಸ್ಥಿತರಿದ್ದರು.

## ಸಿಎ ಸಾಧನೆ: ಧನ್ಯಾಗೆ ಸನ್ಮಾನ



● **ತತ್ವನಿಷ್ಠ, ಸಿದ್ದಾಪುರ:** ನಾಗರಕಟ್ಟಾ ವಿಭಾಗದ ಶ್ರೀ ಕ್ಷೇತ್ರ ಪಾಲ ಶ್ರೀ ನಾಗದೇವತಾ ಹಾಗೂ ಶ್ರೀ ಚೌಡೇಶ್ವರಿ ದೇವರ 16ನೆಯ ವಾರ್ಷಿಕ ವರ್ಧಂತಿ ಮಹೋತ್ಸವ ಹಾಗೂ ಚಂಪಾ ಷಷ್ಠಿ, ಕಾರ್ತಿಕ ದೀಪೋತ್ಸವ ಸಮಾರಂಭ ಇತ್ತೀಚಿಗೆ ನಡೆಯಿತು.

ಕಾರ್ಯಕ್ರದಲ್ಲಿ ಸಿ.ಎ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದು ಉನ್ನತ ಹುದ್ದೆಯಲ್ಲಿರುವ ಧನ್ಯಾ ದಾಮೋದರ ಶಾನಭಾಗ ಇವರನ್ನು ಶ್ರೀ ನಾಗದೇವತಾ ಮಹಿಳಾ ಮಂಡಳಿ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ನಾಗದೇವತಾ ಸಮಿತಿಯ ಹಿರಿಯ ಸದಸ್ಯರು, ಪದಾಧಿಕಾರಿಗಳು, ಮಹಿಳಾ ಮಂಡಳಿಯ ಸದಸ್ಯರು, ಕುಟುಂಬ ವರ್ಗದವರು ಉಪಸ್ಥಿತರಿದ್ದರು.

## ರಾಜ್ಯ ಮಟ್ಟಕ್ಕೆ ಆಯ್ಕೆ

● **ತತ್ವನಿಷ್ಠ, ಶಿರಸಿ:** ಶ್ರೀ ಸ್ವರ್ಣವಲ್ಲಿ ಮಹಾ ಸಂಸ್ಥಾನದಿಂದ ಯಲ್ಲಾಪುರದಲ್ಲಿ ನಡೆಸಿದ ಜಿಲ್ಲಾ ಮಟ್ಟದ ಭಗವದ್ಗೀತಾ ಭಾಷಣ ಸ್ಪರ್ಧೆಯಲ್ಲಿ ಹೆಗಡೆಕಟ್ಟಾದ ಗಜಾನನ ಸೆಕೆಂಡರಿ ಸ್ಕೂಲ್‌ನ ವಿದ್ಯಾರ್ಥಿನಿ ಭುವನಾ ಮಂಜುನಾಥ ಹೆಗಡೆ ಯಡಳ್ಳಿ ಭಾಗವಹಿಸಿ, ದ್ವಿತೀಯ ಸ್ಥಾನ ಪಡೆದು ಶಿವಮೊಗ್ಗದಲ್ಲಿ ನಡೆಯಲಿರುವ ರಾಜ್ಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾಳೆ.



## ತರಬೇತುದಾರರ ಆಯ್ಕೆಗೆ ಅರ್ಜಿ

● **ತತ್ವನಿಷ್ಠ, ಕಾರವಾರ:** ವೀರ ಬಹದ್ದೂರ ಹೆಂಜಾ ನಾಯ್ಕ ಸೇನಾ ಆಯ್ಕೆ ಪೂರ್ವ ತರಬೇತಿ ಶಾಲೆ ಮಾಜಾಳಿ, ಕಾರವಾರ 2025-26ನೇ ಸಾಲಿನ 2ನೇ ಬ್ಯಾಚ್‌ಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ಸೇನಾ ಆಯ್ಕೆ ಕುರಿತು ಲಿಖಿತ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ನೀಡಲು ತರಬೇತುದಾರರ ಆಯ್ಕೆಗಾಗಿ ಅರ್ಹ ತರಬೇತಿ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಸೇನಾ ಆಯ್ಕೆ ಪೂರ್ವ ತರಬೇತಿ ಹಾಗೂ ಪೊಲೀಸ್ ಇಲಾಖೆಯ ನೇಮಕಾತಿಗಾಗಿ ಅಭ್ಯರ್ಥಿಗಳಿಗೆ ತರಬೇತಿ ನೀಡಿ, ಅನುಭವ ಹೊಂದಿರುವವರು ಕಚೇರಿಯನ್ನು ಸಂಪರ್ಕಿಸಿ, ನಮೂನೆಯನ್ನು ಪಡೆದು, ಅರ್ಜಿಗಳನ್ನು ಮುಚ್ಚಿದ ಲಕೋಟೆಗಳಲ್ಲಿ ಡಿ. 2ರಂದು ಸಂಜೆ 4.30 ಗಂಟೆಯೊಳಗಾಗಿ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ. ಉತ್ತರ ಕನ್ನಡ ಜಿಲ್ಲಾಧಿಕಾರಿಗಳ ಕಚೇರಿ ಸಂಕೀರ್ಣ, ನೆಲಮಹಡಿ ಕೊಠಡಿ ಸಂಖ್ಯೆ.: 1 ಕಾರವಾರ 581301 ಕಾರ್ಯಾಲಯಕ್ಕೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ :08382-226588 ಕಚೇರಿ ಅವಧಿಯಲ್ಲಿ ಸಂಪರ್ಕಿಸುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಜ್ಯಮಟ್ಟಕ್ಕೆ ಆಯ್ಕೆ

● **ತತ್ವನಿಷ್ಠ, ಕುಮಟಾ :** 2025-26 ನೇ ಶೈಕ್ಷಣಿಕ ವರ್ಷದ ವಿಭಾಗ ಮಟ್ಟದ ಪದವಿಪೂರ್ವ ವಿದ್ಯಾರ್ಥಿಗಳ ಸಾಂಸ್ಕೃತಿಕ ಸ್ಪರ್ಧೆ ಹುಬ್ಬಳ್ಳಿಯ ಕೆ.ಎಲ್.ಇ ಪ್ರೇರಣ ಪದವಿಪೂರ್ವ ಕಾಲೇಜಿನಲ್ಲಿ ನಡೆದಿದ್ದು, ಕೆನರಾ ಎಕ್ಸಲೆನ್ಸ್ ಕಾಲೇಜು ಗೋರೆಯ ಪ್ರಥಮ ಪಿಯುಸಿ ವಿದ್ಯಾರ್ಥಿನಿ ಸ್ವಸ್ತಿ ಎಮ್. ಭಟ್ಟ ಕನ್ನಡ ಚರ್ಚಾ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದು ರಾಜ್ಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾಳೆ.



# ನಮ್ಮ ಅಸ್ಮಿತೆ ಕಾಪಾಡುವುದು ಎಲ್ಲರ ಜವಾಬ್ದಾರಿ

### ರಾಜ್ಯೋತ್ಸವ-ನಿತ್ಯೋತ್ಸವ | ಸಾಲುಮರದ ತಿಮ್ಮಕ್ಕನವರಿಗೆ ಭಾವನಮನ, ಸಂಗೀತ ಕಾರ್ಯಕ್ರಮ



● **ತತ್ವನಿಷ್ಠ, ಶಿರಸಿ:** ನೆಲ, ಜಲ, ನಾಡು-ನುಡಿಗಳ ಅಸ್ಮಿತೆಯನ್ನು ಕಾಪಾಡಿಕೊಂಡು ಹೋಗುವುದು ಎಲ್ಲರ ಜವಾಬ್ದಾರಿ ಎಂದು ಸಹಾಯಕ ಆಯುಕ್ತೆ ಕೆ.ವಿ. ಕಾವ್ಯಾರಾಣಿ ಹೇಳಿದರು.

ಅವರು ಭಾರತ ಸೇವಾದಳದ ಸಭಾಂಗಣದಲ್ಲಿ ಕದಂಬ ಕಲಾ ಸಾಂಸ್ಕೃತಿಕ ಪರಿಷತ್ತಿನ ಸಾರಥ್ಯದಲ್ಲಿ ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಸಹಭಾಗಿತ್ವದಲ್ಲಿ ಕದಂಬ ಪರಿಷತ್ತಿನ 14ನೇ ವರ್ಷದ ವಾರ್ಷಿಕೋತ್ಸವದ ಪ್ರಯುಕ್ತ ಆಯೋಜಿಸಿದ್ದ ರಾಜ್ಯೋತ್ಸವ-ನಿತ್ಯೋತ್ಸವ ಹಾಗೂ ಸಾಲುಮರದ ತಿಮ್ಮಕ್ಕನವರಿಗೆ ಭಾವನಮನ ಸಂಗೀತ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ನೆಲದ ಅಸ್ಮಿತೆಯನ್ನು ಜಾಗೃತಗೊಳಿಸುವ ಶ್ಲಾಘನೀಯ ಕಾರ್ಯವಿಂದು ಕದಂಬ ಕಲಾ ಸಾಂಸ್ಕೃತಿಕ ಪರಿಷತ್ತಿನಿಂದ ನೆರವೇರಿದೆ. ಸಂಗೀತ-ಸಾಹಿತ್ಯದ ಮೂಲಕ ಕನ್ನಡ ನಾಡಿನ ಘನತೆಯನ್ನು ಎಲ್ಲೆಡೆ ಪಸರಿಸುವ ಹಾಗೂ ಮುಂದಿನ ತಲೆಮಾರಿಗೂ ಅದನ್ನ ಉಳಿಸಿ ಬೆಳೆಸಿಕೊಂಡು ಹೋಗುವ ನಿಟ್ಟಿನಲ್ಲಿ ಕದಂಬ ತಂಡ ಜಾಗೃತಿ ಮೂಡಿಸುತ್ತಿರುವುದು ಶ್ಲಾಘನೀಯ. ನಾವೆಲ್ಲರೂ ಪರಿಸರ ಹಾಗೂ ನಾಡಿನ ರಕ್ಷಕರಾಗಬೇಕು ಎಂದು ಹೇಳಿದರು.

ಕದಂಬ ರತ್ನಾಕರರ ರಚನೆಯ ಮಾರಿಕಾಂಬಾ ದೇವಿಯ ಪ್ರಾರ್ಥನೆಗೆ ನಿಶಾ ನಾಯ್ಕ ಯಕ್ಷಹೆಜ್ಜೆಯೊಂದಿಗೆ ಕಾರ್ಯಕ್ರಮ ವಿಶೇಷವಾಗಿ ಪ್ರಾರಂಭಗೊಂಡಿತು. ನಂತರ ಸಾಲುಮರದ ತಿಮ್ಮಕ್ಕನವರ ಭಾವಚಿತ್ರಕ್ಕೆ ಪುಷ್ಪನಮನ ಹಾಗೂ ನಾಡಿಗಾಗಿ ಅನನ್ಯ ಸೇವೆ ಸಲ್ಲಿಸುತ್ತಿರುವ ಪ್ರೊ. ಕೆ.ಎನ್. ಹೊಸ್ಮನಿ, ಮುಳುಗು ತಜ್ಞ ಗೋಪಾಲ ಗೌಡ ಹಾಗೂ ಮೂಕ ಪ್ರಾಣಿ ಪಕ್ಷಿಗಳ ಅನಾಥಾಶ್ರಮದ ರಾಜೇಂದ್ರ ಸಿರ್ಸಿಕರ ಇವರಿಗೆ ರಾಜ್ಯೋತ್ಸವದ ಗೌರವ ಸನ್ಮಾನ ನೆರವೇರಿತು.

ಇದೇ ಸಂದರ್ಭ ತಹಸೀಲ್ದಾರ ಪಟ್ಟರಾಜ ಗೌಡ ನೆರೆದ ಎಲ್ಲ ಕನ್ನಡಿಗರಿಗೆ ಸಾಲುಮರದ ತಿಮ್ಮಕ್ಕನವರ ಭಾವಚಿತ್ರದ ಸಮಕ್ಷಮ ಪ್ರತಿಯೊಬ್ಬರೂ ಕೂಡಾ ತಮ್ಮ ಜೀವಿತಾವಧಿಯಲ್ಲಿ ಒಂದಾದರೂ ಗಿಡವನ್ನು ನೆಟ್ಟು ಬೆಳೆಸಿ ಪೋಷಿಸುವಂತೆ ದೀಕ್ಷೆ ವಚನವನ್ನು ಬೋಧಿಸಿದರು.

ಪುಟ್ಟು ಸಾಗರ ಹಾಗೂ ಸುಧಾಕರ ನಾಯ್ಕ ವಾದ್ಯದೊಂದಿಗೆ ಪ್ರಸ್ತುತ ಪಡಿಸಿದ ಗಾಯನ ಶ್ರೋತೃಗಳನ್ನು ಭಾವನಾತ್ಮಕ ಲೋಕಕ್ಕೆ ಕರೆದುಕೊಂಡು ಹೋಯಿತು. ವೇದಿಕೆಯಲ್ಲಿ ಕದಂಬ ಸ್ಟುಡಿಯೋ ಗಾಯಕರ ದನಿಯಲ್ಲಿ ಮೂಡಿಬಂದ ನಿತ್ಯೋತ್ಸವ ಗಾನ ಕರೋಕೆ ಧ್ವನಿಸುರುಳಿ ಬಿಡುಗಡೆಗೊಂಡಿತು. ಈ ಕಾರ್ಯಕ್ರಮ ನಿಮಿತ್ತ ಆಯೋಜಿಸಲಾಗಿದ್ದ ನಾಡು ನುಡಿ ಪರಿಸರ ಗೀತೆಗಳ ಸ್ಪರ್ಧೆಯಲ್ಲಿ ವೈಯಕ್ತಿಕ ವಿಭಾಗದಲ್ಲಿ ಆಕಾಶ್, ವಿಘ್ನೇಶ್ವರ ಹೆಗಡೆ, ದೀಕ್ಷಾ ಶೇಟ್ ಹಾಗೂ ಚಂದ್ರಿಕಾ, ಮತ್ತು ಗುಂಪು ವಿಭಾಗದಲ್ಲಿ ಸ್ನೇಹ ಬಳಗ ಶಿರಸಿ, ಮಾರಿಕಾಂಬ ಪ್ರೌಢ ಶಾಲೆ, ಗೌರಿ ಮಹಿಳಾ ಸಮಾಜ ಹಾಗೂ ವಿಘ್ನೇಶ್ವರ ಹೆಗಡೆ ತಂಡ ಇವರುಗಳು ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಹಾಗೂ ಸಮಾಧಾನಕರ ಬಹುಮಾನ ಪಡೆದುಕೊಂಡರು.

ಉಮಾಕಾಂತ ಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಿಎಸ್ಪಿ ಗೀತಾ ಪಾಟೀಲ್, ತಹಸೀಲ್ದಾರ ಪಟ್ಟರಾಜ ಗೌಡ, ತಾಪಂ ಇಒ ಚನ್ನಬಸಪ್ಪ ಹಾವಣಗಿ, ಅಣ್ಣಪ್ಪ ನಾಯ್ಕ, ಅಶೋಕ ಭಜಂತ್ರಿ ಹಾಗೂ ರಾಮಚಂದ್ರ ಹೆಗಡೆ ಉಪಸ್ಥಿತರಿದ್ದರು.

ಸಂಗೀತ ಹಾಗೂ ಭಾವನಮನ ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಹಾಗೂ ಕಂದಾಯ ಇಲಾಖೆಯ ಸಿಬ್ಬಂದಿಗಳ ನೃತ್ಯ ಮನಸೂರೆಗೊಂಡಿತು. ವಿವಿಧ ಇಲಾಖೆಯ ಕಲಾವಿದರು ಕನ್ನಡ ನಾಡು-ನುಡಿ ಗೀತೆಗಳನ್ನು ಹಾಡಿ ಜನಮನ ರಂಜಿಸಿದರು. ಅತಿಥಿ ಅಭ್ಯಾಗತರಿಗೆ ಗಿಡಗಳನ್ನು ಹಾಗೂ ಕಾವೆಂಶ್ರೀರವರ ಪುಸ್ತಕವನ್ನು ನೀಡುವುದರ ಮೂಲಕ ಗೌರವಿಸಲಾಯಿತು. ದಿವ್ಯಾ ಶೇಟ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಗಾಯಕ ಕದಂಬ ರತ್ನಾಕರ ನಿರ್ವಹಿಸಿದರು.

# ದೇವನಳ್ಳಿ ಗ್ರಾಮ ಪಂಚಾಯತಿಯಲ್ಲಿ ಮಕ್ಕಳ ಗ್ರಾಮ ಸಭೆ



ಶಿರಸಿ: ತಾಲೂಕಿನ ದೇವನಳ್ಳಿ ಗ್ರಾಪಂನಲ್ಲಿ 2025-26ನೇ ಸಾಲಿನ ಮಕ್ಕಳ ಗ್ರಾಮ ಸಭೆ ಗುರುವಾರ ಅತ್ಯಂತ ಯಶಸ್ವಿಯಾಗಿ ಜರುಗಿತು.

ಮಕ್ಕಳ ಗ್ರಾಮ ಸಭೆಯಲ್ಲಿ ಮಕ್ಕಳ ಹಕ್ಕುಗಳ ಸಂರಕ್ಷಣೆಯ ಕುರಿತು ಚರ್ಚಿಸಿ ವಿವಿಧ ಇಲಾಖೆಗಳಾದ ಆರೋಗ್ಯ ಇಲಾಖೆ, ಆರಕ್ಷಕ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ವತಿಯಿಂದ ಮಕ್ಕಳ ರಕ್ಷಣೆಗಾಗಿ ಇರುವ ಕಾಯ್ದೆಗಳ ಕುರಿತು ಮಾಹಿತಿ ನೀಡಲಾಯಿತು.

ಗ್ರಾಪಂ ವತಿಯಿಂದ ವಿವಿಧ ಯೋಜನೆಗಳಡಿ 2024-25 ಹಾಗೂ 25-26 ನೇ ಸಾಲಿನಲ್ಲಿ ಶಾಲಾಭಿವೃದ್ಧಿ ಹಾಗೂ ಅಂಗನವಾಡಿಗಳ ಅಭಿವೃದ್ಧಿಗಾಗಿ ಕೈಗೊಳ್ಳಲಾದ ಕಾಮಗಾರಿಗಳ ವಿವರಗಳ ಮಾಹಿತಿ ನೀಡಲಾಯಿತು.

ಶಾಲಾ ವಿದ್ಯಾರ್ಥಿಗಳಿಂದ ದಿನನಿತ್ಯ ಉಂಟಾಗುತ್ತಿರುವ ಸಮಸ್ಯೆಗಳು ಹಾಗೂ ದೌರ್ಜನ್ಯದ ಕುರಿತು ಮಾಹಿತಿ ಪಡೆದು ಚರ್ಚಿಸಲಾಯಿತು.

ಮಕ್ಕಳ ಗ್ರಾಮ ಸಭೆಯಲ್ಲಿ ಗ್ರಾಪಂ ವತಿಯಿಂದ ಗ್ರಾಪಂ ವ್ಯಾಪ್ತಿಯ 5 ಕಿರಿಯ ಪ್ರಾಥಮಿಕ ಶಾಲೆಗಳಿಗೆ, 5 ಹಿರಿಯ ಪ್ರಾಥಮಿಕ ಶಾಲೆಗಳಿಗೆ ಹಾಗೂ 1 ಪ್ರೌಢಶಾಲೆ ಒಳಗೊಂಡಂತೆ ಒಟ್ಟೂ 11 ಶಾಲೆಗಳಿಗೆ ಅಂದಾಜು 70 ಸಾವಿರ ರೂ. ಮೌಲ್ಯದ ಕ್ರೀಡಾ ಉಪಕರಣ ವಿತರಿಸಲಾಯಿತು. 2025-26 ನೇ ಸಾಲಿನಲ್ಲಿ ಸ್ವಂತ ಸಂಪನ್ಮೂಲದಲ್ಲಿ ಪ. ಜಾತಿ ಮತ್ತು ಪ. ಪಂಗಡಕ್ಕಾಗಿ ಕಾಯ್ದಿರಿಸಿದ ಅನುದಾನದಲ್ಲಿ 22 ಪ. ಜಾತಿ ಮತ್ತು ಪ. ಪಂಗಡದ ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್ ಗಳನ್ನು ನೀಡಲಾಯಿತು.

ಎಸ್ಎಸ್ಎಲ್ಸಿಯಲ್ಲಿ ಶೇ. 85ಕ್ಕೂ ಹೆಚ್ಚು ಅಂಕ ಗಳಿಸಿದ ಪರಿಶಿಷ್ಟ ಜಾತಿಯ ಇಬ್ಬರು ವಿದ್ಯಾರ್ಥಿನಿಯರಿಗೆ ವಿದ್ಯಾಭ್ಯಾಸಕ್ಕಾಗಿ 1 ಟೇಬಲ್ ಹಾಗೂ 2 ಖುರ್ಚಿಗಳನ್ನು ವಿತರಿಸುವ ಮೂಲಕ ಮಕ್ಕಳ ಗ್ರಾಮ ಸಭೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಗ್ರಾಪಂ ಅಧ್ಯಕ್ಷ ನಾಗರಾಜ ಮರಾಠಿ, ಉಪಾಧ್ಯಕ್ಷೆ ಜೈಭಾರತಿ ಭಟ್ಟ, ಸದಸ್ಯರಾದ ಕಿರಣ ಮರಾಠಿ, ನಾರಾಯಣ ಹೆಗಡೆ, ಮಧುಮತಿ ನಾಯ್ಕ, ಪಾರ್ವತಿ ಚೆನ್ನಯ್ಯ, ಭೂದೇವಿ ನಾಯ್ಕ, ನಾಗರಾಜ ಗೌಡ, ಪಂಚಾಯತ ಅಭಿವೃದ್ಧಿ ಅಧಿಕಾರಿ ಕುಮಾರ ವಾಸನ್, ಸಿ.ಆರ್.ಪಿ ರಮೇಶ ಗೌಡ, ಆರೋಗ್ಯ, ಆರಕ್ಷಕ, ಮಹಿಳಾ ಮಕ್ಕಳ ಕಲ್ಯಾಣ ಇಲಾಖೆಗಳ ಅಧಿಕಾರಿಗಳು ಹಾಗೂ ಎಲ್ಲ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತರು ಉಪಸ್ಥಿತರಿದ್ದರು.

# ಸಂವಿಧಾನ ದಿನಾಚರಣೆ



● **ತತ್ವನಿಷ್ಠ, ಸಿದ್ದಾಪುರ:** ತಾಲೂಕು ಆಡಳಿತ, ತಾಪಂ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಹಭಾಗಿತ್ವದಲ್ಲಿ ಸಂವಿಧಾನ ದಿನಾಚರಣೆ ಕಾರ್ಯಕ್ರಮ ನಡೆಯಿತು.

ಪಟ್ಟಣದ ವಿವಿಧ ಭಾಗಗಳಲ್ಲಿ ಸಂವಿಧಾನ ಪೀಠಿಕೆ ಹಾಗೂ ಅಂಬೇಡ್ಕರ್ ಚಿಂತನೆಗಳ ಭಾವಚಿತ್ರಗಳುಳ್ಳ ಫಲಕಗಳಿಂದ ಅಲಂಕೃತ ಸ್ಥಬ್ಧ ಚಿತ್ರ ಮಾದರಿಯ ಕಿರುವಾಹನದೊಂದಿಗೆ ಸಾಗಿದ ಮೆರವಣಿಗೆಯಲ್ಲಿ ವಿದ್ಯಾರ್ಥಿ ತಂಡಗಳ ನಾಯಕರು ರಾಷ್ಟ್ರಧ್ವಜ ಪ್ರದರ್ಶನ ಮತ್ತು ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ರವರ ನುಡಿಮುತ್ತುಗಳ ಫಲಕ ಪ್ರದರ್ಶಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಹಸೀಲ್ದಾರ ಎಂ ಆರ್ ಕುಲಕರ್ಣಿ ವಹಿಸಿದ್ದರು. ವೇದಿಕೆಯಲ್ಲಿ ವಿಜೇಂದ್ರ ಗೌಡರ್, ಕನ್ನೇಶ ನಾಯ್ಕ, ನಂದನ್ ಬೋರ್ಕರ್, ಶಿವಾನಂದ, ಕಿರಣ್ ಕಾನಡೆ, ರಮೇಶ ಬೇಡರ, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಚ್. ನಾಯ್ಕ, ತಾಪಂ ಇಒ ದೇವರಾಜ ಹಿತ್ಲಕೊಪ್ಪ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಕೇಶವಮೂರ್ತಿ ಇಮ್ಮಡಿ, ಪಪಂ ಮುಖ್ಯಾಧಿಕಾರಿ ಮಹಮದ್ ಯಾಕುಬ್ ಶೇಕ್ ಮುಂತಾದವರು ಉಪಸ್ಥಿತರಿದ್ದರು. ಬಿಳಗಿಕಾಲೇಜಿನ ರಾಜ್ಯಶಾಸ್ತ್ರ ಉಪನ್ಯಾಸಕ ವಿರೂಪಾಕ್ಷಪ್ಪ ಮೇಟಿ ಉಪನ್ಯಾಸ ನೀಡಿದರು. ಇತ್ತೀಚಿಗೆ ನಡೆದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಪ್ರಯುಕ್ತ ಸಮಾಜ ಕಲ್ಯಾಣ ಇಲಾಖೆಯಿಂದ ಏರ್ಪಡಿಸಲಾದ ಚಿತ್ರಕಲೆ, ಭಾಷಣ, ಛಾಯಾಗ್ರಹಣ ವಿಷಯಗಳಲ್ಲಿ ತಾಲೂಕು ಮಟ್ಟದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸ್ಮರಣಿಕೆ ವಿತರಣೆ ಮಾಡಲಾಯಿತು.

# ಸಂವಿಧಾನ ದಿನಾಚರಣೆ ಕಾರ್ಯಕ್ರಮ



● **ತತ್ವನಿಷ್ಠ, ಭಟ್ಕಳ:** ತಾಲೂಕು ಆಡಳಿತ ಭಟ್ಕಳ ಮತ್ತು ಸಮಾಜ ಕಲ್ಯಾಣ ಇಲಾಖೆ ಸಂಯುಕ್ತ ಆಶ್ರಯದಲ್ಲಿ ನ್ಯೂ ಇಂಗ್ಲಿಷ್ ಪದವಿ ಪೂರ್ವ ಕಾಲೇಜಿನ ಸಹಯೋಗದಲ್ಲಿ 76ನೇ ಸಂವಿಧಾನ ದಿನಾಚರಣೆ ಕಾರ್ಯಕ್ರಮ ಜರುಗಿತು.

ಅಯೋಧ್ಯಾ ನಗರದ ನ್ಯೂ ಇಂಗ್ಲಿಷ್ ಪದವಿ ಪೂರ್ವ ಕಾಲೇಜಿನ ಸಭಾಭವನದಲ್ಲಿ ನಡೆದ ಕಾರ್ಯಕ್ರಮವನ್ನು ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ರಾಜು ನಾಯ್ಕ ಉದ್ಘಾಟಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತಹಸೀಲ್ದಾರ್ ನಾಗೇಂದ್ರ ಕೋಳಶೆಟ್ಟಿ ಮಾತನಾಡಿ ಸಂವಿಧಾನ ನಮ್ಮ ಸರ್ವೋನ್ನತ ಗ್ರಂಥ. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ನಡುವಿನ ಸಮತೋಲನಕ್ಕೆ ಸಂವಿಧಾನವೇ ಕಾರಣ ಎಂದರು.

ಉಪನ್ಯಾಸಕ ಶಿವಾನಂದ ಭಟ್ಟ ಸಂವಿಧಾನದ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೊಡುಗೆ ಅಮೂಲ್ಯ ಎನ್ನುವ ವಿಷಯದ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮಕ್ಕೂ ಮೊದಲು ತಾಲೂಕು ಆಡಳಿತ ಸೌಧದಿಂದ ಸಂಶುದ್ದೀನ್ ಸರ್ಕಲ್ ಮಾರ್ಗವಾಗಿ ನ್ಯೂ ಇಂಗ್ಲಿಷ್ ಪದವಿ ಪೂರ್ವ ಕಾಲೇಜು ತನಕ ಮೆರವಣಿಗೆ ನಡೆಯಿತು.

ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕಿ ಗೀತಾ ಹೆಗಡೆ, ತೋಟಗಾರಿಕಾ ಇಲಾಖೆ ಅಧಿಕಾರಿ ಶ್ರವಣಕುಮಾರ, ಮೀನುಗಾರಿಕಾ ಇಲಾಖೆಯ ಸಹಾಯಕ ನಿರ್ದೇಶಕ ರೇಣುಕಾಸ್ವಾಮಿ, ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯ ಸಂಶುದ್ದೀನ್, ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿ ರಾಜು ನಾಯ್ಕ, ಶಿಶು ಮತ್ತು ಮಹಿಳಾ ಕಲ್ಯಾಣ ಇಲಾಖೆಯ ಸುಶೀಲಾ ಮೊಗೇರ, ಕಾಲೇಜು ಪ್ರಾಚಾರ್ಯ ವೀರೇಂದ್ರ ಶ್ಯಾನಭಾಗ ಮುಂತಾದವರು ಹಾಜರಿದ್ದರು. ಕ್ಷೇತ್ರ ಶಿಕ್ಷಣಾಧಿಕಾರಿ ವೆಂಕಟೇಶ ನಾಯಕ್ ಸ್ವಾಗತಿಸಿ ಮಾತನಾಡಿದರು. ಶಿಕ್ಷಕ ಸುರೇಶ ಮುರುಡೇಶ್ವರ ಕಾರ್ಯಕ್ರಮ ನಿರ್ವಹಿಸಿದರು.

**ಕನ್ನಡ ಕಾರ್ತಿಕ ಅನುದಿನ ಅನುಸ್ಪಂದನ ಕಾರ್ಯಕ್ರಮ**

# ಮಕ್ಕಳಿಗೆ ದಾಸ ಸಾಹಿತ್ಯದ ಪರಿಚಯ ಮಾಡಿಕೊಡಿ: ಸುಭಾಸ ಡೋರಿ



● **ತತ್ವನಿಷ್ಠ, ಮುಂಡಗೋಡ:** ಮಕ್ಕಳಿಗೆ ದಾಸ ಸಾಹಿತ್ಯದ ಪರಿಚಯ ಮಾಡಿಕೊಡಬೇಕು ಅಂದಾಗ ಮಾತ್ರ ದಾಸ ಸಾಹಿತ್ಯ ಉಳಿಯಲು ಸಾಧ್ಯ ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸುಭಾಸ ಡೋರಿ ಹೇಳಿದರು

ಕನ್ನಡ ಸಾಹಿತ್ಯ ಪರಿಷತ್ತು ಮುಂಡಗೋಡ ವತಿಯಿಂದ ಹಮ್ಮಿಕೊಳ್ಳಲಾದ ಕನ್ನಡ ಕಾರ್ತಿಕ ಅನುದಿನ ಅನುಸ್ಪಂದನ ಕಾರ್ಯಕ್ರಮದಲ್ಲಿ ದಾಸ ಸಾಹಿತ್ಯ ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮ ಮತ್ತು ಪ್ರಬಂಧ ಸ್ಪರ್ಧೆಯ ಬಹುಮಾನ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ರಾಜರ ಕಾಲದಲ್ಲಿ ದಾಸ ಸಾಹಿತ್ಯ ಬೆಳೆಸಲು ಬಹಳ ಪ್ರಯತ್ನದಿಂದ ದಾಸ ಸಾಹಿತ್ಯ ಬೆಳೆಸಿದ್ದಾರೆ. ದಾಸ ಸಾಹಿತ್ಯ ಅತ್ಯಂತ ಹಳೆಯ ಸಾಹಿತ್ಯವಾಗಿದ್ದು, ಕನಕದಾಸರು, ಪುರಂದರದಾಸರ ಸಾಹಿತ್ಯವನ್ನು ಅನುಕರಣೆ ಹಾಗೂ ಅಳವಡಿಕೆ ಮಾಡುವುದು ಅತ್ಯವಶ್ಯಕವಾಗಿದೆ. ಮುಂಡಗೋಡ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ದಾಸ ಸಾಹಿತ್ಯ ಉಳಿಯಲು ಒಂದು ಉತ್ತಮ ಕಾರ್ಯಕ್ರಮ ಮಾಡಿರುವುದು ಶ್ಲಾಘನೀಯ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ವಸಂತ ಕೊಣಸಾಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ದಾಸ ಸಾಹಿತ್ಯವು ಅತ್ಯಂತ ಹಳೆಯ ಹಾಗೂ ಸಾಮಾಜಿಕ ಅಂಕು ಡೊಂಕುಗಳನ್ನು ತಿದ್ದಿ ಉತ್ತಮ ಸಮಾಜದ ನಿರ್ಮಾಣದಲ್ಲಿ ಬಹುದೊಡ್ಡ ಪತ್ರ ವಹಿಸಿದೆ. ಇಂತಹ ಗಟ್ಟಿತನದ ಸಾಹಿತ್ಯವನ್ನು ಉಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದರು.

ಸಾಹಿತಿ ವಾಸುದೇವ ಮಡ್ಲಿ ಮಾತನಾಡಿ, ದಾಸ ಸಾಹಿತ್ಯ ಕುರಿತು ಉಪನ್ಯಾಸ ನೀಡಿ, ದಾಸ ಸಾಹಿತ್ಯವು ರಾಜರ ಕಾಲದಿಂದಲೂ ಪ್ರಚಲಿತವಾಗಿದೆ. ಇಂದು ದಾಸ ಸಾಹಿತ್ಯ ಅಳಿವಿನ ಅಂಚಿನಲ್ಲಿದೆ. ಇದರ ಕುರಿತು ನಾವೆಲ್ಲರೂ ನಮ್ಮ ಮಕ್ಕಳಿಗೆ ದಾಸ ಸಾಹಿತ್ಯ ಬಗ್ಗೆ ತಿಳಿಸಬೇಕು ಎಂದರು.

ಈ ಕಾರ್ಯಕ್ರಮದಲ್ಲಿ ಚಲುವ ಕನ್ನಡ ನಾಡು ಎಂಬ ವಿಷಯದ ಕುರಿತು ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಇಕ್ರಾ ಇಬ್ರಾಹಿಮ್ ಶೇಖ, ದ್ವಿತೀಯ ಸ್ಥಾನ ಪಡೆದ ಯಶಸ್ವಿ. ಎಲ್. ಎಸ್., ತೃತೀಯ ಸ್ಥಾನ ಪಡೆದ ಸಮೃದ್ಧಿ ಕುಲಕರ್ಣಿ ಹಾಗೂ ವರಪ್ರಸಾದ ಪವಾರ ಹಾಗೂ ವೈಷ್ಣವಿ ದೈವಜ್ಞ, ಮಧುರಾ, ಬಿರಾದಾರ್, ರಿದಾ. ರಾಜು. ನದಾಪ್ ಇವರೆಲ್ಲರಿಗೂ ಬಹುಮಾನ ವಿತರಣೆ ಮಾಡಲಾಯಿತು.

ಗೌರವ ಕಾರ್ಯದರ್ಶಿ ಎಸ್. ಡಿ ಮುಡೆಣ್ಣವರ, ವಿನಾಯಕ ಶೇಟ್, ಶ್ಯಾಮಲಾ ನಾಯ್ಕ, ರಾಜು ನದಾಫ, ಎಸ್.ಸಿ. ಬಸನಗೌಡ್ರ, ಸಂಗಪ್ಪ ಕುಳ್ಳೂರು, ಎಸ್.ಬಿ. ಹೂಗಾರ, ಆರ್.ಎಸ್. ಕಲಾಲ, ಡಾ. ಅನುಪಮಾ ಅದಾಪುರ, ಗೌರಮ್ಮ ಕೊಳ್ಳಾನವರ, ಆನಂದ ಹೊಸೂರು, ಬಾಲಚಂದ್ರ ಹೆಗಡೆ, ರಾಜಶೇಖರ ನಾಯ್ಕ ಮುಂತಾದವರು ಉಪಸ್ಥಿತರಿದ್ದರು. ಗೌರವ ಕಾರ್ಯದರ್ಶಿ ಎಸ್.ಡಿ. ಮುಡೆಣ್ಣವರ ಸ್ವಾಗತಿಸಿದರು. ವಿನಾಯಕ ಶೇಟ್ ನಿರೂಪಿಸಿದರು. ನಾಗರಾಜ್ ಅರ್ಕಸಾಲಿ ವಂದಿಸಿದರು.

## ಧಾರ್ಮಿಕ ಪ್ರಜ್ಞೆ ಮೂಡಿಸಿದ ಗೀತಾ ಪಠಣ




● **ತತ್ವನಿಷ್ಠ, ಭಟ್ಕಳ:** ಉಡುಪಿ ಹಾಗೂ ಗೋವಾದಲ್ಲಿ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ ದೇಶದ ಪ್ರಧಾನಿ ನರೇಂದ್ರ ಮೋದಿ ಅವರ ಕಾರ್ಯಕ್ರಮಕ್ಕೆ ಪೂರಕವಾಗಿ ಸ್ಥಳೀಯ ವಿದ್ಯಾಭಾರತಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕೂಡಾ ಮಕ್ಕಳಿಗೆ ಧಾರ್ಮಿಕ ಪ್ರಜ್ಞೆ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಉಡುಪಿಯಲ್ಲಿ ಒಂದೇ ದಿನ 1 ಲಕ್ಷ ಭಗವದ್ಗೀತಾ ಪಠಣ ಕಾರ್ಯಕ್ರಮ ಹಾಗೂ ಗೋವಾದ ಪರ್ತಗಾಳಿಯಲ್ಲಿ ಪ್ರಪಂಚದಲ್ಲಿಯೇ ಅತೀ ಎತ್ತರದ ರಾಮನ ಮೂರ್ತಿ ಅನಾವರಣ ಎರಡೂ ಕಾರ್ಯಕ್ರಮ ನಡೆಯುವ ಸಮಯದಲ್ಲಿ ಶಾಲಾ ಮಕ್ಕಳ ಕಾರ್ಯಕ್ರಮ ಹಮ್ಮಿಕೊಂಡು ಯಶಸ್ವಿಯಾಗಿಸಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಭಗವದ್ಗೀತಾ ಶ್ಲೋಕ ಪಠಣ, ಭಜನೆ, ಶ್ರೀ ರಾಮನ ಕಥೆ ಇತ್ಯಾದಿಗಳನ್ನು ಹೇಳುತ್ತಾ ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಭಟ್ಕಳ ಎಜ್ಯುಕೇಶನ್ ಟ್ರಸ್ಟ್ ಅಧ್ಯಕ್ಷ ಡಾ. ಸುರೇಶ ನಾಯಕ, ಶಾಲಾ ಮುಖ್ಯೋಪಾಧ್ಯಾಯಿನಿ ರೂಪಾ ಖಾರ್ವಿ, ಶಿಕ್ಷಕರು ಉಪಸ್ಥಿತರಿದ್ದರು.

## ಸಂಪಾದಕೀಯ

### ಮಂಗಳವೆಂದುಕೊಂಡಿದ್ದ ಅಡಿಕೆ ಬೆಳೆಗಾರರ ಕನಸು ಕಸಿಯುತ್ತಿದೆ ಮಂಗ

ಭಾರಿ ಮಳೆಯಿಂದಾಗಿ ಕೊಳೆರೋಗ, ಇದನ್ನೇ ಹಿಂದಿಕ್ಕುವಂತೆ ಕಾಡುತ್ತಿರುವ ಎಲೆಚುಕ್ಕಿ, ಮಳೆ ಹೆಚ್ಚಾಗಿದ್ದರಿಂದಲೋ ಏನೋ ಬೆಳೆಯೂ ಕಡಿಮೆ. ಈ ಮಧ್ಯೆ ಕಳೆದ ವರ್ಷದ ಬೆಳೆಗೆ ಉತ್ತಮ ಬೆಲೆ ಕಂಡಿದ್ದ ಅಡಿಕೆ ಬೆಳೆಗಾರರಿಗೆ ಈ ವರ್ಷ ಇದ್ದ ಬೆಳೆ ಉಳಿಸಿಕೊಳ್ಳುವುದೇ ದೊಡ್ಡ ಸವಾಲಾಗಿದೆ.

ಮಳೆಯ ಅಬ್ಬರದ ಜತೆ ಗಾಳಿಯೂ ಸೇರಿ ಒಂದಿಷ್ಟು ಬೆಳೆ ನಾಶವಾಗಿದೆ. ಎಲೆಚುಕ್ಕಿ ಸಮಸ್ಯೆಯಿಂದ ಸಾಕಷ್ಟು ಮರ ನಾಶವಾಗಿದೆ. ಇರುವುದರಲ್ಲೇ ಈ ಸಾರಿ ಬಹುತೇಕ ಕಡೆ ಐದು ಮರಕ್ಕೆ ಒಂದು ಮರದಲ್ಲಿ ಅಡಿಕೆ ಕೊನೆ ಬಿಟ್ಟಿದೆ. ಅದೂ ಚಿಕ್ಕ ಚಿಕ್ಕ ಕೊನೆಗಳಾಗಿರುವುದು ಇನ್ನೊಂದು ದುರಂತ. ಎಲ್ಲಾ ಸಮಸ್ಯೆಗಳಿಗೆ ಕಳಶವಿಟ್ಟಂತೆ ಚಳಿಗಾಲ ಆರಂಭವಾಗುತ್ತಿದ್ದು, ಇನ್ನೇನು ಬೆಳೆ ಕೊಯ್ಲು ಮಾಡಲು ಕೆಲ ದಿನ ಇವೆ ಎನ್ನುತ್ತಿರುವಾಗಲೇ ಕಾಡುಪ್ರಾಣಿಗಳ ಕಾಟ ಆರಂಭವಾಗಿದೆ. ಮರದ ಬುಡಕ್ಕೆ ಹಂದಿ ದಾಳಿಯಿಟ್ಟರೆ, ಗೋಟಡಿಕೆಗೆ ಮಂಗಳಗಳ ಹಾವಳಿ ಹೆಚ್ಚಾಗಿದೆ.

ಈಗಾಗಲೇ ರೈತರ ಕಣ್ಣಲ್ಲಿ ಸಾಕಷ್ಟು ನಿರೀಕ್ಷೆ ಗರಿಗೆದರಿತ್ತು. ಹಸಿ ಅಡಿಕೆ ಟೆಂಡರ್ ಆರಂಭವಾಗಿದ್ದು, ಕಳೆದ ವರ್ಷಕ್ಕಿಂತ 2 ರಿಂದ 2.5 ಸಾವಿರ ರೂ. ಹೆಚ್ಚಳ ಪ್ರತಿ ಕ್ವಿಂಟಾಲ್‌ಗೆ ಲಭಿಸುತ್ತಿದೆ. ಇರುವ ಕಡಿಮೆ ಬೆಳೆಗೆ ಉತ್ತಮ ಬೆಲೆ ಸಿಕ್ಕರೆ ಹ್ಯಾಗೂ ಒಂದಿಷ್ಟು ಸಮಸ್ಯೆ ನಿವಾರಣೆ ಆಗಲಿದೆ ಎಂಬ ನಿರೀಕ್ಷೆಯಲ್ಲಿದ್ದಾರೆ. ಆದರೆ ಮಂಗಗಳ ಹಾವಳಿ ಹಾಗೂ ಹಂದಿಕಾಟ ಬೆಳೆದ ಬೆಳೆಯನ್ನು ಬರಿದಾಗಿಸುತ್ತಿದೆ. ಮೊದಲೇ ರೈತರ ಸಹಾಯಕ್ಕೆ ಯಾರೂ ಬರುತ್ತಿಲ್ಲ. ಇದೊಂದು ಹೊಟ್ಟೆ ತುಂಬಿಸುವ ಬದುಕಲ್ಲ ಎಂದು ಹೆಚ್ಚಿನವರು ಪಟ್ಟಣದತ್ತ ವಲಸೆ ಹೊರಟ ಸಂದರ್ಭದಲ್ಲಿ ಎದುರಾಗುತ್ತಿರುವ ಮತ್ತಷ್ಟು ಆತಂಕ ರೈತರನ್ನು ಬಿಟ್ಟು ಬೇರೆಡೆ ತೆರಳಲು ಇನ್ನಷ್ಟು ಪ್ರೇರಣೆ ನೀಡುತ್ತಿರುವುದು ವಿಪರ್ಯಾಸ.

ಉತ್ತರ ಕನ್ನಡ ಜಿಲ್ಲಾ ಕೃಷಿ ಆರ್ಥಿಕತೆಯ ಬೆನ್ನೆಲುಬಾಗಿರುವ ಅಡಿಕೆ ಬೆಳೆ ಈ ಬಾರಿ ರೈತರನ್ನು ಮತ್ತೆ ಆತಂಕಕ್ಕೊಳಪಡಿಸಿದೆ. ಜಿಲ್ಲೆಯಾದ್ಯಂತ ಸಾವಿರಾರು ಹೆಕ್ಟೇರ್‌ಗಳಲ್ಲಿ ಅಡಿಕೆ ಬೆಳೆ ಬೆಳೆಯಲಾಗುತ್ತಿದ್ದರೂ, ಈ ವರ್ಷ ಉತ್ಪಾದನೆ ಗಣನೀಯವಾಗಿ ಕುಸಿಯುವ ಸೂಚನೆಗಳು ಸ್ಪಷ್ಟವಾಗಿವೆ.

ಸರ್ಕಾರ ಕಾಡುಪ್ರಾಣಿಗಳ ಕಾಟ ತಡೆಗೆ ಅನೇಕ ಕ್ರಮಗಳ ಬಗ್ಗೆ ಮಾತನಾಡುತ್ತಿದ್ದರೂ, ನೆಲಮಟ್ಟದಲ್ಲಿ ಯಾವುದೇ ಪರಿಣಾಮಕಾರಿ ವ್ಯವಸ್ಥೆ ಕಾರ್ಯಗತವಾಗದಿರುವುದು ರೈತರ ಅಸಮಾಧಾನದ ಮೂಲ. ತೋಟಗಳ ಸುತ್ತ ರಕ್ಷಿತ ವೇಲಿ, ತಾತ್ಕಾಲಿಕ ತಡೆಗೋಡೆ, ರಾತ್ರಿಯ ಪಟ್ರೋಲ್ ವ್ಯವಸ್ಥೆ, ನಷ್ಟ ಪರಿಹಾರಗಳು ಕಾಗದಗಳಲ್ಲಿ ಮಾತ್ರ ಉಳಿಯುತ್ತಿರುವುದು ದುರಂತ. ಅಡಿಕೆ ಬೆಲೆ ಏರಿದಾಗ ಅದರ ಲಾಭ ರೈತನ ಕೈ ಸೇರುವುದೇ ಅಪರೂಪ. ಈ ಬಾರಿ ಉತ್ಪಾದನಾ ಕುಸಿತ, ಕಾಡುಪ್ರಾಣಿಗಳ ದಾಳಿ, ದುಬಾರಿ ಕಾರ್ಮಿಕ ವೆಚ್ಚವೆಲ್ಲಾ ಸೇರಿ, ರೈತನ ಸಮಗ್ರ ಆರ್ಥಿಕತೆಯೇ ಕುಸಿತಗೊಂಡಿದೆ.

ಉತ್ತರ ಕನ್ನಡದ ಅಡಿಕೆ ತೋಟಗಳು ರೈತನ ಜೀವನದ ಆಶಾಕಿರಣವಾಗಿವೆ. ಆದರೆ ಆ ಕಿರಣ ಮಸುಕಾಗದಿರಲು, ಕಾಡುಪ್ರಾಣಿಗಳ ಕಾಟ ನಿಯಂತ್ರಣ, ನಷ್ಟ ಪರಿಹಾರ, ಹಾಗೂ ತುರ್ತು ರಕ್ಷಣಾ ಕ್ರಮಗಳು ಆದ್ಯತೆಯ ಅಗತ್ಯ. ಬೆಳೆ ಕೈಗೆ ಸಿಗದಿದ್ದಲ್ಲಿ ಬೆಲೆ ಏರಿಕೆಯಿಂದ ಏನು ಪ್ರಯೋಜನ? ಒಟ್ಟು ಕ್ಷೇತ್ರ, ಗಮನಿಸಿದರೆ ಜಿಲ್ಲೆಯಲ್ಲಿ ಸರಿಸುಮಾರು 45,000 ಹೆಕ್ಟೇರ್‌ಗಿಂತ ಹೆಚ್ಚು ಪ್ರದೇಶದಲ್ಲಿ ಅಡಿಕೆ ಬೆಳೆ ಬೆಳೆಯಲಾಗುತ್ತಿದೆ. ಉತ್ತಮ ಬೆಲೆಯಿದ್ದರೂ ಹಂದಿ ಮತ್ತು ಮಂಗಗಳಿಂದಾಗಿ ಶೇ. 30ರಷ್ಟು ಬೆಳೆ ನಾಶವಾಗುತ್ತಿದೆ.

ಉತ್ತರ ಕನ್ನಡದ ಅಡಿಕೆ ಕೃಷಿಯು ಕೇವಲ ರೈತರ ಜೀವನೋಪಾಯವಲ್ಲ, ಅದು ಇಡೀ ಜಿಲ್ಲೆಯ ಆರ್ಥಿಕತೆಯ ಬೆನ್ನೆಲುಬು. ದಾಖಲೆ ಬೆಲೆಯ ಈ ಸಂದರ್ಭದಲ್ಲಿ ಬೆಳೆ ಕುಸಿತವು ರೈತರನ್ನು ಹತಾಶೆಗೆ ತಳ್ಳುತ್ತಿದೆ. ಸರ್ಕಾರವು ಈ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ, ರೈತರ ಆತಂಕವನ್ನು ನಿವಾರಿಸಲು ತ್ವರಿತ ಮತ್ತು ದೀರ್ಘಾವಧಿಯ ಪರಿಹಾರಗಳನ್ನು ಒದಗಿಸುವುದು ಇಂದಿನ ತುರ್ತು ಅಗತ್ಯವಾಗಿದೆ.

# ನಿತ್ಯ ಕರ್ಮಗಳ ಆಧ್ಯಾತ್ಮಿಕ ಹಾಗೂ ವೈಜ್ಞಾನಿಕ ಹಿನ್ನೆಲೆ



✍ ಡಾ. ಕೃಷ್ಣಮೂರ್ತಿ ಶೇಷಗಿರಿ ರಾಯ್ಸದ್

## ವಿಚಾರ-ವಿಹಾರ

**ಹಿಂದಿನ ಭಾಗದಿಂದ...**

ಕಳೆದ ಸಂಚಿಕೆಯ ನಿತ್ಯಕರ್ಮಗಳ ವೈಜ್ಞಾನಿಕ ಹಾಗೂ ಧಾರ್ಮಿಕ ಹಿನ್ನೆಲೆಯಲ್ಲಿ ದೀಪ ಬೆಳಗುವುದರ ಬಗ್ಗೆ ತಿಳಿದಿದ್ದೇವೆ. ಈಗ ಅದರ ಮುಂದಿನ ಭಾಗವಾದ ಪೂಜಾವಿಧಿಗಳ ಬಗ್ಗೆ ತಿಳಿದುಕೊಳ್ಳೋಣ.

ನಿತ್ಯಕರ್ಮಗಳಲ್ಲಿ ಪೂಜಾ ಕೈಂಕರ್ಯ ಹಿಂದೂ ಧರ್ಮದ ಸನಾತನ ಸಂಪ್ರದಾಯದ ಅತೀ ಮುಖ್ಯವಾದ ಭಾಗ.

**ದೇಹೋ ದೇವಾಲಯಃ ಪ್ರೋಕ್ತೋ**
**ದೇವೋ ಜೀವಃ ಸನಾತನಃ |**
**ತ್ಯಜೇತ್ ಅಜ್ಞಾನ ನಿರ್ಮಾಲ್ಯಂ**
**ಸೋಹಂ ಭಾವೇನ ಪೂಜಯೇತ್ ||**

ದೇವರ ಪೂಜೆಯ ಕಲ್ಪೋಕ್ತ ಪೂಜಾ ಮಂತ್ರವಿಧಿಯಲ್ಲಿ ಬರುವ ಮಂತ್ರದ ಪೂರ್ವಭಾಗ ಇದು.

"ದೇಹ"ವೆಂಬ ದೇವಾಲಯದಲ್ಲಿ "ಜೀವ" ನೆಂಬ ದೇವನು ಸದಾ ಇದ್ದಾನೆ. ಅಜ್ಞಾನದ ಮಾಲಿನ್ಯವನ್ನು ತ್ಯಜಿಸಿದರೆ, "ನಾನೇ ಅವನು"ಎಂಬ ಭಾವದಿಂದ ಪೂಜಿಸಿಯೇನು. ಸರಿಯಾಗಿ ಮಂತ್ರವನ್ನು ಅರ್ಥೈಸಿದರೆ ದೇವರ ಕೋಣೆಯಲ್ಲಾಗಲೀ, ದೇವಸ್ಥಾನದ ಮೂರ್ತಿಯಲ್ಲಾಗಲೀ ಇದ್ದಾನೆಯೇ? ಸದಾಕಾಲದಲ್ಲಿಯೂ ಜೀವಸ್ವರೂಪನಾಗಿ ಅವನು ನಮ್ಮ ಹೃದಯಕಮಲದಲ್ಲಿಯೇ ಆತ್ಮರೂಪದಲ್ಲಿ ಬೆಳಗುತ್ತಿದ್ದಾನೆ.

**ಪೂಜಾವಿಧಾನದಲ್ಲಿ ಎರಡು ವಿಧ.**

ಸಾಕಾರ ಮತ್ತು ನಿರಾಕಾರ ಅಥವಾ ಸುಗುಣ ಮತ್ತು ನಿರ್ಗುಣ ಆರಾಧನೆ. ನಮ್ಮ ಅನುಕೂಲಕ್ಕಾಗಿ ಮನಸ್ಸನ್ನು ಒಂದೆಡೆ ಸ್ಥಿರವಾಗಿಸಿ ದೇವರನ್ನು ಧ್ಯಾನಿಸುವ ಸಲುವಾಗಿ ಋಷಿಗಳು ಮಾಡಿಕೊಟ್ಟ ಸೌಕರ್ಯ. ದೇವರು ಹೊರಗಿದ್ದಾನೆ, ವಿಗ್ರಹ ರೂಪದಲ್ಲಿ ದೇವಸ್ಥಾನದಲ್ಲಿಯೋ, ಪುಣ್ಯಕ್ಷೇತ್ರಗಳಲ್ಲಿಯೋ ವಾಸಿಸಿದ್ದಾನೆ ಎಂದು ತಿಳಿಯುವುದು ಅತೀ ಕೆಳಮಟ್ಟದ ಅವನನ್ನು ಅರಿಯುವ ಪ್ರಕ್ರಿಯೆ.

ಇಡೀ ವಿಶ್ವವೇ ದೇವರ ಸೃಷ್ಟಿಯಾಗಿರುವಾಗ ಅವನು ಇಲ್ಲದ ಸ್ಥಾನವಾಗಲೀ ಅಥವಾ ಅವನು ಇಲ್ಲದ ವಸ್ತುವಾಗಲೀ ಇಡೀ ಜಗತ್ತಿನಲ್ಲಿ ಎಲ್ಲಿಯೂ ಇಲ್ಲ. ನಮ್ಮಲ್ಲಿ "ಜೀವ ಬೇರೆ-ಈಶ್ವರ ಬೇರೆ" ಎಂಬ ಭೇದ ಯಾವಾಗ ಬಂತೋ ಅದು ಅಜ್ಞಾನದ/ಅವಿದ್ಯೆಯ ಪರಿಣಾಮ. ಜೀವ- ಬ್ರಹ್ಮೈಕ್ಯ, ಜೀವೇಶ್ವರ ಐಕ್ಯವನ್ನೇ ಶಂಕರಾಚಾರ್ಯರು ಇಡೀ ವೇದಾಂತದ ತುಂಬಾ ಪ್ರತಿಪಾದಿಸಿದ್ದಾರೆ. ಅದನ್ನೇ ಮುಂದೆ ಅದ್ವೈತ ಸಿದ್ಧಾಂತವೆಂದು ಕರೆಯಲಾಯಿತು. ಪರಮಾತ್ಮನಿಂದ ಪ್ರಾರಂಭವಾದ ಸೃಷ್ಟಿ ಮುಂದುವರೆದು ವಿರಾಟ್ ಸ್ವರೂಪವನ್ನು ತಾಳಿ, ನಮ್ಮ ಭೂಮಂಡಲ ವಿಶ್ವ, ಸಕಲ ಚರಾಚರ ವಸ್ತುಗಳ ಜೀವರಾಶಿಗಳ ಹುಟ್ಟು-ಸಾವು ಆರಂಭವಾಯಿತು. ಅದ್ವೈತ, ದ್ವೈತ, ವಿಶಿಷ್ಠ ಅದ್ವೈತಗಳ ವಾದ-ವಿವಾದ ಸೃಷ್ಟಿಯಾಯಿತು. ನಿರಾಕಾರ-ನಿರ್ಗುಣ ತತ್ವಗಳನ್ನಾಧರಿಸಿ ಬುದ್ಧ, ಜೈನ, ಚಾರ್ವಾಕ ಮತಾದಿಗಳ ಉದಯವಾಯಿತು. **"ಮತಿಗೊಂದು ಮತ"** ಎಂಬಂತೆ ಅವರವರ ಇಚ್ಛಾನುಸಾರ, ಕೋಟ್ಯಾನುಕೋಟಿ ದೇವರ ಪೂಜಾವಿಧಿ ಆರಂಭವಾಯಿತು. ಮತ್ತೂ ಮುಂದುವರೆದು ಮತ-ಧರ್ಮಗಳ ಅಂತರಾರ್ಥ ತಿಳಿಯದ ಶ್ರೇಷ್ಠತೆಯ ಬೆಂಬೆತ್ತಿ ಹೋಗುವ, ಅದನ್ನೇ ವಾದಿಸುವ, ವಿವಾದಿಸುವ ಜನಾಂಗಗಳ ವಿಚಿತ್ರ ಭೂಮಂಡಲವಾಯಿತು. ದೇವರ, ಧರ್ಮದ ಹೆಸರಿನಲ್ಲಿ ಮೋಸ, ವಂಚನೆಗಳು ಪ್ರಾರಂಭವಾಯಿತು. ಜಾತಿ-ಮತಗಳ ಸಂಘರ್ಷದಲ್ಲಿ ಧರ್ಮದ ಮೂಲತತ್ವಗಳ ಸತ್ಯ-ಧರ್ಮ-ಅಹಿಂಸೆಯ ತತ್ವಗಳು ಮಾಯವಾದವು. ಜನಾಂಗ -ಜನಾಂಗಗಳೇ, ದೇಶ-ದೇಶಗಳೇ ನಾಶವಾಗಿ ಹೋದವು, ಮಹಾಯುದ್ಧಗಳೇ ಘಟಿಸಿದವು. ಜಗತ್ತಿನಲ್ಲಿ ದೇವರನ್ನು ನಂಬುವ-ನಂಬದಿರುವ ಈಶ್ವರ-ನಿರೀಶ್ವರ ವಾದವನ್ನು ಸೃಷ್ಟಿಸುವ, ಬೆಂಬಲಿಸುವ, ಸಾಮಾಜಿಕ-ರಾಜಕೀಯ-ಆರ್ಥಿಕವಾಗಿ ಸಲಹುವ ಒಂದು ವಿಕೃತ ಮನಸ್ಸಿನ ಮಾನವ ಜಗತ್ತೇ ಸೃಷ್ಟಿಯಾಗಿಬಿಟ್ಟಿತು.

ಇತಿಹಾಸವನ್ನು ಗಮನಿಸಿದಾಗ ತಿಳಿಯುವ ಮುಖ್ಯ ವಿಚಾರವೇ ಮನುಷ್ಯನ ಸ್ವಾರ್ಥದ ಪರಾಕಾಷ್ಠೆ. ಹಾಗಾದರೆ ಇಲ್ಲಿಯವರೆಗೆ ಮಾನವ ಕಲಿತಿದ್ದು ಏನು?? ಎಂದು ಪ್ರಶ್ನಿಸಿದರೆ ಪ್ರಶ್ನೆಯೇ ಪೆಡಂಭೂತವಾಗಿ ಬಿಡುತ್ತದೆ.

ಪೂಜಾ ವಿಧಿಗಳ ವಿಧಿ ವಿಧಾನಗಳು ಕಾಲದಿಂದ ಕಾಲಕ್ಕೆ,ದೇಶದಿಂದ ದೇಶಕ್ಕೆ ಬದಲಾಗುತ್ತದೆ ಬಂದಿದೆ. ಎಲ್ಲಾ ರೀತಿಯ ಮತದ ಧರ್ಮದ ಪರಂಪರೆಗಳು ಕೇವಲ ಚಿತ್ತ ಶುದ್ಧಿಗಾಗಿ ಮಾತ್ರ. ಚಿತ್ತ ಶುದ್ಧಿಯಾಗಿ ಜ್ಞಾನ ಪ್ರಾಪ್ತಿಯಾದರೆ ಮಾತ್ರ ಮೋಕ್ಷವೆಂಬುದು ಶತಃಸಿದ್ಧ.

**"ಚಿತ್ತಸ್ಯ ಶುದ್ಧಯೇ ಕರ್ಮಃ ನ ವಸ್ತೋಪಲಬ್ಧಯೇ"** ಎನ್ನುವುದು ಎಲ್ಲರೂ ಒಪ್ಪಬಹುದಾದ ತತ್ವ ಈ ಶೀರ್ಷಿಕೆಯನ್ನು ನಮ್ಮ ಆಚಾರ-ವಿಚಾರಗಳ ಪರಂಪರೆಗೆ ಸೀಮಿತಗೊಳಿಸಿಕೊಳ್ಳೋಣ. ಸಗುಣ ಪ್ರಕಾರದ ಪೂಜಾ ವಿಧಿಗಳಲ್ಲಿ "ಯಥಾ ಶಕ್ತಿ, ಯಥಾ ಜ್ಞಾನೇನ, ದೇವಪೂಜಾಂ ಕರಿಷ್ಯೇ"ಎಂದು ಸಂಕಲ್ಪ ಮಾಡುತ್ತೇವೆ. ನಮ್ಮಲ್ಲಿ ದೇವರಕೋಣೆ ಎಂದೇ ಮನೆಯಲ್ಲಿ ಅದಕ್ಕೆ ಪ್ರಮುಖ ಸ್ಥಾನ ಕಲ್ಪಿಸಿದ್ದಾರೆ. ಪೂರ್ವಕ್ಕೆ ದೇವರ ಮುಖ, ಉತ್ತರ ದಿಕ್ಕಿಗೆ ಪೂಜೆ ಮಾಡುವವರ ಮುಖಮಾಡಿರಬೇಕೆಂದು ಶಾಸ್ತ್ರದಲ್ಲಿ ಹೇಳಿದ್ದಾರೆ. ಪೂಜಾವಿಧಿಗಳು ಅವರವರ ಜ್ಞಾನಕ್ಕೆ, ಅವರವರ ಅಂತಸ್ಥಿಗೆ, ಸೌಕರ್ಯಗಳಿಗೆ ಅನುಗುಣವಾಗಿವೆ. ಕೇವಲ ಸೂರ್ಯನನ್ನು ನೋಡಿ ಕೈಮುಗಿಯುವ ನಂಬಿಕೆಯಿಂದ ಯಜ್ಞ-ಯಾಗಾದಿಗಳಿಂದ ಅರ್ಚಿಸುವ ಪರಂಪರೆಯ ಪೂಜಾ ವಿಧಿ-ವಿಧಾನಗಳಿವೆ. ಸಾಮಾನ್ಯವಾಗಿ, ಮನೆಮನೆಯಲ್ಲಿ ನಡೆದುಕೊಂಡು ಬಂದಿರುವ ಪದ್ಧತಿಯನ್ನು ಈ ಶೀರ್ಷಿಕೆಯಲ್ಲಿ ತಿಳಿಯೋಣ. ದೇವರ ಮನೆಯೆಂಬುದು ಸರಿಯಾದ ಹೇಳಿಕೆ. ವಿಶ್ವವೇ ಅವನ ಮನೆಯಾದಾಗ ಅವರಿಗೆ ಕೋಣೆ ಕಟ್ಟಿಸುವ ಹಿರಿತನ ನಮ್ಮದಾದೀತೇ?? ಅನುಕೂಲ ಮತ್ತು ಸ್ವಚ್ಛತೆಯ ದೃಷ್ಟಿಯಿಂದ ಪೂಜಾವಿಧಿಗೆ ಸೂಕ್ತಸ್ಥಳ ಕಲ್ಪಿಸಲು ಮಾತ್ರ ಈ ವ್ಯವಸ್ಥೆ. ಬರುಬರುತ್ತಾ ನಮ್ಮ ಸಂಸ್ಕೃತಿಯಲ್ಲಿ ದೇವರಮನೆ ಮಾಯವಾಗಿ ಒಂದು ದೀಪದಗೂಡಿನವರೆಗೆ ಬಂದಿದ್ದು ಕಾಣಸಿಗುತ್ತದೆ. ಪೂಜಾವಿಧಿ-ವಿಧಾನಗಳು ಮಾಯವಾಗಿ, ಸ್ನಾನ-ಸಂಧ್ಯಾದಿಗಳು ನಶಿಸಿ ಹೋಗುವ ಸ್ಥಿತಿಗೆ ಇಂದು ಬಂದಿದೆ. ಬಹುಶಃ ಇದು ನಮ್ಮ ಆಧ್ಯಾತ್ಮಿಕತೆಯ, ಸಂಸ್ಕೃತಿಗಳ ದಿವಾಳಿತನದ ಪರಮಾವಧಿ ಎಂದರೂ ತಪ್ಪಾಗಲಾರದು.

ಸ್ನಾನಾ ನಂತರ ದೀಪ ಬೆಳಗಿಸಿ ದಿನನಿತ್ಯದ ಪೂಜೆಯನ್ನು ಆರಂಭಿಸುವುದು ನಮ್ಮಲ್ಲಿನ ಪದ್ಧತಿ. ಕೆಲವರು ಮಂತ್ರಪೂರ್ವಕವಾಗಿಯೂ, ಕೆಲವರು ಸ್ತೋತ್ರಪೂರ್ವಕವಾಗಿಯೂ, ಕೆಲವರು ಭಜನೆಗಳ ಪೂರ್ವಕವಾಗಿಯೂ ಆಚರಿಸುವುದು ಕಂಡು ಬರುತ್ತದೆ.

"One Minute" ಪೂಜೆಯಿಂದ ಒಂದೊಪ್ಪತ್ತಿನ ಪೂಜೆಯವರೆಗೂ ಅವರವರ ಕಾಲಮಿತಿಗೆ ಮಾಡುವುದು ಕಂಡು ಬರುತ್ತದೆ. ಧರ್ಮದ ಆಚರಣೆಯನ್ನೂ ಸಂಪ್ರದಾಯಬದ್ಧವಾಗಿ ಮಾಡದಿದ್ದರೆ ಮುಂದಿನ ಪೀಳಿಗೆಗೆ ಹೇಗೆ ತಾನೇ ಅದು ಕೊಡಲ್ಪಟ್ಟೀತು??? ಒಂದು ಫೋಟೋದಿಂದ ನೂರು ದೇವರ ಮೂರ್ತಿಗಳ ಪೂಜಾಮಂದಿರಗಳು ಕಂಡು ಬರುತ್ತದೆ. ಏನೇ ಇರಲಿ ಮನೆಯೆಂದ ಮೇಲೆ ದೇವರಕೋಣೆ/ಪೂಜಾಸ್ಥಳ ಇಡಲೇಬೇಕು. ದಿನನಿತ್ಯವೂ ಪೂಜಾ ಕೈಂಕರ್ಯ ನಡೆಸಲೇ ಬೇಕು. ಕನಿಷ್ಠ ಒಂದು ತಾಸಾದರೂ ಜಗತ್ತಿನ ಜಂಜಡದಿಂದ ದೂರವಾಗಿ, ಶಾಂತ ಸ್ಥಿತಿಯಲ್ಲಿ ಕುಳಿತು ಧ್ಯಾನವೋ, ಭಜನೆಯೋ, ಪೂಜೆಯೋ ಮಾಡಿದರೆ ತಪ್ಪೇನು?? ಆರೋಗ್ಯದ ದೃಷ್ಟಿಯಿಂದಲೂ, ಮಾನಸಿಕ ಒತ್ತಡದಿಂದ ದೂರವಾಗಲಿಕ್ಕೂ, ಶ್ರದ್ಧಾ-ಭಕ್ತಿಗಳ ಜಾಗರಣಕ್ಕೂ ಇದು ಅನುಕೂಲ.

ಶಾಸ್ತ್ರೋಕ್ತ ಉಪನಯನಾದಿ ಸಂಸ್ಕಾರಗಳು ಆದವರು ಸಂಧ್ಯಾವಂದನಾ ವಿಧಿಯಿಂದ ಪ್ರಾರಂಭ ಮಾಡಿ ನಿತ್ಯಪೂಜೆಯನ್ನು ಮಂತ್ರಾಭಿಮುಖವಾಗಿ ವೇದಗಳ ಉಚ್ಚಾರಣೆ ಮಾಡಿದರೆ ಒಂದು ಉತ್ತಮ ವಾತಾವರಣ ಮನೆಯಲ್ಲಿ ಉಂಟಾಗುವುದರಲ್ಲಿ ಸಂಶಯವೇ ಇಲ್ಲ!!

ಇಂದಿನ ದಿನಗಳ ಕಾರ್ಯಗಳ ಒತ್ತಡದಲ್ಲಿ ಸೂಕ್ತಸಮಯ ಸಿಗದಿದ್ದರೂ ಎರಡು ಬಾರಿ ಬೇಡ, ಒಂದು ಬಾರಿಯಾದರೂ ಗಾಯತ್ರೀ ಮಂತ್ರಪಠಣ ಮಾಡಿ ಪೂಜೆ ಮಾಡುವ ಸಂಸ್ಕಾರವನ್ನು ಬೆಳೆಸಿಕೊಳ್ಳಬೇಕು. ನಮ್ಮ ಧರ್ಮದ ಅವನತಿಗೆ, ದೇಶವು ಪರತಂತ್ರವಾಗಲು ಕಾರಣ ನಮ್ಮ ಆಧ್ಯಾತ್ಮಿಕ ಶಕ್ತಿಯ ಕೊರತೆ ಎಂದರೆ ತಪ್ಪಾಗಲಾರದು. ಪ್ರಾಯಶಃ ಇಂದಿನ ಜನಾಂಗದ ಅವನತಿಗೆ ಕಾರಣ ಆಧ್ಯಾತ್ಮಿಕ ಶ್ರದ್ಧಾ-ಭಕ್ತಿಗಳ ಕೊರತೆ. ಯಾವುದನ್ನೂ ನಂಬದ, ರಾಷ್ಟ್ರದ ಭಾವನೆಯೇ ಇಲ್ಲದ ಜನಾಂಗ ಯಾವತ್ತೂ ನಾಶದ ಕಡೆಗೇ ಹೋಗುವುದು. ಈ ಕಾರಣದಿಂದ ಆಸ್ತಿಕ ಭಾವನೆಯು ಬೇರೂರಬೇಕಾದರೆ ಕೇವಲ ಬುದ್ಧಿಮತ್ತೆ, ಐಶ್ವರ್ಯ, ಭೋಗಗಳಲ್ಲಿ ಮುಳುಗಿದರೆ ನಮ್ಮ ನಾಶಕ್ಕೆ ನಾವೇ ಮುನ್ನುಡಿ ಬರೆದಂತಾದೀತು. ಹಿರಿಯರನ್ನು ಗೌರವಿಸದ, ದೇವರಲ್ಲಿ ನಂಬಿಕೆಯಿಡದ, ಭೋಗೈಶ್ವರ್ಯಗಳಲ್ಲಿ ಸುಖೋಪ ಭೋಗಗಳಲ್ಲಿ ತನ್ಮಯವಾದ ಇಂದಿನ ಯುವಜನಾಂಗ ಮುಂಬರುವ ದಿನಗಳಲ್ಲಿ ಎದುರಿಸುವ ತೊಂದರೆಗಳನ್ನು ನೆನೆಸಿಕೊಂಡರೆ ನಿಜವಾಗಿಯೂ ಭಯವಾಗುತ್ತದೆ. ನಮ್ಮ ಸುತ್ತಲಿನ ಹಳ್ಳಿಗಳು, ಪೇಟೆ-ಪಟ್ಟಣಗಳು ಕೇವಲ ವೃದ್ಧಾಶ್ರಮಗಳಾಗುತ್ತದೆ. ಭೋಗ ಸಂಸ್ಕೃತಿಯ ಪ್ರಭಾವಕ್ಕೆ ಸಿಕ್ಕ ಈ ಸಮಾಜ ಅವನತಿಗೆ ಹೋಗುವುದನ್ನು ತಡೆಯುವುದು ನಮ್ಮೆಲ್ಲರ ಬದ್ಧತೆ.

ಸ್ವಾರ್ಥಬುದ್ಧಿಯನ್ನು ತ್ಯಜಿಸಿ ಸಾಮಾಜಿಕ ಉನ್ನತಿಯನ್ನು ಸಾಧಿಸಬೇಕಾದ ಈ ಸಂದರ್ಭದಲ್ಲಿ ನಮಗೆ ನೈತಿಕತೆಯ ಆಧ್ಯಾತ್ಮದ ಒಲವು ಹೆಚ್ಚಾಗಲೇಬೇಕು. ಮನೆಯಲ್ಲಿ ದೇವರಕೋಣೆಯೇ ಇಲ್ಲದೇ ಹೋದರೆ ಮುಂದೊಂದು ದಿನ ಯಾರೂ ಉಳಿಯದ ಸ್ಥಿತಿ ಆ ಮನೆಗೆ ಬರುವುದು ನಿಶ್ಚಿತ ಎಂಬುದನ್ನು ಅರಿಯಲೇ ಬೇಕು. ದೇವರಪೂಜೆ-ಸಂಪ್ರದಾಯ, ಹಬ್ಬ-ಹರಿದಿನಗಳು ಕೊಡುವ ಮಾನಸಿಕ ನೆಮ್ಮದಿ ಇನ್ನೆಲ್ಲೂ ಸಿಗದು. ಅದನ್ನು ಉಳಿಸಿಕೊಂಡು ಬರುವ ನೈತಿಕ ಹೊಣೆ ನಮ್ಮದಲ್ಲವೇ?? ಮೇಲ್ನೋಟಕ್ಕೆ ಅನ್ನಿಸಬಹುದು. ಇವೆಲ್ಲಾ ಎಂತಹ ಗೊಡ್ಡು ಸಂಪ್ರದಾಯ ಎಂದು? ಅದರ ಒಳಹೊಕ್ಕು ಅಂತರಾರ್ಥ ಅರಿತಾಗ ಮಾತ್ರ ಅದರ ಉದಾತ್ತತೆಯ ಅರಿವು ನಮಗಾದೀತು.!!

ಒಂದು ದೇಶದ ಅಭಿವೃದ್ಧಿ ಆ ಸಮಾಜ ಅನುಸರಿಸುವ ಪದ್ಧತಿಗಳ ಮತ್ತು ನೈತಿಕತೆಯ ತಳಹದಿಯ ಮೇಲೆಯೇ ಅವಲಂಬಿತವಾಗಿದೆ. ಸದೃಢವಾದ ಸಾಮಾಜಿಕ ಸೃಷ್ಟಿ ಯಾವಾಗಲೂ ಮೂಲಭೂತವಾದ ಸಹನೆ, ಸಹಬಾಳ್ವೆಗಳ ಮೇಲೆಯೇ ರೂಪುಗೊಳ್ಳುತ್ತದೆ. ಭಾರತ ದೇಶದ ಸಂಸ್ಕೃತಿಯಲ್ಲಿ, ಈ ಮಣ್ಣಿನಲ್ಲಿ ಯಾವಾಗಲೂ ಈ ತತ್ವಗಳ ನೆಲೆ ನಿಂತಿರುವುದರಿಂದಲೇ ಪರಕೀಯರ ಆಕ್ರಮಣಕ್ಕೆ ತುತ್ತಾಗಿ ಈ ದೇಶ ಸಾವಿರ-ಸಾವಿರ ವರ್ಷಗಳ ದಾಸ್ಯಕ್ಕೆ ಬಿದ್ದಿತ್ತು.

ಸದ್ಯದ ಪರಿಸ್ಥಿತಿಯಲ್ಲಿ ದೇಶದ ಸಂಸ್ಕೃತಿಯ ಪುನರುಜ್ಜೀವನದ ಈ ಶುಭಘಳಿಗೆಯಲ್ಲಿ ನಾವೆಲ್ಲರೂ ಕೈ ಜೋಡಿಸುವುದು ಅಗತ್ಯ. ಸಮರ್ಥವಾದ ರಾಜಕೀಯ ಮುಖಂಡತ್ವದಲ್ಲಿ ನಮ್ಮ ಈ ಭವ್ಯ ಪರಂಪರೆಯ ಪುನರುತ್ಥಾನ ಆಗಬೇಕಿದೆ. ಪುಣ್ಯವಶಾತ್ ಸಮರ್ಥ ನಾಯಕತ್ವ ಇಂದು ನಮಗೆ ದೊರಕಿರುವುದು ನಮ್ಮ ಸೌಭಾಗ್ಯ. ಹಿಂದುತ್ವ, ಸನಾತನಧರ್ಮ, ಮಹಾಭಾರತ, ರಾಮಾಯಣ, ಭಗವದ್ಗೀತೆಗಳ ತತ್ವಶಃ ಅರ್ಥ ನಿರೂಪಣೆ ಆಗುತ್ತಿರುವುದು ನಿಜಕ್ಕೂ ಶ್ಲಾಘನೀಯ. ಸ್ವಾತಂತ್ರ್ಯ ನಂತರ ಈ ಭಾರತ ಕೇವಲ ಕೈಗೊಂಬೆಯಂತೆ ಆಗಿತ್ತು. ಇಂದು ಇಡೀ ಜಗತ್ತಿನಲ್ಲಿ ತನ್ನದೇ ಆದ ಸ್ಪಷ್ಟ ನಿಲುವನ್ನು ಹೊಂದಿ ಎಂತಹ ದುರಾಕ್ರಮಣವನ್ನೂ ಎದುರಿಸಿ ನಿಂತು ಯಾರಿಗೂ ತಲೆಬಾಗದೇ ಆರ್ಥಿಕವಾಗಿಯೂ ಕೂಡಾ ಸದೃಢವಾಗಿ ನಿಂತಿರುವುದು ಸಮರ್ಥ ನಾಯಕತ್ವದ ಪ್ರತಿಫಲ ಎಂದರೆ ಅತಿಶಯೋಕ್ತಿ ಆಗದು. ಒಂದು ರಾಷ್ಟ್ರದ ಕಲ್ಪನೆ ಸಮಗ್ರವಾಗಿ ಜನ-ಮನದಲ್ಲಿ ಮೂಡಬೇಕಾದರೆ ನೈತಿಕ ಹಾಗೂ ಪಾರಮಾರ್ಥಿಕವಾದ ಹಿನ್ನೆಲೆ ಬೇಕಾಗುತ್ತದೆ. ಅದಕ್ಕೆ ರೂಪಕವಾದ ಪರಿಕಲ್ಪನೆಗಳಲ್ಲಿ ದೇವಾಲಯ, ಪವಿತ್ರಕ್ಷೇತ್ರಗಳ ಪುನರುತ್ಥಾನ ಮತ್ತು ಪುನರುಜ್ಜೀವನ ಎರಡೂ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ನಾವುಗಳು ಎಚ್ಚೆತ್ತುಕೊಂಡು ಸ್ವಧರ್ಮದ ಪುನರುತ್ಥಾನಕ್ಕೆ ನಮ್ಮ ಭವ್ಯ ಸಂಸ್ಕೃತಿಗಳ ಪರಂಪರೆಯ ಉಜ್ವಲ ಭವಿಷ್ಯಕ್ಕೆ ಶ್ರಮಿಸುವ ಪ್ರತಿಜ್ಞೆಯೊಂದಿಗೆ ಕಟಿಬದ್ಧರಾಗೋಣ.

ಮುಂದಿನ ಸಂಚಿಕೆಯಲ್ಲಿ ಪೂಜಾವಿಧಿಗಳ ಪ್ರಕಾರ-ಹಾಗೂ ಕ್ರಮಗಳ ಬಗ್ಗೆ ತಿಳಿದುಕೊಳ್ಳೋಣ.

**"ರಾಷ್ಟ್ರಂ ಧಾರಾಯತಾಂ ಧ್ರುವಂ"**

**ಮುಂದುವರಿಯುವುದು......**

# ಮತ್ತೆ ಆವರಿಸಿತು ನೋವಿನ ಕಾರ್ಮೋಡ



✍ ಗಣೇಶ್ ಜೋಶಿ

## ವತ್ಸಲೆ

ವತ್ಸಲಾಳ ಮನೆಯಲ್ಲಿ ಆ ಸಂಜೆ ಕತ್ತಲು ನೋವಿನ ಹೊದಿಕೆಯನ್ನು ಹೊದ್ದಿತ್ತು. ಆಸ್ಪತ್ರೆ ಸೇರುವ ಮೊದಲೇ ಕೊನೆಯುಸಿರೆಳೆದಿದ್ದ ವತ್ಸಲಾಳ ಮಾವ, ಅಂಬುಲೆನ್ಸ್‌ನಲ್ಲಿ ಬಿದ್ದಂತೆಯೇ ಜೀವವಿಲ್ಲದ ಮೌನ. ಅಂಬುಲೆನ್ಸ್‌ನ ಮಿಂಚುವ ಬೆಳಕಿನಲ್ಲಿ ವೈದ್ಯರು ಹೃದಯದ ಬಡಿತವನ್ನು ವೀಕ್ಷಿಸಿ, ನಿರಾಸೆಯ ಭಾವವನ್ನು ತೋರಿದ ಆ ಕ್ಷಣದಲ್ಲಿ ಎಲ್ಲರ ಮನಸ್ಸಿನಲ್ಲಿಯೂ ನೋವಿನ ಕಾರ್ಮೋಡ ಆವರಿಸಿತು.

"ಮನೆಗೆ ವಾಪಸ್ಸಾಗುವುದು ಸೂಕ್ತ... ಮಾಡಬೇಕಾದದ್ದು ಇನ್ನೇನೂ ಉಳಿದಿಲ್ಲ," ಎಂದು ವೈದ್ಯರ ಗಂಭೀರ ಸ್ವರ ಅಲ್ಲಿಯವರ ಕಿವಿಯಲ್ಲಿ ಹೂಳಂತೆ ಉಳಿಯಿತು. ಶವವನ್ನು ಮನೆಗೆ ವಾಪಸ್ಸು ತರುವ ಚಿಂತನೆ ಶುರುವಾಯಿತು. ಎಲ್ಲರ ಮೊಗದಲ್ಲಿ ಪ್ರಶ್ನಾರ್ಥಕ ಚಿಹ್ನೆ..! ಮನೆಯಲ್ಲಿ ಸಂಭ್ರಮದ ಕ್ಷಣವಾಗಿತ್ತು. ಆದರೆ ಇದೀಗ ಸೂತಕ ಆವರಿಸಿಬಿಟ್ಟಿತು. ಜೀವನವೇ ಹೀಗೆ. ದೇವರಿಚ್ಛೆ ನೋಡಿ, ಏನೋ ಆಗಿ ಹೋಯ್ತು.. ಮುಂದೇನು ಮಾಡೋಣ ಎಂದು ಅವರವರೇ ಮಾತನಾಡಿಕೊಂಡು, ಮನೆಗೆ ವಾಪಸ್ಸಾಗಲು ಅದೇ ಅಂಬ್ಯುಲೆನ್ಸ್ ನ ಮುಖ ತಿರುಗಿಸಿದರು.

ಅದೇ ಕ್ಷಣದಲ್ಲಿ ಮನೆಯಲ್ಲಿದ್ದ, ಮಾಯಾಳ ಮುಖದಲ್ಲಿ ಅಚಾನಕ ಏನೋ ಭಾರ... ಏನೋ ಹೇಳಲಾಗದ ನೋವು, ಆ ಮುಗ್ಧ ಮಗುವಿನ ಮುಖದಲ್ಲಿ ಕಾಣಿಸಿಕೊಂಡಿತು. ಮನೆಯಲ್ಲಿದ್ದ ಎಲ್ಲರಲ್ಲಿಯೂ ಆತಂಕ ಮನೆ ಮಾಡಿದೆ. ಮನೆಗೆ ಬಂದಿದ್ದ ನೆಂಟರು ಇಷ್ಟದವರು, ಸ್ನೇಹಿತರು ಎಲ್ಲರೂ ಬಂದಿರುವಾಗ ಮನೆಯಲ್ಲಿ ಒಂದು ದುರ್ಘಟನೆ ನಡೆಯಿತಲ್ಲ ಎಂಬುದು ಹೇಳಲಾಗದ ನೋವು ಎಲ್ಲರ ಮುಖದಲ್ಲಿ ಕಾಣುತ್ತಿದೆ.

"ಇದೇನು ಕಾಲಗುಣವೋ! ಜನ್ಮಜಾತ ದೋಷ, ಮಗುವಿನ ಹೆಜ್ಜೆಯಿಂದಲೇ ತುಂಬಾ ಅವಾಂತರ," ಎಂದು ಮನೆಯ ಹಿರಿಯ ಮಹಿಳೆಯರ ಗುಸುಗುಸು ಪ್ರಾರಂಭವಾಯಿತು. ಮಾಯಾಳ ಹಸುಳೆತನದ ಆ ಮನಸ್ಸು ಅದನ್ನು ಅರ್ಥಮಾಡಿಕೊಳ್ಳುವಂತೇನೂ ಇರಲಿಲ್ಲ. ಆದರೆ ದೂಷಣೆಗಳಿಗೆ ಆಕೆ ಗುರಿಯಾಗುತ್ತಿದ್ದಳು.

'ಅವಳು ಮನೆಗೆ ಬಂದ ದಿನದಿಂದ ಸಮಸ್ಯೆ.. ಏನೋ... ಯಾವುದೋ ಅಶುಭ.' ಹೀಗೇ ಮಾತುಗಳು ಬಿರುಗಾಳಿ ತರಹ ಬೀಸತೊಡಗಿದವು. ಮಾಯಾಳ ಬಗ್ಗೆ ಈ ಮಾತುಗಳು ತಾಯಿ ವತ್ಸಲೆಯ ಕಿವಿಗೂ ಬಡಿಯಿತು. ಕಂಗಳು ಕೆಂಪಾದವು. ಒಮ್ಮೆ ಗದರಿಬಿಡೋಣ ಎಂದು ಬಾಯಿ ಎತ್ತುವಷ್ಟರಲ್ಲಿ, ಮಾಯಾ ತಾಯಿಯ ಬೆರಳನ್ನು ಹಿಡಿದುಕೊಂಡಳು. ಇದು ಸಾವರಿಸುವ ಸಂಕೇತವೇ ಎಂದರಿತಳು ವತ್ಸಲಾ. ಸುಮ್ಮನಾದಳು. ಆದರೆ ಆ ನೋವಿನಲ್ಲಿ ಕುದಿದುಹೋದಳು ವತ್ಸಲಾ. ಮಗಳಿಗೆ ಬಂದ ಮಾತು ಈಕೆಯ ಕಿವಿಯ ತಮಟೆಯನ್ನು ತೂತಾಗಿಸಿತು.

ರಣಕರ್ಕಶ ಶಬ್ಧದೊಂದಿಗೆ ಶವ ಮನೆಗೆ ವಾಪಸ್ಸಾಯ್ತು. ಕರಗದ ದೊಡ್ಡ ಕಲ್ಲಿನಂತೆ ಎಲ್ಲರ ಮನವೂ ಭಾರವಾಯಿತು. ಮನೆಯಲ್ಲಿ ಆಗಲೇ ತುಂಬಿದ್ದ ನೂರಾರು ಜನರು ಮನದಿಂಗಿತವನ್ನೇ ಹೌದೆಂಬಂತೆ ಮಾತಾಡುತ್ತಿದ್ದರೆ, ಶವ ಬರುವ ಹೊತ್ತಿಗಾಗಲೇ ಮಾತುಗಳು ಮೂಕವಾಗಿತ್ತು. ಆದರೆ ಆ ದಿನದ ರಾತ್ರಿ... ಆ ಮನೆಯಲ್ಲಿ ಕಾಣಿಸದ ಗಾಳಿಯೊಂದು ಬೀಸಿತು.

ಮನೆಯ ದೀಪಗಳು ಒಂದಾದ ಮೇಲೊಂದು ಮಿಂಚಿ ನಿಶ್ಚಲವಾಗುತ್ತಾ ಬೆಳಕಿನಿಂದ ಕತ್ತಲೆಗೆ ಬಿದ್ದವು. ಗೋಡೆಯ ಮೇಲಿನ ಗಡಿಯಾರದ ಸೂಚಿಗಳು ನಿಂತಂತೆ ಭಾಸವಾಗಿತ್ತು.

ಮನೆಯಲ್ಲಿ ಅಜ್ಞಾತ ಮೌನದಲ್ಲೇ ಪ್ರಾಣದ ಉಸಿರು ಮಡುಗಟ್ಟಿದಂತೆ ಅನುಭವವಾಯಿತು.

ಮಾಯಾಳಿಗೆ ನಿದ್ರೆ ಬರಲಿಲ್ಲ. ತಾಯಿ ವತ್ಸಲಾಳೂ ಈವರೆಗಿನ ಮಾತಿನಿಂದ ಹೆದರಿ ಹಾಸಿಗೆಯ ಮೇಲೆ ಕುಳಿತಿದ್ದಳು. ತಲೆಗೊಂದು ಮಾತಾಡುವವರಿಗೆ ಉತ್ತರ ಕೊಡಲೇನಿದೆ? ಎಂದುಕೊಂಡಳು ಆಕೆ. ಅತ್ತೆ ಅತ್ತು ಅತ್ತು ನಿತ್ರಾಣಾಗಿ ಗೋಡೆಗೆ ಒರಗಿಕೊಂಡಳು. ವತ್ಸಲಾಳಿಗೆ ಏನು ಮಾಡಬೇಕು ತೋರಲಿಲ್ಲ. ಒಂದೆಡೆ ಮಗು, ಇನ್ನೊಂದೆಡೆ ಗಂಡನನ್ನು ಕಳೆದುಕೊಂಡ ಅತ್ತೆಯ ಆಕ್ರಂದನ. ವಿಲವಿಲನೆ ಒದ್ದಾಡಿದಳು ವತ್ಸಲಾ.

ಇಹಲೋಕ ತ್ಯಜಿಸಿದವರ ಅಂತಿಮ ಸಂಸ್ಕಾರ ಮನೆಯಲ್ಲಿ ನಡೆಯುತ್ತಿದ್ದು, ನೆನಪುಗಳ ಸುಗಂಧದಲ್ಲಿ ಅವರ ಜೀವನಗಾಥೆ ಮೌನವಾಗಿ ಪ್ರತಿಧ್ವನಿಸುತ್ತಿದೆ. ಮನೆಯ ಆವರಣದಲ್ಲಿ ನಡೆಯುತ್ತಿರುವ ಅಂತ್ಯ ಸಂಸ್ಕಾರದ ಪ್ರಕ್ರಿಯೆಗಳು, ಕುಟುಂಬದ ಹೃದಯಗಳಲ್ಲಿ ಅಳಲಿನ ಜ್ಯೋತಿಯಾಗಿ ಶಾಶ್ವತವಾಗಿ ಉಳಿಯುತ್ತಿವೆ. ಮನೆಯಲ್ಲೇ ನಡೆದುಹೊರಟಿರುವ ಅಂತ್ಯ ಸಂಸ್ಕಾರ, ಪ್ರೀತಿಯೊಂದು ಮೌನವಾಗಿ ವಿದಾಯ ಹೇಳುವ ಕ್ಷಣಕ್ಕೆ ಸಾಕ್ಷಿಯಾಗಿದೆ. ಮನೆಯೊಳಗಿನ ಅಂತ್ಯ ಸಂಸ್ಕಾರದ ವಿಧಿವಿಧಾನಗಳು, ಆತ್ಮಕ್ಕೆ ಶಾಂತಿ ನೀಡುವ ಮೃದು ಪ್ರಾರ್ಥನೆಯಾಗಿ ಬದಲಾಗಿವೆ. ಗೃಹದಲ್ಲಿ ನಡೆಯುತ್ತಿರುವ ಅಂತ್ಯ ಸಂಸ್ಕಾರ, ಜೀವನಯಾನದ ಸ್ಮರಣೆಗಳನ್ನು ಮೌನದ ಅಲೆಯನ್ನು ಎಬ್ಬಿಸುತ್ತಿದೆ.

ಮನೆಯ ಒಣಗಿದ್ದ ಕಂಗಳಲ್ಲೇ ಕತ್ತಲಂತೆ ಮೌನ ನೆಲಸಿತ್ತು. ವತ್ಸಲಾಳ ಮಾವನು ತೀರಿಕೊಂಡ ಸುದ್ದಿ ಬಂದ ಕೆಲವೇ ಗಂಟೆಗಳಲ್ಲಿ, ಮನೆಯೊಳಗೆ ಕಹಿ ಮಾತುಗಳು ಗಾಳಿ ಹಾಗೆ ಹರಡತೊಡಗಿದವು. "ಮಾಯಾಳೇ ಕಾರಣ..." "ಅವಳು ಬಂದಮೇಲೆ ಮನಶಾಂತಿ ಎಲ್ಲಿ ನಮ್ಮ ಮನೆಯಲ್ಲಿತ್ತು...?" ಈ ಮಾತುಗಳು ಕೂಗಿದಂತಿರಲಿಲ್ಲ. ಆದರೆ ಪ್ರತಿಯೊಂದು ಪದವೂ ವತ್ಸಲಾಳ ಮನಸ್ಸಿನ ಮೇಲೆ ಕತ್ತಿಯ ಸರಪಳಿಯಂತೆ ಬಿದ್ದು ಚಿಮ್ಮುತ್ತಿತ್ತು.


ಅವಳು ಮಾತು ಆಡಲಾರದೆ, ಅಳಲಾರದೆ ಕಂಗಾಲಾಗಿ ಕಿಟಕಿಯಂಚಿನಲ್ಲಿ ಕೂತಿದ್ದಳು.

ಬೇಸರದ ಹೊರೆ ಎಷ್ಟೇ ಹೃದಯದಲ್ಲಿ ಒತ್ತಿಕೊಂಡರೂ, ಕಣ್ಣು ಕೊನೆಗೆ ದ್ರೋಹ ಮಾಡಿತು ನೀರಿನ ಹನಿಗಳು ಮೌನವಾಗಿ ಕೆನ್ನೆಯಂಚುಗಳಿಂದ ಉರುಳತೊಡಗಿದವು.

'ಮಾಯಾಳೇ ಕಾರಣ..' ಇದು ಅವಳು ಒಪ್ಪದ ವಾದ. ಆದರೆ ಮನೆಮಂದಿಯ ತೀರ್ಪು ಏನು ಬೇಕಾದರೂ ನಂಬಿಕೊಂಡಂತೆ, ಅವಳ ದೃಷ್ಟಿ ನಿಧಾನವಾಗಿ ನೆಲಕ್ಕೆ ಜಾರಿತ್ತು.

ತಾಯಿಯ ಹೃದಯಕ್ಕೆ ಮಗಳು ತಪ್ಪೆಂದು ಯಾರಾದರೂ ಹೇಳಿದ ಕ್ಷಣ. ವಿದ್ರಾವಕದ ಮೌನವೇ ಉತ್ತರ. ಅವಳೊಳಗಿನ ಮಾತಿಲ್ಲದ ಆಕ್ರಂದನಕ್ಕೆ ಗೋಡೆಯೂ ಸಾಕ್ಷಿಯಾಗಿತ್ತು.

# ರೋಗದ ಕಪಿಮುಷ್ಟಿಯಿಂದ ಹೊರತರುವ ಭದ್ರಮುಷ್ಟಿ



✍ ಡಾ. ವೆಂಕಟೇಶ ಗಾಂವಕಾರ

ವೇದ ವೆಲ್ನೆಸ್ ಸೆಂಟರ್ ನಿಸರ್ಗಮನೆ, ಶಿರಸಿ

8762904831

## ವೈದ್ಯವಾಕ್ಯ

ಮನೆಯಂಗಳದಲ್ಲಿದ್ದರೂ ಇಲ್ಲಿಯವರೆಗೆ ಗೊತ್ತಿರದ ಔಷಧೀಯ ಸಸ್ಯ ಇದು.

ಆಯುರ್ವೇದ ಶಾಸ್ತ್ರದಲ್ಲಿ ಮುಸ್ತ ಎಂಬ ಹೆಸರುಳ್ಳ ಇದರ ಕನ್ನಡ ಹೆಸರು ಭದ್ರಮುಷ್ಟಿ. ಕೆಲವು ಭಾಗದಲ್ಲಿ ಕೊನ್ನಾರಿ ಗಡ್ಡೆ ಇನ್ನುಕೆಲವು ಊರುಗಳಲ್ಲಿ ತುಂಗೆ ಗಡ್ಡೆ ಎಂದು ಕರೆಯುವುದುಂಟು. ಇದರ ಇಂಗ್ಲಿಷ್ ಹೆಸರು ನಟ್ ಗ್ರಾಸ್. ಇತ್ತೀಚೆಗೆ ಸುದ್ದಿಗೆ ಬರಲು ಕಾರಣ ಇದಕ್ಕಿರುವ ವೈರಸ್ ನಿರೋಧಕ ಮತ್ತು ರೋಗ ನಿರೋಧಕ ಗುಣ. ಮಣ್ಣಿನ ಅಂಗಳವಿರುವ ಮನೆಮುಂದೆ ಹುಲ್ಲಿನಂತೆ ಬೆಳೆದಿರುತ್ತದೆ.

ಎಷ್ಟು ಕಿತ್ತರೂ ಮತ್ತೆ ಹುಟ್ಟುತ್ತದೆ. ಏಕೆಂದರೆ ಇದನ್ನು ಕಿತ್ತರೆ ಹುಲ್ಲಿನಂತಿರುವ ಭಾಗ ಮಾತ್ರ ಕಿತ್ತು ಬರುವುದೇ ಹೊರತು ಬೇರು ಹೊರಬರುವುದಿಲ್ಲ. ಹಾಗಾಗಿ ಮತ್ತೆ ಚಿಗುರುತ್ತದೆ. ಹೀಗೆ ನೆಲದಲ್ಲಿ ಇದರ ಗಡ್ಡೆಯು ಭದ್ರವಾಗಿರುವ ಕಾರಣದಿಂದಲೇ ಇದಕ್ಕೆ ಭದ್ರಮುಷ್ಟಿ ಎಂದು ಕರೆಯುವುದು. ಇದರ ಔಷಧೀಯ ಭಾಗ ಎಂದರೆ ಕಪ್ಪು ಬಣ್ಣದ ಗಡ್ಡೆ ರೂಪದ ಬೇರು.

ಇದನ್ನು ಸೇವಿಸಿದಾಗ ನಮ್ಮ ದೇಹದಲ್ಲಿ ಭದ್ರವಾಗಿ ನೆಲೆಯೂರಿದ ಕೆಲವು ರೋಗಗಳನ್ನು, ಸೂಕ್ಷ್ಮಾಣು ಜೀವಿಗಳನ್ನು ಬೇರು ಸಮೇತ ಕೀಳುವ ಶಕ್ತಿ ಇದಕ್ಕಿದೆ. ಆಯುರ್ವೇದ ಗ್ರಂಥಗಳು ಇದರ ಗುಣಗಳ ಬಗ್ಗೆ ತುಂಬಾ ಹೊಗಳಿವೆ. ಇತ್ತೀಚಿನ ಸಂಶೋಧನೆಗಳೂ ಕೂಡಾ ಇದಕ್ಕೆ ವೈರಸ್, ಬ್ಯಾಕ್ಟಿರಿಯಾ ಮುಂತಾದ ಸೂಕ್ಷ್ಮಾಣು ಜೀವಿಗಳನ್ನು ನಾಶಪಡಿಸುವ ಗುಣ, ದೇಹದಲ್ಲಿನ ವಿಷಾಂಶವನ್ನು ಕಡಿಮೆ ಮಾಡುವ ಗುಣ ಮತ್ತು ಆಂಟಿ-ಆಕ್ಸಿಡೆಂಟ್ ಗುಣಗಳಿವೆ ಎಂಬುದನ್ನು ಸಾಬೀತು ಪಡಿಸಿವೆ. ಇನ್ನೂ ವಿಶೇಷವೆಂದರೆ ಮದ್ದಿಲ್ಲದ, ನಿಯಂತ್ರಿಸಲಾಗದ ವೈರಸ್ ಆದ ಹೆಪಟೈಟಿಸ್-ಬಿ ಯನ್ನು ತಕ್ಕ ಮಟ್ಟಿಗೆ ಹತೋಟಿಯಲ್ಲಿಡುವ ಶಕ್ತಿ ಇದಕ್ಕಿದೆ ಎಂದು ಸಂಶೋಧನೆಯೊಂದು ಹೇಳುತ್ತದೆ. ಅಂದರೆ ಇದರ ತಾಕತ್ತು ಏನೇಂಬುದನ್ನು ಅರ್ಥ ಮಾಡಿಕೊಳ್ಳಬಹುದು. ಇದಕ್ಕೆ ತಂಪಗುಣವಿದೆ. ಜ್ವರವನ್ನು ಕಡಿಮೆ ಮಾಡುವ ಗುಣವಿದೆ.

ಬಹುತೇಕ ಜನರಿಗೆ ಜ್ವರ ಬಂದಾಗ ತೆಗೆದುಕೊಂಡ ಔಷಧಿಗಳ ಕಾರಣದಿಂದ ಆಗುವ ಉಷ್ಣದಿಂದ ತೊಂದರೆಯಾಗುತ್ತದೆ. ಆಗ ಇದರ ಕಷಾಯವನ್ನು ಕುಡಿಯುವುದರಿಂದ ದೇಹ ತಂಪಾಗುತ್ತದೆ, ಚೆನ್ನಾಗಿ ಬೆವರಿ ಜ್ವರ ಕಡಿಮೆಯಾಗುತ್ತದೆ. ಇದರ ವಿಶೇಷತೆ ಏನೆಂದರೆ ಇದರ ಗುಣ ತಂಪಾಗಿದ್ದರೂ ಇದು ಜೀರ್ಣಕ್ರಿಯೆ ಚೆನ್ನಾಗಿ ಆಗುವಂತೆ ಮಾಡುತ್ತದೆ. ಮುಟ್ಟಿನ ಸಮಯದ ರಕ್ತಸ್ರಾವ ಚೆನ್ನಾಗಿ ಆಗುವಂತೆ ಮಾಡುತ್ತದೆ. ಚೆನ್ನಾಗಿ ಬೆವರು ಬರುವಂತೆ ಮಾಡುತ್ತದೆ. ಆಮಶಂಕೆ ಅಥವಾ ಪದೇ ಪದೇ ಭೇದಿಯಾಗುವ ಸಮಸ್ಯೆ ಇರುವವರಿಗೆ ಇದು ಅತ್ಯಂತ ಲಾಭದಾಯಕವಾದದ್ದು. ಜೀರ್ಣಶಕ್ತಿಯನ್ನು ಹೆಚ್ಚಿಸಿ, ಮಲ ಸರಿಯಾಗಿ ತಯಾರಾಗುವಂತೆ ಮಾಡಿ ಮೂಲ ಕಾರಣದಿಂದ ಸಮಸ್ಯೆಗೆ ಪರಿಹಾರ ಕೊಡುತ್ತದೆ.

ಆಮಶಂಕೆಯ ಸಮಸ್ಯೆ ಇರುವವರು ಭದ್ರಮುಷ್ಟಿ ಮತ್ತು ಒಣಶುಂಠಿಯ ಪುಡಿಗಳನ್ನು ಸಮ ಪ್ರಮಾಣದಲ್ಲಿ ಸೇರಿಸಿಟ್ಟುಕೊಂಡು ದಿನಕ್ಕೆರಡು ಬಾರಿ ಅರ್ಧ ಚಮಚ ಮಿಶ್ರಣವನ್ನು ಮಜ್ಜಿಗೆಯಲ್ಲಿ ಸೇವನೆ ಮಾಡಬೇಕು. ವಾಂತಿ ಮತ್ತು ಭೇದಿ ಒಟ್ಟಿಗೆ ಆಗುತ್ತಿದ್ದರೂ ಶುಂಠಿ ಮತ್ತು ಇದರ ಕಷಾಯ ಮಾಡಿ ಕುಡಿಯುತ್ತಿದ್ದರೆ ಸರಿಯಾಗುತ್ತದೆ. ಜ್ವರ ಮತ್ತು ಭೇದಿ ಒಟ್ಟಿಗೆ ಇದ್ದರೆ ಭದ್ರಮುಷ್ಟಿ ಅತ್ಯುತ್ತಮವಾದ ಔಷಧ. ಚಿಕ್ಕ ಮಕ್ಕಳಿಗೂ ಇದನ್ನು ಕೊಡಬಹುದು. ಹೊಟ್ಟೆ ತೊಳಸುವುದು ಮತ್ತು ಬಾಯಿ ರುಚಿ ಇಲ್ಲದಂತಾಗಿದ್ದರೆ ನಾಲ್ಕು ಚಿಟಿಕೆ ಭದ್ರಮುಷ್ಟಿಯ ಪುಡಿಯನ್ನು ಜೇನುತುಪ್ಪದಲ್ಲಿ ಕಲಸಿ ದಿನಕ್ಕೆರಡು ಬಾರಿ ಖಾಲಿ ಹೊಟ್ಟೆಯಲ್ಲಿ ತೆಗೆದುಕೊಳ್ಳಬೇಕು.

ಉಷ್ಣವಾಗಿ ಮೂತ್ರದ ಪ್ರಮಾಣ ಕಡಿಮೆಯಾಗಿ ಉರಿಮೂತ್ರವಾಗುತ್ತಿದ್ದರೆ ಭದ್ರಮುಷ್ಟಿ ಮತ್ತು ಲಾವಂಚವನ್ನು ಮೂರು ಮೂರು ಗ್ರಾಂನಷ್ಟು ಹಾಕಿ ಕಷಾಯ ಮಾಡಿ ಸೇವನೆ ಮಾಡಿದರೆ ತಂಪಾಗಿ, ಮೂತ್ರದ ಪ್ರಮಾಣ ಹೆಚ್ಚಾಗಿ ಸಮಸ್ಯೆ ನಿವಾರಣೆಯಾಗುತ್ತದೆ. ಎದೆಹಾಲನ್ನು ಹೆಚ್ಚಿಸುವ ಗುಣವೂ ಇದಕ್ಕಿದೆ. ಜೊತೆಗೆ ಇದು ಎದೆಹಾಲನ್ನು ಶುದ್ಧವಾಗಿಸುತ್ತದೆ. ಹೀಗಾಗಿ ಹಾಲುಣಿಸುವ ತಾಯಿಯು ದಿನಕ್ಕೆ ನಾಲ್ಕು ಚಿಟಿಕೆ ಇದರ ಪುಡಿಯನ್ನು ಹಾಲು ಅಥವಾ ಬಿಸಿ ನೀರಿನಲ್ಲಿ ಕುಡಿದರೆ ಎದೆಹಾಲು ಶುದ್ಧವಾಗಿ ಮಗುವಿನ ಜೀರ್ಣಕ್ರಿಯೆ ಚೆನ್ನಾಗಿ ಆಗುತ್ತದೆ; ಭೇದಿ ಸರಿಯಾಗುತ್ತದೆ; ರಕ್ತ ಶುದ್ಧಿಯಾಗುತ್ತದೆ. ಹೊಟ್ಟೆಯಲ್ಲಿನ ಕ್ರಿಮಿಗಳನ್ನು ನಾಶಪಡಿಸುವ



ಗುಣ ಇದಕ್ಕಿದ್ದು 3 ಗ್ರಾಂ ನಷ್ಟು ಒಣಗಿದ ಪಪ್ಪಾಯಿ ಬೀಜದ ಚೂರ್ಣ ಮತ್ತು ಮೂರು ಗ್ರಾಂ ನಷ್ಟು ಭದ್ರಮುಷ್ಟಿಯ ಚೂರ್ಣಗಳನ್ನು 100 ಮಿಲಿ ಬಿಸಿನೀರಿನ ಜೊತೆ ಬೆಳಿಗ್ಗೆ ಮತ್ತೆ ಸಂಜೆ ಖಾಲಿ ಹೊಟ್ಟೆಯಲ್ಲಿ 10 ದಿನ ಸೇವಿಸುವುದರಿಂದ ಕ್ರಿಮಿಬಾಧೆ ನಿವಾರಣೆಯಾಗುತ್ತದೆ.

ಗುಣವೂ ಇದಕ್ಕಿದೆ. ಇದರ ಸೇವನೆಯಿಂದ ಕೂದಲು ಚೆನ್ನಾಗಿ ಬೆಳೆಯುತ್ತದೆ. ರಕ್ತಶುದ್ಧಿಯಾಗುವ ಕಾರಣ ಗಾಯಗಳು ಬೇಗ ಗುಣವಾಗುತ್ತವೆ. ರೋಗ ನಿರೋಧಕ ಶಕ್ತಿ ಹೆಚ್ಚಿಸಲು ಅಮೃತ ಬಳ್ಳಿ, ನೆಲನೆಲ್ಲಿ, ಶುಂಠಿಗಳ ಜೊತೆ ಇದನ್ನೂ ಹಾಕಿ ಕಷಾಯ ಮಾಡಿ ಕೆಲ ದಿನಗಳ ಕಾಲ ಸೇವಿಸಬೇಕು. ಇದು ಎಲ್ಲಾ ಗ್ರಂಥಿಕೆ ಅಂಗಡಿಗಳಲ್ಲಿ ಸಿಗುತ್ತದೆ. ಇದರ ಗಡ್ಡೆಗಳನ್ನು ಒಡೆದು ಆಘ್ರಾಣಿಸಿದರೆ ಮನಸ್ಸಿಗೆ ಖುಷಿ ಕೊಡುವ ಸುವಾಸನೆ ಇರುವುದು ಗೊತ್ತಾಗುತ್ತದೆ. ನಾವು ರೋಗಗಳ ಕಪಿಮುಷ್ಟಿಯಿಂದ ಹೊರಬರಬೇಕಾದರೆ ಈ ಭದ್ರಮುಷ್ಟಿಯನ್ನು ಕ್ರಮಬದ್ಧವಾಗಿ ಬಳಸಬೇಕಾಗುತ್ತದೆ.




ತತ್ವನಿಷ್ಠ
ನಾಡಿನ ನಿಖರ ನುಡಿ
ನವೆಂಬರ್ | 30 | 2025
ರವಿವಾರ

# ಪಾರಿಜಾತ

ಬುದ್ಧಿ, ಭಾವದ ಘಮಲು

ಚಿತ್ರ: ರವಿಂದ್ರ ದುಂಡಿ



## ಆಧುನಿಕ ಬೇತಾಳದ ನೀತಿ ಕತೆಗಳು -3

ORIGINAL 100% ORIGINAL

# ಯಾವ ನಂಬುಗೆಯೂ ದುಡ್ಡಿನಷ್ಟು ದೊಡ್ಡದಲ್ಲ!



**ಬೇ**ತಾಳ ಎಂದಿನಂತೆ ಮಾವಿನ ಗಿಡದಲ್ಲಿ ತಲೆಕೆಳಗಾಗಿ ನೇತಾಡುತ್ತಿತ್ತು. ವಾರದ ಕತೆ ಕೇಳಲು ಅದಾಗಲೇ ಜನ ಸೇರಿದ್ದರು. ಕತೆ ಹೇಳಲು ತುಂಬಾ ಬಾಕಿಯಿದ್ದರೂ ಸಂದರ್ಭಾನುಸಾರ ಹೇಳಬೇಕು. ಯಾವ್ಯಾವಾಗೋ ಯಾವುದೋ ಕತೆ ಹೇಳಿದರೆ ಅನರ್ಥವಾದೀತು. ಬೇತಾಳದಂತೆಯೇ ಕತೆ ಹೇಳಲು ಹೋಗಿ ನಗೆಪಾಟಲಿಗೀಡಾದವರೂ ಇದ್ದಾರೆ ಎನ್ನುವುದನ್ನು ನೆನಪಿಸಿಕೊಂಡು, ಇಂದಿನ ದಿನಕ್ಕೆ ಸೂಕ್ತವಾದ ಕತೆ ಆರಿಸಿಕೊಂಡು ಹೇಳಲು ಆರಂಭಿಸಿತು. ನೀನೇ ಹೇಳಿದ ಕತೆಯೊಂದನ್ನು ನಾನು ಹೇಳಲೆ? ಇಂದು ನೀನು ನೀನೇ ಹೇಳಿದ ಕತೆಯನ್ನು ಆಲಿಸು ಎಂದು ವ್ಯಕ್ತಿಯೊಬ್ಬರು ಎದ್ದು ನಿಂತರು. ಕತೆ ಕೇಳಲು ಕುಳಿತವರು ನಿಶ್ಯಬ್ದರಾದರು. ವ್ಯಕ್ತಿಯ ಕತೆ ಆರಂಭವಾಯಿತು.

ಅದೊಂದು ಊರು. ಆ ಊರಿನಲ್ಲಿ ಪ್ರತಿಷ್ಠಿತ ಬ್ಯಾಂಕಿನ ಚುನಾವಣೆ ನಡೆಯುತ್ತಿತ್ತು. ಮತದಾನ ಆರಂಭವಾಗಿತ್ತು. ಯಾವ್ಯಾವುದೋ ರೆಸಾರ್ಟ್‌ನಲ್ಲಿ ರಾತ್ರಿ ಕಳೆದವರು, ಹತ್ತು ಹದಿನೈದು ದಿನದಿಂದ ಅಲ್ಲೇ ವಾಸಿಸುತ್ತಿರುವವರು, ಮತಕ್ಕೆ ಹಣ ಪಡೆದು ಬೇರೆ ಯಾರಿಗೂ ಸಿಗಬಾರದು ಎಂದು ಹೊರ ರಾಜ್ಯಕ್ಕೆ ಟೂರ್ ಹೋದವರು, ಹಣ ತೆಗೆದುಕೊಂಡಿದ್ದಕ್ಕೆ ಹೆಂಡತಿ ಮಕ್ಕಳು, ತೋಟ ಮನೆಯನ್ನೇ ಮರೆತವರು, ನೆಟ್‌ವರ್ಕ್ ಸಿಗಲಾರದ ಸಂಬಂಧಿಕರ ಮನೆ ಹುಡುಕಿ ಉಳಿದುಕೊಂಡವರು ಹೀಗೆ ಎಲ್ಲೆಲ್ಲೋ ಇರುವವರು ತಮ್ಮ ಟೀಮ್ ಲೀಡರ್ ಕಳುಹಿಸಿಕೊಟ್ಟ ವಾಹನದಲ್ಲಿ ಮತಗಟ್ಟೆಗೆ ಬಂದು ಮತ ಚಲಾಯಿಸುತ್ತಿದ್ದರು. ಬೇತಾಳ ಅದೃಶ್ಯನಾಗಿ ಏನೇನು ನಡೆಯುತ್ತದೆ ಎಂದು ಕುತೂಹಲದಲ್ಲಿ ವೀಕ್ಷಿಸುತ್ತಿತ್ತು ಎನ್ನುತ್ತ ಬೇತಾಳದತ್ತ ವೀಕ್ಷಿಸಿದ. ಕತೆ ಮುಂದುವರಿಯಲಿ ಎಂದು ಬೇತಾಳ ಸೂಚನೆ ಕೊಟ್ಟಿತು.

ಕತೆ ಮುಂದುವರಿಯಿತು. "ಅಷ್ಟರಲ್ಲೇ ಬಾದಾಮಿಮರದ ಕೆಳಗೆ ಇಬ್ಬರು ಬಂದು ನಿಂತರು. ಅವರು ಆಗಷ್ಟೇ ಮತ ಹಾಕಿ ಬಂದವರೆಂಬ ಗುರುತನ್ನು ಅವರ ಬೆರಳಿಗೆ ಹಾಕಿರುವ ಮಸಿ ಹೇಳುತ್ತಿತ್ತು. ಅವರಿಬ್ಬರೂ ಒಂದೊಂದು ಸೊಸೈಟಿಯ ಅಧ್ಯಕ್ಷರೆನ್ನುವುದು ಅವರ ಮಾತಿನಿಂದ ಅರಿವಾಯಿತು. ಅವರ ಮುಖದಲ್ಲಿ ಗಾಬರಿ, ತಾವು ತಪ್ಪು ಮಾಡಿದ್ದೇವೆ ಎಂಬ ಭಾವ ಸ್ಪಷ್ಟವಾಗಿ ಕಾಣುತ್ತಿತ್ತು. ಅವರಲ್ಲಿ ಕುಳ್ಳಗಿರುವ, ತಲೆಯ ಮೇಲೆ ಕೂದಲು ಉದುರಿರುವ ವ್ಯಕ್ತಿ ಇನ್ನೊಬ್ಬನೊಂದಿಗೆ ಹೇಳುತ್ತಿದ್ದ." ನಾವು ಮಾಡಿದ್ದು ತಪ್ಪು, ಆದರೆ ಇಬ್ಬರೂ ದುಡ್ಡು ಕೊಟ್ಟಿದ್ದರಿಂದ ಹೆಚ್ಚು ಕೊಟ್ಟವರಿಗೆ ಮತ ಹಾಕುವುದೇ ನ್ಯಾಯ! ಆದ್ದರಿಂದ ನಾವು ಅನ್ಯಾಯ ಮಾಡಿಬಿಟ್ಟೆವು ಎಂದು ಪಶ್ಚಾತ್ತಾಪ ಪಡುವುದರಲ್ಲಿ ಅರ್ಥವಿಲ್ಲ. ನಮಗೆ ಹಣ ತಲುಪಿಸಿದವರೇನೂ ಪ್ರಾಮಾಣಿಕರಲ್ಲ. ನಮಗೆ ತಲುಪಿಸಲು ಹೇಳಿದ ಅಭ್ಯರ್ಥಿಯೂ ಸತ್ಯ ಹರಿಶ್ಚಂದ್ರನ ಮರಿಮಗನಲ್ಲ. ಚುನಾವಣೆಯಲ್ಲಿ ಆರಿಸಿಬಂದರೆ ಅವರು ನಮಗೆ ಕೊಟ್ಟ ಹಣವನ್ನು ಇದೇ ಬ್ಯಾಂಕಿನಲ್ಲಿ ದುಡಿಯುತ್ತಾರೆ. ಹಾಗೆ ದುಡಿಯಲು ಅವಕಾಶವಿರುವುದರಿಂದಲೇ ಹೀಗೆ ಪೈಪೋಟಿಗಿಳಿದಿದ್ದಾರೆ. ನಾವು ಪಡೆದ ಎಲ್ಲಾ ಹಣ ನಮಗೇ ಅಲ್ಲ. ಇದರಲ್ಲಿ ನಮಗೆ ಮತಾಧಿಕಾರ ಕೊಡುವುದಕ್ಕೆ ಒಪ್ಪಿಗೆ ಸೂಚಿಸಿದ ನಮ್ಮ ಸೊಸೈಟಿಯ ನಿರ್ದೇಶಕರಿಗೂ ಪಾಲು ಕೊಡಬೇಕು. ಆದ್ದರಿಂದ ನಾವು ಹೆಚ್ಚು ಕೊಟ್ಟವರಿಗೆ ಮತ ಹಾಕಿದ್ದೇವೆ. ಇದರಲ್ಲಿ ಅನ್ಯಾಯ ಎಲ್ಲಿ ಬಂತು? ಎಂದು ಆರು ಅಡಿಗಿಂತ ಎತ್ತರವಿರುವ, ಕೋಲು ಮುಖದ, ಬಿಳಿ ಅಂಗಿ, ಕಪ್ಪು ಪ್ಯಾಂಟ್ ಧರಿಸಿದ ಇನ್ನೊಂದು ಸೊಸೈಟಿಯ ಅಧ್ಯಕ್ಷನಿಗೆ ಹೇಳುತ್ತಿದ್ದ.

ತಲೆ ಕೂದಲುದುರಿದ ಅಧ್ಯಕ್ಷ ಏನೇ ಹೇಳಿದರೂ ಆರಡಿ ಅಧ್ಯಕ್ಷನಿಗೆ ಸಮಾಧಾನವಿಲ್ಲ. ಆತನಲ್ಲಿ ತಾನು ವಿಶ್ವಾಸಘಾತಕ ಮಾಡಿದೆ ಎಂಬ ಅಲವರಿಕೆ." ನೀನು ಏನೇ ಹೇಳು, ಈ ಚುನಾವಣೆ ಗುಪ್ತಮತದಾನವಲ್ಲ. ಯಾರು ಯಾರಿಗೆ ಮತ ಹಾಕಿದ್ದಾರೆ ಎನ್ನುವುದು ಗೊತ್ತಾಗಲಿ ಎಂದೇ ಮತಪತ್ರದ ಮೇಲೆ ನಂಬರ್ ಬರೆಯಲಾಗಿದೆ. ಇಂತ ಸಂಖ್ಯೆಯ ಮತಪತ್ರವನ್ನು ಇಂತವರಿಗೆ ಕೊಡಲಾಗಿದೆ ಎನ್ನುವುದು ದಾಖಲಿಸಲಾದ ರಿಜಿಸ್ಟರ್ ನೋಡಿದರೆ ಗೊತ್ತಾಗುತ್ತದೆ. ಇದೇನು ವಿಧಾನಸಭೆ ಚುನಾವಣೆಯೆ? ಅಲ್ಲಾದರೆ ಮತಯಂತ್ರವಿರುತ್ತದೆ, ಯಾರು ಯಾರಿಗೆ ಹಾಕಿದ್ದಾರೆ ಎಂದು ತಿಳಿಯುವುದಿಲ್ಲ. ಇಲ್ಲಿ ನಾವು ಯಾರಿಗೆ ಮತ ಹಾಕಿದ್ದೇವೆ ಎಂದು ತಿಳಿಯುತ್ತದೆ. ಮೊದಲು ಎರಡು ಲಕ್ಷ ಕೊಟ್ಟವನು ಬಂದು ದಬಾಯಿಸಿದರೆ ಏನು ಮಾಡೋದು? ಮರ್ಯಾದೆ ಹೋಗುತ್ತದೆ ಎಂದ ಆರಡಿ ಅಧ್ಯಕ್ಷ.

ಕೂದಲುದುರಿದ ಅಧ್ಯಕ್ಷ ಆಶ್ಚರ್ಯಕರವಾಗಿ ನೋಡುತ್ತ, "ವಿಧಾನಸಭಾ ಚುನಾವಣೆಯಲ್ಲಿ ಯಾರು ಯಾರಿಗೆ ಮತ ಹಾಕಿದ್ದಾರೆ ಎಂದು ತಿಳಿಯುವುದು ಕಷ್ಟವೇನಲ್ಲ. ನೀನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ಅಲ್ಲಿ ರಿಜಿಸ್ಟರ್‌ನಲ್ಲಿ ಹೆಸರು, ಸರತಿ ಸಂಖ್ಯೆ, ಮತಪಟ್ಟಿಯ ನಂಬರ್, ಗುರುತುಪತ್ರದ ಸಂಖ್ಯೆ ದಾಖಲಿಸಿಕೊಂಡು ನಂತರ ಮತಪೆಟ್ಟಿಗೆಯ ಗುಂಡಿ ಒತ್ತಲು ಅನುಮತಿ ನೀಡುತ್ತಾರೆ. ಮತಯಂತ್ರದ ಡಾಟಾಬೇಸ್ ಸಿಕ್ಕರೆ ಅದನ್ನೂ ಕಂಡುಹಿಡಿಯಲು ಸಾಧ್ಯ. ನಮ್ಮಲ್ಲಿ ಹಣವೊಂದನ್ನು ಕೊಟ್ಟರೆ ಮತಯಂತ್ರವನ್ನೇ ಬೇಕಾದರೂ ತಂದುಕೊಡುವವರು ಸಿಗುತ್ತಾರೆ ಸುಮ್ಮನಿರು ಎನ್ನುತ್ತ ತನ್ನ ಬುದ್ಧಿವಂತಿಕೆ ಪ್ರದರ್ಶಿಸಿದ.

ಏನೇ ಎಂದರೂ ಆರಡಿ ಅಧ್ಯಕ್ಷನಿಗೆ ಸಮಾಧಾನವಾಗಲಿಲ್ಲ. "ನಾವು ಎರಡು ಲಕ್ಷ ಕೊಟ್ಟವನಿಗೆ ಹೇಳಿಬಿಡೋಣ. ನಮಗೆ ಅನಿವಾರ್ಯವಾಯಿತು, ಬೇಸರ ಮಾಡಿಕೊಳ್ಳಬೇಡಿ. ನಾವು ಮತವನ್ನು ನೀವು ಹೇಳಿದ ತಂಡದ ಅಭ್ಯರ್ಥಿಗೆ ಹಾಕಲಿಲ್ಲ ಎಂದು ಕ್ಷಮೆ ಕೇಳಿಬಿಡೋಣ" ಎಂದ. ಕೂದಲುದುರಿದ ಅಧ್ಯಕ್ಷನಿಗೆ ರೇಗಿಹೋಯಿತು. ನೀನು ಹಾಗೆ ಹೇಳಿದ್ದೇ ಆದರೆ ವಂಚಕನೆಂದು ಸಾಬೀತು ಮಾಡಿಕೊಂಡಂತಾಗುತ್ತದೆ. ಅಷ್ಟೇ ಅಲ್ಲದೆ, ಎರಡು ಲಕ್ಷ ಕೊಟ್ಟವನು ತಾನು ಕೊಟ್ಟ ಹಣ ವಾಪಸ್ ಕೊಡು ಎಂದರೆ ಏನು ಮಾಡುತ್ತೀಯೆ? ಸುಮ್ಮನೆ ಇದ್ದರೆ ಒಂದು ತಂಡದವರಿಂದ ಪಡೆದ ಐದು, ಮೊದಲು ಕೊಟ್ಟ ತಂಡದವರಿಂದ ಪಡೆದ ಎರಡು ಸೇರಿ ಏಳು ಲಕ್ಷ ನಮ್ಮಲ್ಲಿ ಉಳಿಯುತ್ತದೆ. ನಮ್ಮ ಸೊಸೈಟಿಯ ಉಳಿದ ನಿರ್ದೇಶಕರಿಗೆ ಮೊದಲೇ ಮಾತುಕೊಟ್ಟಂತೆ ತಲಾ ಹತ್ತು ಸಾವಿರ ಕೊಟ್ಟರೆ ಉಳಿದಿದ್ದೆಲ್ಲ ನಮ್ಮದೇ ಅಲ್ಲವೆ? ತಲೆ ಇಲ್ಲದವನಂತೆ ಮಾತನಾಡಬೇಡ. ಮೊದಲೇ ಹೇಳಿದ್ದೇನೆ, ಇಲ್ಲಿ ಯಾರೂ ಹರಿಶ್ಚಂದ್ರನ ವಂಶದವರಿಲ್ಲ ಎಂದು ಗದರಿದ.

ಅಷ್ಟರಲ್ಲೇ ಆರಡಿ ಅಧ್ಯಕ್ಷ ಎರಡು ಲಕ್ಷ ಕೊಟ್ಟವನಿಗೆ ಮೊಬೈಲ್ ಕರೆ ಮಾಡಿ ವಿವರಿಸುತ್ತಿದ್ದ. ನಾವು ನಿಮ್ಮಲ್ಲಿ ಹಣ ಪಡೆದಿದ್ದೇನೋ ನಿಜ. ಕೆಲವು ಅನಿವಾರ್ಯ ಕಾರಣದಿಂದ ನಿಮಗೆ ಮತ ಹಾಕಲಿಲ್ಲ, ಕ್ಷಮಿಸಿ. ನಿನ್ನೆ ಎದುರು ಪಂಗಡದವರು ನಮ್ಮ ಮನೆಗೆ ಬಂದಿದ್ದರು. ಜೊತೆಗೆ ನನ್ನ ಅಳಿಯ- ಮಗಳನ್ನೂ ಕರೆದುಕೊಂಡು ಬಂದಿದ್ದರು. ಅವರ ಮೂಲಕ ಹೇಳಿಸಿ, ನಾವು ಅವರ ತಂಡಕ್ಕೆ ಮತ ಹಾಕಿದ್ದೇ ಆದರೆ ಮಗಳಿಗೆ ಬ್ಯಾಂಕಿನಲ್ಲೇ ಕೆಲಸ ಕೊಡುವುದಾಗಿ ಹೇಳಿದರು. ಗಿಫ್ಟ್ ಎಂದು ಒಂದು ಸ್ವೀಟ್ ಬಾಕ್ಸ್ ಕೊಟ್ಟಿದ್ದರು. ಅವರು ಹೋದಮೇಲೆ ಅದನ್ನು ತೆರೆದು ನೋಡಿದರೆ ಐದು ಲಕ್ಷ ಹಣವಿತ್ತು. ನನ್ನ ಮಗಳ ಜೀವನವೂ ಸೆಟ್ಲ್ ಆಗುತ್ತದೆ, ನಮ್ಮದೇ ಸೊಸೈಟಿಯಲ್ಲಿ ನಾನು ತುಂಬಲು ಬಾಕಿಯಿರುವ ಸಾಲವೂ ತೀರಿದಂತಾಗುತ್ತದೆ ಎಂಬ ಕಾರಣಕ್ಕೆ ಅವರ ಅಭ್ಯರ್ಥಿಗೆ ಮತ ಹಾಕುವುದು ಅನಿವಾರ್ಯವಾಯಿತು. ನೀವು ಕೊಟ್ಟ ಎರಡು ಲಕ್ಷವನ್ನು ವಾಪಸ್ ಕೊಟ್ಟುಬಿಡುತ್ತೇನೆ. ಬೇಸರ ಮಾಡಿಕೊಳ್ಳಬೇಡಿ ಎಂದು ಬೇಡಿಕೊಳ್ಳುತ್ತಿದ್ದ. ತಲೆ ಕೂದಲುದುರಿದ ಅಧ್ಯಕ್ಷ ತಲೆಯಮೇಲೆ ಕೈಹೊತ್ತು ನಿಂತ ಎನ್ನುತ್ತ ಕತೆ ಹೇಳುತ್ತಿದ್ದ ವ್ಯಕ್ತಿ ಅಂದಿನ ಕತೆ ಮುಗಿಸಿದ.

ಈ ಕತೆಯ ನೀತಿಯೇನು ಎಂಬುದನ್ನು ನೀನೇ ಹೇಳು ಎನ್ನುತ್ತ ಬೇತಾಳದತ್ತ ನೋಡಿದ ಆ ವ್ಯಕ್ತಿ. ಯಾವ ನಂಬುಗೆಯೂ ದುಡ್ಡಿನಷ್ಟು ದೊಡ್ಡದಲ್ಲ! ಎನ್ನುತ್ತ ಬೇತಾಳ ಮರವಿಳಿದು ನಗರಸಂಚಾರಕ್ಕೆ ಹೊರಟಿತು.

**ವಿ.ಸೂ: ಈ ಕತೆಯಲ್ಲಿ ಬರುವ ವೈಯಕ್ತಿಕ ಹೆಸರು, ಸಂಘಟನೆ, ಸಂಘ ಸಂಸ್ಥೆಗಳ ಹೆಸರು, ಸನ್ನಿವೇಶಗಳುಎಲ್ಲವೂ ಕಾಲ್ಪನಿಕ. ಯಾವ ಘಟನೆ ಅಥವಾ ಯಾರನ್ನೋ ಉದ್ದೇಶಿಸಿ ಬರೆದಿದ್ದಾಗಿರುವುದಿಲ್ಲ. ಆದಾಗ್ಯೂ ಹೋಲಿಕೆ ಕಂಡುಬಂದಲ್ಲಿ ಅದು ಕಾಕತಾಳೀಯ. ಯಾರಾದರೂ ಹೋಲಿಸಿದಲ್ಲಿ, ಹೋಲಿಕೆ ಮಾಡಿಕೊಂಡಲ್ಲಿ ಅದಕ್ಕೆ ಅವರವರೇ ಜವಾಬ್ದಾರರಾಗಿರುತ್ತಾರೆ. ಕತೆಗಾರನಾಗಲೀ, ಪತ್ರಿಕೆಯಾಗಲಿ ಇದಕ್ಕೆ ಜವಾಬ್ದಾರರಲ್ಲ.**

| ಪ್ರವೀಣ ಹೆಗಡೆ ಕರ್ಜಗಿ

# ಎಮ್ಮೆಶೀರ್ಲು ವಜ್ರ ಜಲಪಾತ

| ಶಶಾಂಕ್ ಹೆಗಡೆ, ಹಳವಳ್ಳಿ

**ನ**ಮ್ಮ ಜಿಲ್ಲೆ ಪ್ರವಾಸೋದ್ಯಮಕ್ಕೆ , ಪ್ರವಾಸಿ ಕ್ಷೇತ್ರಕ್ಕೆ ಜನಪ್ರಿಯವಾಗಿದೆ. ಘಟ್ಟದ ಮೇಲಿನ ತಾಲೂಕುಗಳಲ್ಲಿ ಒಂದಾದ ಯಲ್ಲಾಪುರದಲ್ಲಿ ಅನೇಕ ಪ್ರವಾಸಿ ತಾಣಗಳಿವೆ, ಅನೇಕ ಜಲಧಾರೆಗಳನ್ನು ನೋಡಬಹುದಾಗಿದೆ. ಅವುಗಳಲ್ಲಿ ಒಂದು ಎಮ್ಮೆಶೀರ್ಲು ವಜ್ರ ಜಲಪಾತ.

ವಜ್ರಳ್ಳಿ ಪಂಚಾಯತ ವ್ಯಾಪ್ತಿಯ ಕಂಚಿಮನೆಯ ಕಬ್ಬಿನಕುಂಬ್ರಿಯಲ್ಲಿ ದಟ್ಟ ಕಾನನದ ಮಧ್ಯೆ ಅಜ್ಞಾತವಾಗಿರುವ ಈ ಜಲಧಾರೆ ಇತ್ತಿಚೆಗೆ ಪ್ರವಾಸಿಗರನ್ನು ತನ್ನತ್ತ ಸೆಳೆಯುತ್ತಿದೆ.

ಎಮ್ಮೆಗಳು ಮೇಯಲು ಹೋದಾಗ ನೀರನ್ನು ಕುಡಿಯಲು ಹೋಗುವ ಹೊಂಡ ಇಂದು ತುಂಬಿ ಹರಿಯುವ ಜಲಧಾರೆಯಾಗಿ ಜನಪ್ರಿಯವಾಗಿದೆ.

ಮೇಯಲು ಹೋದ ಎಮ್ಮೆ ಇಲ್ಲಿ ಬಿದ್ದು ನಾಪತ್ತೆಯಾಗಿದ್ದರಿಂದ ಈ ಜಲಧಾರೆಗೆ ಎಮ್ಮೆ ಶೀರ್ಲು ಎಂಬ ಶಿರೋನಾಮೆ ಬಂದಿದೆ ಎಂದು ಸ್ಥಳೀಯರು ಹೇಳುತ್ತಾರೆ. ಹೊನಗದ್ದೆ ಅಂಬಗಾವ್ ಮೂಲಕ ಹರಿದು ಕಂಚಿಮನೆ ಎಂಬಲ್ಲಿ 150ಅಡಿ ಆಳಕ್ಕೆ ಧುಮುಕಿ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಮುಂದೆ ಅರಬೈಲ್ ಜಲಪಾತವಾಗಿ ಮೊಗದ್ದೆ ಎಂಬಲ್ಲಿ ಬೇಡ್ತಿ ನದಿ ಸೇರುತ್ತದೆ. ಮಳೆಗಾಲದಲ್ಲಿ ಭೋರ್ಗರೆತ ಹೆಚ್ಚು ಇರುವುದರಿಂದ ಅಕ್ಟೋಬರ್ ಇಂದ ಮಾರ್ಚ್ ವರೆಗೆ ಜಲಪಾತ ವೀಕ್ಷಣೆಗೆ ಸೂಕ್ತ ಸಮಯ. ಬೇಸಿಗೆಯಲ್ಲಿ ಕೊಂಚ ನೀರು ಕಡಿಮೆ ಆಗುತ್ತದೆ.

ತೆರಳುವ ಮಾರ್ಗವೇ ಇಲ್ಲಿ ಸಾಹಸಮಯ, ಮೆಟ್ಟಿಲುಗಳು ಇಲ್ಲ, ಗಿಡಗಂಟಿ ಗಳನ್ನು ಮರದ ಬೇರುಗಳನ್ನು ಆಧಾರವಾಗಿ ಹಿಡಿದು ಕೆಳಕ್ಕೆ ಹೋಗಬೇಕು. ನೆಮ್ಮದಿಯಾಗಿ ಇಳಿಯುವ ಅವಕಾಶ ಕಷ್ಟ. ಕೋಟೆಯಂತಿರುವ ಕಲ್ಲಿನ ಮಧ್ಯದಲ್ಲಿ ಹಕ್ಕಿಗಳ ಚಿಲಿಪಿಲಿ ಕೇಳುತ್ತಾ ಜಲಧಾರೆಯ ರಮಣೀಯ ವೈಭವವನ್ನು ಕಣ್ಣತುಂಬಿಕೊಳ್ಳುವುದು ಪ್ರಕೃತಿ ಪ್ರೀಯರಿಗೆ ಹೊಸ ಅನುಭವವನ್ನೆ ನೀಡುತ್ತದೆ. ಇತ್ತಿಚೆಗೆ ಜನ ಸಂಪರ್ಕಕ್ಕೆ ಬರುತ್ತಿರುವ ಜಲಪಾತ ಆದ ಕಾರಣ ಪರಿಚಿತರನ್ನು ಸ್ಥಳಿಯರನ್ನು ಕರೆದುಕೊಂಡು ಹೋಗುವುದು ಉತ್ತಮ ಎನ್ನುತ್ತಾರೆ ಲೇಖನಕ್ಕೆ ಮಾಹಿತಿ ನೀಡಿದ ದತ್ತಾತ್ರೇಯ ಕಣ್ಣಿಪಾಲ್.

**ಮಾರ್ಗ ವಿವರ:** ಯಲ್ಲಾಪುರದಿಂದ ಅಂಕೋಲಾ ಹೆದ್ದಾರಿ ಕಡೆ ಸುಮಾರು 10 ಕಿ ಮಿ ಸಾಗಿದರೆ ಇಡಗುಂದಿ ಎಂಬ ಚಿಕ್ಕ ಪಟ್ಟಣ ಸಿಗುತ್ತದೆ. ಅಲ್ಲಿ ಚಿನ್ನಾಪುರದಿಂದ ಮಲ್ಲಾಪುರ ಕೈಗಾ ರಸ್ತೆಯ ಮೂಲಕ ಸುಮಾರು 12 ಕಿಮಿ ಸಾಗಿದರೆ ವಜ್ರಳ್ಳಿ ಎಂಬಲ್ಲಿಂದ ಹೊನಗದ್ದೆ ಗೆ ಬಲಕ್ಕೆ ತಿರುಗಿ ಸುಮಾರು ಏಳು ಕಿ.ಮಿ ಕಂಚಿಮನೆ ಎಂಬಲ್ಲಿಂದ ಕಬ್ಬಿನ ಕುಂಬ್ರಿ 3 ಕಿ.ಮಿ ಅಲ್ಲಿಯವರೆಗೆ ವಾಹನಗಳು ತೆರಳುತ್ತವೆ. ಅಲ್ಲಿಂದ ಅಂದಾಜು ಎರಡು ಕಿ.ಮಿ ನಡೆದರೆ ಜಲಧಾರೆಯನ್ನು ಕಣ್ಣತುಂಬಿಸಿಕೊಳ್ಳ ಬಹುದು.

**ಊಟ-ತಿಂಡಿ:** ಹತ್ತಿರದಲ್ಲಿ ಹೋಟೆಲ್ ವ್ಯವಸ್ಥೆಗಳಿಲ್ಲದ ಕಾರಣ ಯಲ್ಲಾಪುರದಿಂದಲೇ ತಂದುಕೊಳ್ಳುವುದು ಉತ್ತಮ... ಇಡಗುಂದಿ, ವಜ್ರಳ್ಳಿ, ಭಾಸಲ್ ಗಳಲ್ಲಿ ಚಿಕ್ಕಪುಟ್ಟ ಅಂಗಡಿಗಳು ಇವೆ.

# ಮಹಾರಾಷ್ಟ್ರದ ವಿಶಿಷ್ಟ ಲೋನಾರ್ ಕ್ರೇಟರ್ ಸರೋವರ

**ಮ**ಹಾರಾಷ್ಟ್ರದ ಬುಲ್ಡಾಣ ಜಿಲ್ಲೆಯಲ್ಲಿರುವ ಲೋನಾರ್ ಕ್ರೇಟರ್ ಸರೋವರ ಭಾರತದ ಅತ್ಯಂತ ವಿಶಿಷ್ಟ ನೈಸರ್ಗಿಕ ಚಮತ್ಕಾರಗಳಲ್ಲಿ ಒಂದಾಗಿದೆ. ಸುಮಾರು 52,000 ವರ್ಷಗಳ ಹಿಂದೆ ಭೂಮಿಗೆ ಬಿದ್ದ ಒಂದು ಭಾರೀ ಉಲ್ಕಾಪಾತದ ಪರಿಣಾಮವಾಗಿ ನಿರ್ಮಿತವಾದ ಈ ಸರೋವರ, ವಿಶ್ವದಲ್ಲಿರುವ ಕೆಲವು ಅತ್ಯಲ್ಪ ಸಂಖ್ಯೆಯ ಉಲ್ಕಾಪಾತ ಸರೋವರಗಳಲ್ಲಿ ಒಂದಾಗಿ ಗುರುತಿಸಿಕೊಂಡಿದೆ. ಭಾರತದ ವಿಜ್ಞಾನ, ಪುರಾಣ ಮತ್ತು ಸಂಸ್ಕೃತಿಯನ್ನು ಅದ್ಭುತವಾಗಿ ಸಂಧಿಸುವ ಈ ಸರೋವರ, ಅದರ ರಹಸ್ಯಮಯ ನೀರು, ವಿಚಿತ್ರ ಮಣ್ಣು ಮತ್ತು ವಿಶಿಷ್ಟ ಜೀವ ವೈವಿಧ್ಯತೆಯ ಮೂಲಕ ಪ್ರತಿದಿನ ಸಾವಿರಾರು ಸಂಶೋಧಕರು ಮತ್ತು ಪ್ರವಾಸಿಗರನ್ನು ತನ್ನತ್ತ ಆಕರ್ಷಿಸುತ್ತದೆ.

ಲೋನಾರ್ ಸರೋವರದ ವಿಶಿಷ್ಟತೆಯೆಂದರೆ ಅದು ವೃತ್ತಾಕಾರದ ಜ್ವಾಲಾಮುಖಿ ಗುಂಡಿಯಂತೆ ಕಾಣುತ್ತದೆ. ಸುಮಾರು 1.8 ಕಿಲೋಮೀಟರ್ ವ್ಯಾಸ ಮತ್ತು 150 ಮೀಟರ್ ಆಳವಿರುವ ಈ ಸರೋವರವನ್ನು ಮೇಲಿಂದ ನೋಡುವಾಗ ಅದು ಅಣುಬಾಂಬ್ ಸ್ಫೋಟಗೊಂಡ ಜಾಗದಂತೆ ಭಾಸವಾಗುತ್ತದೆ. ಉಲ್ಕೆಯು ಬಿದ್ದಾಗ ಉಂಟಾದ ಅತೀವ ಬಿಸಿಲು, ಭಾರೀ ಶಾಕ್‌ವೇವ್ ಮತ್ತು ಭೂಮಿಯ ಮೇಲಿನ ಪದರಗಳ ಸ್ಥೂಲ ಬದಲಾವಣೆಗಳು ಈ ಗುಂಡಿಯನ್ನು ರೂಪಿಸಿದ್ದವೆಂಬುದು ವಿಜ್ಞಾನಿಗಳ ಅಭಿಪ್ರಾಯ. ಈ ಕಾರಣದಿಂದ ಲೋನಾರ್ ಸರೋವರದ ನೀರು ಮತ್ತು ಮಣ್ಣಿನಲ್ಲಿ ಸಾಮಾನ್ಯ ಸರೋವರಗಳಲ್ಲಿ ಕಾಣದ ಅನೇಕ ರಾಸಾಯನಿಕ ಗುಣಗಳು ಕಂಡುಬರುತ್ತವೆ.

ಇದರ ನೀರಿನ ಅತ್ಯಂತ ವಿಚಿತ್ರ ಗುಣವೆಂದರೆ ಉಪ್ಪು. ಸರೋವರದ ನೀರಿನಲ್ಲಿ ಉಪ್ಪಿನ ಅಂಶ ತುಂಬಾ ಹೆಚ್ಚಿರುವುದರಿಂದ ಸಾಮಾನ್ಯ ಸಿಹಿನೀರು ಜಲಚರಗಳು ಇಲ್ಲಿ ಬದುಕಲು ಸಾಧ್ಯವಿಲ್ಲ. ಇದೇ ವೇಳೆ, ಕೆಲವು ವಿಶಿಷ್ಟ ಬಾಕ್ಟೀರಿಯಾ ಮತ್ತು ಆಲ್ಗಿ ಪ್ರಭೇದಗಳು ಮಾತ್ರ ಈ ನೀರಿನಲ್ಲಿ ಬೆಳೆಯುತ್ತವೆ. ಕೆಲವು ವರ್ಷಗಳ ಹಿಂದೆ ಸರೋವರದ ನೀರು ಹಸಿರಿನಿಂದ ಗುಲಾಬಿ ಬಣ್ಣಕ್ಕೆ ತಿರುಗಿದ ಘಟನೆ ವಿಶ್ವದ ಗಮನ ಸೆಳೆದಿತ್ತು. ವಿಜ್ಞಾನಿಗಳು ಇದನ್ನು 'ಹ್ಯಾಲೋ ಬ್ಯಾಕ್ಟೀರಿಯಾ'ಗಳ ಕಾರಣದಿಂದಾಗಿ ಉಂಟಾಗಿದ್ದು ಎಂದು ನಿರ್ಧರಿಸಿದ್ದಾರೆ. ಬಣ್ಣ ಬದಲಾವಣೆಯಂತಹ ಘಟನೆಗಳು ಲೋನಾರ್ ನ ಜೈವಿಕ ಮತ್ತು ರಾಸಾಯನಿಕ ವೈಶಿಷ್ಟ್ಯತೆಯನ್ನು ಇನ್ನಷ್ಟು ರಹಸ್ಯಮಯವಾಗಿಸುತ್ತವೆ.

ಸುತ್ತಲಿನ ಭೂಗರ್ಭಶಿಲೆಗಳು ಸಹ ಲೋನಾರ್ ಸರೋವರದ ಅಚ್ಚರಿಯ ಜಗತ್ತನ್ನು ವಿವರಿಸುತ್ತವೆ. ಉಲ್ಕಾಪಾತದ ಸಂದರ್ಭದಲ್ಲಿ ಉಂಟಾದ ಅಪಾರ ತಾಪಮಾನವು ಭೂಪದರದಲ್ಲಿದ್ದ ಸಿಲಿಕಾ ಮತ್ತು ಕಲ್ಲುಗಳನ್ನು ಕರಗಿಸಿ, ಗಾಜಿನಂತಹ ವಸ್ತುಗಳನ್ನು ರೂಪಿಸಿತು. 'ಟೆಕ್ಟೈಟ್' ಎಂದು ಕರೆಯುವ ಈ ಗಾಜು-ಸಮಾನ ಕಲ್ಲುಗಳು ಲೋನಾರ್ ಪ್ರದೇಶಕ್ಕೆ ಮಾತ್ರ ವಿಶೇಷ. ಭೂಮಿಯ ಇತಿಹಾಸವನ್ನು ಪುನಃ ರಚಿಸಲು ಪ್ರಯತ್ನಿಸುವ ವಿಜ್ಞಾನಿಗಳಿಗೆ ಈ ಟೆಕ್ಟೈಟ್‌ಗಳು ಅಪಾರ ಮಹತ್ವದ ದಾಖಲೆಗಳಂತೆ. ಸ್ಥಳೀಯ ನಂಬಿಕೆಯ ಪ್ರಕಾರ, ಈ ಸರೋವರದ ಪ್ರದೇಶವನ್ನು "ಲವಣಾಸುರ" ಎಂಬ ರಾಕ್ಷಸನ ವಾಸಸ್ಥಳವೆಂದು ವರ್ಣಿಸಲಾಗಿದೆ. ಭಗವಾನ್ ವಿಷ್ಣುವಿನ ಅವತಾರವಾದ ರಾಮನು ಲವಣಾಸುರನನ್ನು ಸಂಹರಿಸಿದಾಗ, ಅವನ ದೇಹ ಭೂಮಿಗೆ ಬಿದ್ದ ಸ್ಥಳದಲ್ಲಿ ಈ ಗುಂಡಿ ಉಂಟಾಯಿತು ಎಂದು ಪುರಾಣಗಳು ಹೇಳುತ್ತವೆ. ಗುಂಡಿಯ ಸುತ್ತಮುತ್ತ ಕಂಡುಬರುವ ಅನೇಕ ಪುರಾತನ ದೇವಾಲಯಗಳು ಈ ಪ್ರದೇಶದ ಪುರಾಣಿಕ ಮಹತ್ವವನ್ನು ಇನ್ನೂ ಬೆಂಬಲಿಸುತ್ತವೆ. ಸರೋವರದ ಸಮೀಪದಲ್ಲಿರುವ ರಾಮಗಡ್ಡಾ ದೇವಾಲಯ, ದೌತಲ್ಯ ದೇವಾಲಯ ಮತ್ತು ಶಿವನಿಗೆ ಸಮರ್ಪಿತವಾದ ಕಪಿಲೇಶ್ವರ ಮಂದಿರ ಪ್ರವಾಸಿಗರ ಹಾಗೂ ಭಕ್ತರ ಗಮನವನ್ನು ಸೆಳೆಯುತ್ತವೆ.



| ಪರಾಶರ ಐನಕೈ

ವಿಸ್ಮಯ ಪ್ರಪಂಚ

ಈ ಪ್ರದೇಶದ ಪರಿಸರ ಕೂಡ ಸಾಧಾರಣವಲ್ಲ. ಸರೋವರದ ಸುತ್ತಲಿನ ಅಂಚಿನಲ್ಲಿ ದಟ್ಟವಾದ ಕಾಡು, ವಿಭಿನ್ನ ಪಕ್ಷಿಜಾತಿಗಳು, ಮಂಗಗಳು, ಮೃಗಗಳು ಮತ್ತು ಕೆಲವು ವಿರಳ ಜೀವಿಗಳ ವಾಸಸ್ಥಳವಾಗಿದೆ. ಮಳೆಗಾಲದಲ್ಲಿ ಈ ಪ್ರದೇಶ ಹಸಿರಿನಿಂದ ಕಂಗೊಳಿಸುತ್ತದೆ. ಪ್ರಕೃತಿಯ ಶಾಂತತೆ ಮತ್ತು ವೈಜ್ಞಾನಿಕವಾಗಿ ಸೂಕ್ತ ವಾತಾವರಣ ಇಲ್ಲಿ ಒಂದು ವಿಶಿಷ್ಟ ಸಮತೋಲನವನ್ನು ನಿರ್ಮಿಸಿದೆ. ಕೇವಲ ಲೋನಾರ್ ಸರೋವರವನ್ನು ನೋಡಲು ಬಂದವರೂ ಸಹ ಸುತ್ತಮುತ್ತಲಿನ ಕಾಡಿನ ಮೌನಕ್ಕೆ ಮಂತ್ರಮುಗ್ಧರಾಗಿ ಇಲ್ಲಿ ಗಂಟೆಗಳ ಕಾಲ ಕಳೆಯುತ್ತಾರೆ.

2006ರಲ್ಲಿ ಅಮೆರಿಕದ ನಾಸಾದ ವಿಜ್ಞಾನಿಗಳು ಮತ್ತು ಭಾರತದ ಜಿಯೋಲಾಜಿಕಲ್ ಸರ್ವೇ ಸಂಸ್ಥೆ ಇಲ್ಲಿ ಸಂಶೋಧನೆ ನಡೆಸಿ, ಲೋನಾರ್ ಕ್ರೇಟರ್ ಸರೋವರವು ನಿಜವಾಗಿಯೂ ಉಲ್ಕಾಪಾತದಿಂದಲೇ ಉಂಟಾಗಿದೆ ಎಂಬ ಅನೇಕ ಸಾಕ್ಷ್ಯಗಳನ್ನು ಸಂಗ್ರಹಿಸಿದರು. ನೀರಿನ ರಾಸಾಯನಿಕ ವಿಶ್ಲೇಷಣೆ, ಮಣ್ಣಿನ ಸಂರಚನೆ, ಶಿಲೆಗಳ ಘನತ್ವ ಈವರೆಗೂ ವಿಜ್ಞಾನಕ್ಕೆ ಹಲವು ಪ್ರಶ್ನೆಗಳನ್ನು ಎತ್ತುತ್ತವೆ. ಲೋನಾರ್ ಸರೋವರದ ಪ್ರದೇಶದಲ್ಲಿ ಕಂಡುಬರುವ ಬೇಸಾಲ್ಟಿಕ್ ಶಿಲೆಗಳು ಭೂಮಿಯ ಲಕ್ಷಾಂತರ ವರ್ಷಗಳ ಭೂಗರ್ಭ ಇತಿಹಾಸವನ್ನು ಬಿಚ್ಚಿಡುತ್ತವೆ. ಇದು ಸಂಶೋಧಕರಿಗಿಂತಲೂ ಪ್ರವಾಸಿಗರಿಗಿರುವ ಆಕರ್ಷಣೆ ಕಡಿಮೆಯಲ್ಲ. ಸರೋವರದ ತಗ್ಗಿನ ಭಾಗಕ್ಕೆ ಇಳಿಯುವುದು ಸ್ವಲ್ಪ ಕಷ್ಟವಾದರೂ ಅದೇ ಅದರ ವಿಶೇಷತೆ. ಇಳಿಯುವಾಗ ಕಾಡಿನೊಳಗೆ ಹರಡಿರುವ ಹಕ್ಕಿಗಳ ಕಲರವ, ದೂರದಲ್ಲಿ ಕೇಳಿಬರುವ ಮೃಗಗಳ ದನಿ ಮತ್ತು ಪರ್ವತದ ತೀವ್ರ ಇಳಿಜಾರಿನ ನಡುವೆ ಕಾಣುವ ನೈಸರ್ಗಿಕ ರೂಪಗಳು ಮನಸ್ಸಿಗೆ ಒಂದು ವಿಶಿಷ್ಟ ಅನುಭವವನ್ನು ನೀಡುತ್ತವೆ. ಕೆಳಗೆ ತಲುಪಿ ಸರೋವರದ ತೀರದಲ್ಲಿ ನಿಂತಾಗ, ಅದರ ಉಪ್ಪು-ಕ್ಷಾರ ಮಿಶ್ರಿತ ನೀರಿನ ಗಾಢ ಹಸಿರು ಹೊಳಪು ಮತ್ತು ದಿಕ್ಕು ದಿಕ್ಕಿಗೂ ವಿಸ್ತರಿಸಿರುವ ವೃತ್ತಾಕಾರದ ಅಂಚುಗಳು ಅದ್ಭುತವಾಗಿ ಕಾಣುತ್ತವೆ.

ಲೋನಾರ್ ಕ್ರೇಟರ್ ಸರೋವರವು ಭಾರತದ ಭೂವಿಜ್ಞಾನದ ಒಂದು ಅಮೂಲ್ಯವಾದ ಅಧ್ಯಾಯ. ಇದು ಭೂಮಿಯ ಮೇಲೆ ಸಂಭವಿಸಬಹುದಾದ ಉಲ್ಕಾಪಾತಗಳ ಪರಿಣಾಮ, ಪ್ರಕೃತಿಯ ಪುನರ್‌ಸಂರಚನೆ ಮತ್ತು ಜೀವಜಾಲದ ಹೊಂದಾಣಿಕೆ ಹೇಗೆ ಸಾಧ್ಯವಾಗುತ್ತವೆ ಎನ್ನುವುದಕ್ಕೆ ಜೀವಂತ ಸಾಕ್ಷಿ. ಇತ್ತೀಚಿನ ವರ್ಷಗಳಲ್ಲಿ ಪ್ರವಾಸೋದ್ಯಮವೂ ಹೆಚ್ಚುತ್ತಿರುವುದರಿಂದ, ಈ ಪ್ರದೇಶದ ಸಂರಕ್ಷಣೆ ಅತ್ಯಗತ್ಯವಾಗಿದೆ. ಸರೋವರದ ನೀರು ಮತ್ತು ಜೀವವೈವಿಧ್ಯತೆಗೆ ಹಾನಿ ಉಂಟುಮಾಡಬಲ್ಲ ಯಾವುದೇ ಚಟುವಟಿಕೆಗಳಿಂದ ದೂರವಿರುವುದು ಮುಖ್ಯ ಎಂಬ ಎಚ್ಚರಿಕೆಗಳನ್ನು ವಿಜ್ಞಾನಿಗಳು ನೀಡುತ್ತಿದ್ದಾರೆ. ಲೋನಾರ್ ಸರೋವರದ ಆಕರ್ಷಣೆ ವೈಜ್ಞಾನಿಕ ಕೌತುಕವೋ ಅಥವಾ ಪುರಾಣಗಳ ರೋಚಕತೆಯೋ ಎಂಬುದು ಓರ್ವರು ಏನು ನಂಬುತ್ತಾರೋ ಅದರ ಮೇಲೆ ಅವಲಂಬಿತ. ಆದರೆ ಒಂದು ವಿಷಯ ನಿಜ, ಈ ಸರೋವರವು ಮಾನವನ ಕಲ್ಪನೆಗೆ ಮೀರಿದ ಪ್ರಕೃತಿಯ ಒಂದು ಅಸಾಧಾರಣ ಕಲಾಕೃತಿ. ಇಲ್ಲಿ ನಿಂತಾಗ ಸಾವಿರಾರು ವರ್ಷಗಳ ಹಿಂದಿನ ಭೂಮಿಯ ಕಥೆಗಳು ನಿಮ್ಮ ಪಾದದ ಕೆಳಗೆ ನಿಧಾನವಾಗಿ ಎದ್ದುಕಾಣುವ ಭಾವನೆಯನ್ನು ಮೂಡಿಸುತ್ತವೆ. ಆಕಾಶದಿಂದ ಬಂದ ಉಲ್ಕೆಯೊಂದು ಹೇಗೆ ಭೂಮಿಯ ಇತಿಹಾಸವನ್ನು ಶಾಶ್ವತವಾಗಿ ಬದಲಿಸಿತ್ತು ಎಂಬುದಕ್ಕೂ ಇದು ಜೀವಂತ ಸಾಕ್ಷಿ.

ಹೀಗಾಗಿ ಲೋನಾರ್ ಕ್ರೇಟರ್ ಸರೋವರವು ಕೇವಲ ಒಂದು ಸರೋವರವಲ್ಲ; ಅದು ಈ ಭೂಗೋಳದ ಅಸಂಖ್ಯ ರಹಸ್ಯ ಹಾಗೂ ನಿಗೂಢಗಳ ಬತ್ತಳಿಕೆಯಿಂದ ಬಿದ್ದ ಒಂದು ಚಿಕ್ಕ ಉದಾಹರಣೆ ಅಷ್ಟೇ. ಅದರಲ್ಲಿ ಕಂಡುಬರುವ ಪ್ರತಿಯೊಂದು ಅಂಶವೂ ಭೂಮಿಯ ಗುಟ್ಟುಗಳನ್ನು ಅನಾವರಣಗೊಳಿಸುವ ಪ್ರಯತ್ನಕ್ಕೆ ಆಹ್ವಾನ ನೀಡುತ್ತದೆ. ಪ್ರಕೃತಿಯ ಈ ಅಲೌಕಿಕ ಚಿತ್ರವನ್ನು ಒಮ್ಮೆಯಾದರೂ ಕಣ್ಣಾರೆ ನೋಡುವುದು ಯಾವುದೇ ಪ್ರಕೃತಿ ಪ್ರೇಮಿಗೆ ಹಾಗೂ ಕುತೂಹಲಭರಿತ ಪ್ರವಾಸಿಗನಿಗೆ ಅವಿಸ್ಮರಣೀಯ ಅನುಭವವೇ ಸರಿ.





# ಚಳಿಗಾಲಕ್ಕೆರಡು ಬಿಸಿ ಬಿಸಿ ರಸಂ





**ಎ**ಲ್ಲಾ ದಿನವೂ ಬೇಳೆ, ತರಕಾರಿ ಹಾಕಿ ಸಾರು, ಹುಳಿ ಬೇಸರ ಬಂದಾಗ ದಿಢೀರ್ ಆಗಿ ಮಾಡಿಕೊಳ್ಳುವಂತ, ನಾಲಿಗೆಗೆ ರುಚಿ, ಆರೋಗ್ಯಕ್ಕೂ ಹಿತವಾಗಿರುವಂತ ಎರಡು ಸುಲಭವಾಗಿ ಮಾಡುವಂತ ರಸಂ ಮಾಡುವ ವಿಧಾನವನ್ನು ತಿಳಿಸಿಕೊಡುತ್ತೇನೆ.

**ನೆಲ್ಲಿಕಾಯಿ ರಸಂ**

ಬೇಕಾಗುವ ಸಾಮಗ್ರಿ: ನೆಲ್ಲಿಕಾಯಿ 8, 1/4 ಕಪ್ ತೆಂಗಿನತುರಿ, ಕಾಳು ಮೆಣಸು 7-8, ಹಸಿರು ಮೆಣಸಿನ ಕಾಯಿ 2, ಜೀರಿಗೆ 2 ಚಮಚ, ಮೆಂತ್ಯ 1/4 ಚಮಚ, ಕೊತ್ತಂಬರಿ ಬೀಜ 1 ಚಮಚ, ಚಿಟಿಕೆ ಅರಿಶಿಣ, ಬೆಲ್ಲ ಚೂರು, ರುಚಿಗೆ ತಕ್ಕಷ್ಟು ಉಪ್ಪು . ಒಗ್ಗರಣೆಗೆ 3 ಚಮಚ ತುಪ್ಪ,1/2 ಚಮಚ ಸಾಸಿವೆ, ಚಿಟಿಕೆ ಇಂಗು, ಕರಿಬೇವು ಒಂದು ಎಸಳು.

**ಮಾಡುವ ವಿಧಾನ:** ನೆಲ್ಲಿಕಾಯಿಯನ್ನು ಮೊದಲು ನೀರಲ್ಲಿ ಮೆತ್ತಗೆ ಬೇಯಿಸಿ 5 ನೆಲ್ಲಿಕಾಯಿ ಬೀಜ ಬಿಡಿಸಿ ಇಟ್ಟುಕೊಳ್ಳಿ. 3ನ್ನು ಹಾಗೆಯೇ ಉಳಿಸಿಕೊಳ್ಳಿ. ಬಾಣಲೆಗೆ ಕಾಳು ಮೆಣಸು, ಜೀರಿಗೆ, ಕೊತ್ತಂಬರಿ ಬೀಜ, ಮೆಂತ್ಯ ಹಾಕಿ ಚೆನ್ನಾಗಿ ಹುರಿದುಕೊಳ್ಳಿ. ಮಿಕ್ಸಿ ಜಾರಿಗೆ ಮೊದಲು ಹುರಿದ ಮಸಾಲೆ ಹಾಕಿ ಒಂದು ಸಲ ನೀರು ಹಾಕದೆ ಪುಡಿ ಮಾಡಿಕೊಂಡು ಅದಕ್ಕೆ ಬೇಯಿಸಿದ ನೆಲ್ಲಿಕಾಯಿ, ತೆಂಗಿನತುರಿ, ಉಪ್ಪು, ಅರಿಶಿಣ ಹಾಕಿ ಸ್ವಲ್ಪ ನೀರು ಸೇರಿಸಿ ನುಣ್ಣಗೆ ರುಬ್ಬಿಕೊಳ್ಳಿ. ಈಗ ಒಂದು ಪಾತ್ರೆಗೆ 3 ಚಮಚ ತುಪ್ಪ ಹಾಕಿ ಕಾದನಂತರ ಅದಕ್ಕೆ ಸಾಸಿವೆ, ಇಂಗು, ಕರಿಬೇವು ಹಾಕಿ ಒಗ್ಗರಣೆ ಆದನಂತರ ಅದಕ್ಕೆ ರುಬ್ಬಿದ ಮಿಶ್ರಣ ಜೊತೆಗೆ 7- 8ಕಪ್ ನೀರು ಸೇರಿಸಿ ಕುದಿಯಲು ಬಿಡಿ. ಅದಕ್ಕೆ ಬೇಯಿಸಿದ ಬೀಜ ತೆಗೆಯದೆ ಉಳಿಸಿಕೊಂಡ 2-3 ನೆಲ್ಲಿಕಾಯಿ ಕೂಡ ಹಾಕಿ. ಅದಕ್ಕೆ ಸ್ವಲ್ಪ ಬೆಲ್ಲ ಸೇರಿಸಿಕೊಳ್ಳಿ.2ಹಸಿರು ಮೆಣಸಿನಕಾಯಿಯನ್ನು ಉದ್ದಕ್ಕೆ ಸಿಗಿದು ಕುದಿಯುತ್ತಿರುವ ರಸಕ್ಕೆ ಸೇರಿಸಿ. ಚೆನ್ನಾಗಿ 5- 6 ನಿಮಿಷ ಕುದಿಸಿ ಒಲೆ ಆರಿಸಿ. ಬಿಸಿಯಾದ ಅನ್ನದ ಜೊತೆ ಈ ನೆಲ್ಲಿಕಾಯಿ ರಸಂ ಮೇಲಿಂದ ಒಂದು ಚಮಚ ತುಪ್ಪ ಹಾಕಿ ಬಡಿಸಿ. ಬೇಕಾದಲ್ಲಿ ರಸಂ ನಲ್ಲಿ ಉಪ್ಪು ಖಾರ ಹೀರಿಕೊಂಡು ತೇಲುತ್ತಿರುವ ನೆಲ್ಲಿಕಾಯಿಯನ್ನು ರಸಂ ಜೊತೆ ಕಿವುಚಿ ಅನ್ನದ ಜೊತೆ ಕಲಸಿಕೊಳ್ಳಿ. ಎಂದಿಗಿಂತಲೂ ಹೆಚ್ಚು ಊಟ ಮಾಡಿಲ್ಲವೆಂದರೆ ಕೇಳಿ.

**ಹುಣಸೇಹಣ್ಣಿನ ರಸಂ:** ಪ್ರತಿ ವರ್ಷ ಹೊಸ ಹುಣಸೇಹಣ್ಣು ಮನೆಗೆ ತಂದಾಗ ಈ ರಸಂ ಮಾಡಿ ಸವಿಯದಿದ್ದರೆ ಹುಣಸೆ ಹಣ್ಣಿಗೆ ಜೊತೆಗೆ ನಮ್ಮ ನಾಲಿಗೆಗೆ ಮೋಸ ಮಾಡಿದಂತೆ, ಅಷ್ಟು ರುಚಿ ಈ ರಸಂ.



| ಅನುಪಮ ಹೆಗಡೆ

**ಬೇಕಾಗುವ ಸಾಮಗ್ರಿ:** ಒಂದು ನಿಂಬೆಗಾತ್ರದ ಹುಣಸೆಹಣ್ಣು, ಜೀರಿಗೆ 2 ಚಮಚ, ಕೊತ್ತಂಬರಿ ಬೀಜ 4 ಚಮಚ, ಕೆಂಪು ಮೆಣಸಿನಕಾಯಿ 8- 10, ಅರಿಶಿನ ಚಿಟಿಕೆ, ಮೆಂತ್ಯ 1/4 ಚಮಚ, ರುಚಿಗೆ ತಕ್ಕಷ್ಟು ಉಪ್ಪು, ಬೆಲ್ಲ 1 ಚಮಚ, ಒಗ್ಗರಣೆಗೆ : ಕೊಬ್ಬರಿ ಎಣ್ಣೆ 4 ಚಮಚ, ಸಾಸಿವೆ, ಜೀರಿಗೆ 1 ಚಮಚ, ಬೆಳ್ಳುಳ್ಳಿ 8-10 ಎಸಳು, ಕರಿಬೇವು ಒಂದು ಎಸಳು.

**ಮಾಡುವ ವಿಧಾನ:** ಹುಣಸೇಹಣ್ಣನ್ನು ಬೆಚ್ಚಗಿನ ನೀರಲ್ಲಿ 10 ನಿಮಿಷ ನೆನೆಸಿ, ಚೆನ್ನಾಗಿ ರಸ ಹಿಂಡಿ ತೆಗೆದು ಇಟ್ಟುಕೊಳ್ಳಿ. ಜೀರಿಗೆ, ಮೆಂತ್ಯ, ಕೊತ್ತಂಬರಿ ಬೀಜ, ಕೆಂಪುಮೆಣಸಿನ ಕಾಯಿ ಇವುಗಳನ್ನು ಒಂದು ಬಾಣಲೆಗೆ ಹಾಕಿ ಘಂ ಎಂದು ಹುರಿದುಕೊಳ್ಳಿ. ಮಿಕ್ಸಿ ಜಾರಿಗೆ ಹುರಿದ ಸಾಮಗ್ರಿ ಹಾಕಿ ಪುಡಿಮಾಡಿಕೊಳ್ಳಿ. ಈಗ ಒಂದು ದೊಡ್ಡ ಪಾತ್ರೆಗೆ ನೆನೆಸಿದ ಹುಣಿಸೆರಸ, 10 ಕಪ್ ನೀರು, ಉಪ್ಪು, ಬೆಲ್ಲ ಹಾಕಿ ಕುದಿಯಲು ಬಿಡಿ. ಈಗ ಪುಡಿ ಮಾಡಿದ ಮಸಾಲೆ, ಅರಿಶಿಣ ಹಾಕಿ ಮತ್ತೆ 5 - 6ನಿಮಿಷ ಚೆನ್ನಾಗಿ ಕುದಿಸಿ ಒಲೆ ಆರಿಸಿ. ನಿಮ್ಮ ರುಚಿಗೆ ಜಾಸ್ತಿ ಬೆಲ್ಲ ಬೇಕಿದ್ದಲ್ಲಿ ಸೇರಿಸಿಕೊಳ್ಳಬಹುದು. ಈಗ ಒಗ್ಗರಣೆಗೆ ಕೊಬ್ಬರಿ ಎಣ್ಣೆ, ಸಾಸಿವೆ, ಜೀರಿಗೆ, ಸಿಪ್ಪೆ ಬಿಡಿಸಿ ಜಜ್ಜಿದ ಬೆಳ್ಳುಳ್ಳಿ, ಕರಿಬೇವು ಹಾಕಿ ರಸಂ ಗೆ ಒಗ್ಗರಣೆ ಸೇರಿಸಿ ಮುಚ್ಚಿಡಿ. ಹಬೆಯಾಡುತ್ತಿರುವ ಅನ್ನಕ್ಕೆ ಈ ಹುಣಸೆರಸ ಜೊತೆಗೆ ತುಪ್ಪ ಹಾಕಿ ಬಡಿಸಿ. ಮತ್ತೆ ಮತ್ತೆ ಕೇಳಿ ಹಾಕಿಸಿಕೊಳ್ಳುವ ಹುಳಿ, ಸಿಹಿ, ಖಾರ ಮಿಶ್ರಿತ ಹುಣಿಸೆ ರಸಂ ಸವಿಯಲು ಸಿದ್ಧ. ಮೇಲೆ ತಿಳಿಸಿದ ಎರಡೂ ರಸಂ ಕೂಡ ಕುಡಿಯಲು ಸೈ, ಅನ್ನಕ್ಕಾದರೂ ಸೈ. ಈಗ ನೆಲ್ಲಿಕಾಯಿ ಸೀಸನ್, ಬೇಗ ಓದಿ ತಿಳಿದು, ಮಾಡಿ ಸವಿಯುತ್ತೀರಲ್ಲವೇ?

## ಕೊಡ್ಸರ ಸೊಸೈಟಿಯಲ್ಲಿ ಗಿರಣಿ ಸೇವೆ ಆರಂಭ



● **ತತ್ವನಿಷ್ಠ, ಸಿದ್ದಾಪುರ:** ತಾಲೂಕಿನ ಕೋಡ್ಸರ ಗ್ರಾಮದಲ್ಲಿ ರೈತರಿಗೆ ಅನುಕೂಲವಾಗುವಂತೆ ವ್ಯವಸಾಯ ಸೇವಾ ಸಹಕಾರಿ ಸಂಘದಲ್ಲಿ ನೂತನವಾಗಿ ಹಿಟ್ಟು ಮತ್ತು ಎಣ್ಣೆ ಗಿರಣಿಯ ಸೇವೆಯನ್ನು ಶನಿವಾರ ಪ್ರಾರಂಭಿಸಲಾಯಿತು. ಸಂಘದ ಅಧ್ಯಕ್ಷ ಜಿ.ಎಸ್. ಹೆಗಡೆ ಕಂಚೀಕೈ ಹಾಗೂ ಉಪಾಧ್ಯಕ್ಷ ಮಹೇಶ ಭಟ್ಟ ಯಲೂಗಾರ ಅವರು ಗಿರಣಿ ಯಂತ್ರೋಪಕರಣಗಳಿಗೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿ, ವಿದ್ಯುಕ್ತ ಚಾಲನೆ ನೀಡಿದರು. ಉದ್ಘಾಟನೆಯ ನಂತರ ಮಾತನಾಡಿದ ಅಧ್ಯಕ್ಷ ಜಿ.ಎಸ್. ಹೆಗಡೆ, ನಮ್ಮ ಭಾಗದ ರೈತರಿಗೆ ಕೃಷಿ ಚಟುವಟಿಕೆಗಳ ಜೊತೆಗೆ ದೈನಂದಿನ ಅಗತ್ಯಗಳಿಗೂ ಅನುಕೂಲವಾಗುವಂತೆ ಸಂಘದಲ್ಲಿ ಈ ಹೊಸ ಸೌಲಭ್ಯ ಕಲ್ಪಿಸಲಾಗಿದೆ. ಸ್ಥಳೀಯರು ಈ ಸೌಲಭ್ಯದ ಸದುಪಯೋಗ ಪಡೆದುಕೊಳ್ಳಬೇಕು ಎಂದರು. ಸಂಘದ ಆಡಳಿತ ಮಂಡಳಿ ನಿರ್ದೇಶಕರು, ಮುಖ್ಯ ಕಾರ್ಯನಿರ್ವಾಹಕ, ಸಿಬ್ಬಂದಿ ಹಾಗೂ ಸ್ಥಳೀಯ ರೈತರು ಉಪಸ್ಥಿತರಿದ್ದರು.

## ಪುರಸಭೆ ಕಟ್ಟಡ ಸ್ಥಳಾಂತರ: ವೀಕ್ಷಣೆ

● **ತತ್ವನಿಷ್ಠ, ಕುಮಟಾ:** ಪಟ್ಟಣದ ಮೂರು ಕಟ್ಟೆಯ ಪುರಸಭೆ ಕಚೇರಿಯನ್ನು ಗಿಬ್ ಸರ್ಕಲ್‌ನ ಹಳೇ ತಹಸೀಲ್ದಾರ್ ಕಚೇರಿಯ ಕಟ್ಟಡಕ್ಕೆ ಸ್ಥಳಾಂತರ ಮಾಡಲಾಗುತ್ತಿದ್ದು , ಡಿ. 1ರಿಂದ ಪುರಸಭೆ ಸೇವೆ ದೊರೆಯಲಿದೆ. ಈ ಕಟ್ಟಡದ ವ್ಯವಸ್ಥೆ ಹಾಗೂ ಆಗಬೇಕಾದ ಕಾರ್ಯಗಳ ಕುರಿತಾಗಿ ಶಾಸಕ ದಿನಕರ ಶೆಟ್ಟಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮೂರುಕಟ್ಟೆಯಲ್ಲಿ ಹಲವು ವರ್ಷಗಳಿಂದ ಪುರಸಭೆ ಕಚೇರಿ ಇದೆ. ತೀರಾ ಇಕ್ಕಟ್ಟಾದ ಜಾಗದಲ್ಲಿದ್ದ ಕಟ್ಟಡ ತೀರಾ ಹಳೆಯದಾಗಿದ್ದು , ಮಳೆಗಾಲದಲ್ಲಿ ಸೋರುತಿತ್ತು. ಸಮರ್ಪಕ ಪಾರ್ಕಿಂಗ್ ವ್ಯವಸ್ಥೆ ಇರಲಿಲ್ಲ. ಪುರಸಭೆಯ ಸಭೆ ಸಮಾರಂಭವನ್ನು ಪಕ್ಕದ ಅಣ್ಣ ಪೈ ಹಾಲ್‌ನಲ್ಲಿ ನಡೆಸಬೇಕಾದ ಅನಿವಾರ್ಯತೆ ಇತ್ತು. ಅಲ್ಲದೇ ಮೇಲ್ಮಹಡಿಯಲ್ಲಿ ಕಚೇರಿಯಿದ್ದಿದ್ದರಿಂದ ವೃದ್ಧರಿಗೆ, ಅಂಗವಿಕಲರಿಗೆ ಮೆಟ್ಟಿಲು ಏರಿ ಕಚೇರಿಗೆ ತೆರಳಲು ಸಮಸ್ಯೆಯಾಗಿತ್ತು. ಹಾಗಾಗಿ ಬದಲಿ ಕಟ್ಟಡಕ್ಕೆ ಸ್ಥಳಾಂತರ ಮಾಡಲು ಪುರಸಭೆ ಮುಖ್ಯಾಧಿಕಾರಿ ಎಂ ಆರ್ ಸ್ವಾಮಿ ಅವರು ಸೂಕ್ತ ಕಟ್ಟಡದ ಹುಡುಕಾಟ ನಡೆಸಿದ್ದರು. ಅದರಂತೆ ಈಗ ಗಿಬ್ ಸರ್ಕಲ್‌ನ ಹಳೇ ತಹಸೀಲ್ದಾರ್ ಕಚೇರಿಯ ಕಟ್ಟಡಕ್ಕೆ ಸ್ಥಳಾಂತರ ಮಾಡುವ ವ್ಯವಸ್ಥೆ ನಡೆಯುತ್ತಿದೆ. ಡಿ. 1ರಿಂದ ಕಚೇರಿ ಸಂಪೂರ್ಣ ಸ್ಥಳಾಂತರಗೊಂಡು ಪುರಸಭೆಯ ಎಲ್ಲ ಸೇವೆಗಳು ಈ ಕಟ್ಟಡದಲ್ಲಿ ದೊರೆಯಲಿದೆ. ಪುರಸಭೆ ಕಚೇರಿಯ ಎಲ್ಲ ವಿಭಾಗವನ್ನು ವ್ಯವಸ್ಥಿತವಾಗಿ ಸೆಟ್‌ಅಪ್ ಮಾಡಿದ್ದೇವೆ. ಇದಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು, ಜಿಲ್ಲಾಧಿಕಾರಿ, ಎಸಿ ಮತ್ತು ತಹಸೀಲ್ದಾರ್ ಅವರು ಸಹಕಾರ ನೀಡಿದ್ದಾರೆ. ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಈ ಎಲ್ಲ ಕಾರ್ಯಗಳು ನಡೆದಿದೆ ಎಂದು ಪುರಸಭಾ ಮುಖ್ಯಾಧಿಕಾರಿಗಳು ಮಾಹಿತಿ ನೀಡಿದ್ದಾರೆ.



# ಕೆಡಿಸಿಸಿ ಚುನಾವಣೆ: ಹೆಬ್ಬಾರ ಬಣಕ್ಕೆ ಗೆಲುವು

## ನ್ಯಾಯಾಲಯದ ಸೂಚನೆಯಂತೆ 4 ಕ್ಷೇತ್ರಗಳ ಮತ ಎಣಿಕೆ | ಕುತೂಹಲ ಮೂಡಿಸಿದ ಸುರೇಶ್ಚಂದ್ರ ಹೆಗಡೆ ಆಯ್ಕೆ

● **ತತ್ವನಿಷ್ಠ, ಶಿರಸಿ:** ಜಿಲ್ಲಾ ಮಧ್ಯವರ್ತಿ ಬ್ಯಾಂಕ್‌ನ (ಕೆಡಿಸಿಸಿ) ನಿರ್ದೇಶಕ ಸ್ಥಾನಕ್ಕೆ ಬಾಕಿ ಉಳಿದಿದ್ದ 4 ಸ್ಥಾನಗಳ ಮತ ಎಣಿಕೆ ಶನಿವಾರ ನಡೆಯಿತು.

ಕೆಡಿಸಿಸಿ ಬ್ಯಾಂಕಿನ 16 ನಿರ್ದೇಶಕ ಸ್ಥಾನಗಳಿಗೆ ಅ. 25ರಂದು ಚುನಾವಣೆ ನಡೆದಿತ್ತು. 9 ಸ್ಥಾನಗಳಿಗೆ ಸಂಬಂಧಿಸಿದ ಮತದಾರರ ಯಾದಿ ಹಾಗೂ ವಿವಿಧ ವಿಷಯಗಳ ಕುರಿತಂತೆ ಕೆಲವರು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದರು. ಹೀಗಾಗಿ, ವಿವಾದಿತ ಮತಗಳನ್ನು ಪ್ರತ್ಯೇಕ ಮತ ಪೆಟ್ಟಿಗೆಯಲ್ಲಿ ಸಂಗ್ರಹಿಸಿಟ್ಟು, ಉಳಿದ ಮತ ಎಣಿಕೆ ನಡೆದಿತ್ತು. ಆದರೆ, ಈ ಪ್ರತ್ಯೇಕವಾಗಿ ಇಟ್ಟ ಮತಗಳ ಎಣಿಕೆ ಪೂರ್ಣಗೊಳ್ಳದ ಹೊರತೂ ಫಲಿತಾಂಶ ಘೋಷಣೆ ಸಾಧ್ಯವಾಗಿರಲಿಲ್ಲ. ಧಾರವಾಡ ಉಚ್ಚ ನ್ಯಾಯಾಲಯ ಈ 9 ಸ್ಥಾನಗಳಲ್ಲಿ ನಾಲ್ಕು ಸ್ಥಾನಗಳಿಗೆ ಮತ ಎಣಿಕೆ ನಡೆಸಿ ಫಲಿತಾಂಶ ಪ್ರಕಟಿಸಲು ಸೂಚಿಸಿದ್ದ ಹಿನ್ನೆಲೆಯಲ್ಲಿ ಶನಿವಾರ ಈ ಮತಗಳ ಎಣಿಕೆ ನಡೆಯಿತು.

ಯಲ್ಲಾಪುರ ಪ್ರಾಥಮಿಕ ಪ್ರಾಥಮಿಕ ಪತ್ತಿನ ಸಹಕಾರಿ ಕ್ಷೇತ್ರದಲ್ಲಿ ಹಾಲಿ ಅಧ್ಯಕ್ಷ ಶಿವರಾಮ ಹೆಬ್ಬಾರ್ ಗೆಲುವು ಸಾಧಿಸಿ ನಗೆ ಬೀರಿದ್ದಾರೆ. ಅವರು 10 ಮತ ಪಡೆದರೆ ಅವರ ಪ್ರತಿಸ್ಪರ್ಧಿ ಗೋಪಾಲಕೃಷ್ಣ ನರಸಿಂಹ ಗಾಂವಕರ್ 2 ಮತ ಪಡೆದುಕೊಂಡಿದ್ದಾರೆ. ಶಿರಸಿ ತಾಲೂಕು ಮಹಾಬಲೇಶ್ವರ ಅನಂತ ಹೆಗಡೆ 13 ಮತ ಪಡೆದು ವಿಜಯಿಯಾದರೆ ಪ್ರತಿಸ್ಪರ್ಧಿ ಜಿ.ಆರ್. ಹೆಗಡೆ ಬೆಳ್ಳೇಕೇರಿ 12 ಮತ ಪಡೆದು ಪರಾಭವಗೊಂಡರು. ತಾಲೂಕು ಒಕ್ಕಲುತನ ಹುಟ್ಟುವಳಿಗಳ ಮಾರಾಟ ಸಹಕಾರಿ ಸಂಘಗಳ ಮತ ಕ್ಷೇತ್ರ ಸ್ಥಾನದಲ್ಲಿ ಟಿಎಸ್‌ಎಸ್ ಅಧ್ಯಕ್ಷ ಗೋಪಾಲಕೃಷ್ಣ ವೈದ್ಯ 5 ಮತ ಪಡೆದರೆ ರವಿ ಗಜಾನನ ಹೆಗಡೆ 6 ಮತ ಪಡೆದು ವಿಜಯಿಯಾದರು.

ಶಿವರಾಮ ಹೆಬ್ಬಾರ್ ಬೆಂಬಲಿಗರಾದ ಶಂಕರ ಪರಮೇಶ್ವರ ಹೆಗಡೆ ಹಾಗೂ ಮಂಕಾಳ ವೈದ್ಯ ಅವರ ಬೆಂಬಲಿಗ, ಹಾಲಿ ನಿರ್ದೇಶಕ ಸುರೇಶ್ಚಂದ್ರ ಹೆಗಡೆ ಕೆಶಿನ್ಮನೆ ತಲಾ 109 ಮತ ಗಳಿಸುವ ಮೂಲಕ ಕುತೂಹಲ ಮೂಡಿಸಿದರು. ಸಹಕಾರಿ ಸಂಘಗಳ ಚುನಾವಣೆಯ ಬೈಲಾದಂತೆ ಚೀಟಿ ಎತ್ತುವ ಮೂಲಕ ಆಯ್ಕೆ ಪ್ರಕ್ರಿಯೆ ನಡೆಸಿದಾಗ ಸುರೇಶ್ಚಂದ್ರ ಹೆಗಡೆ ಆಯ್ಕೆಯಾಗಿ ಗೆಲುವಿನ ನಗೆ ಬೀರಿದರು.

ಇನ್ನು ಔದ್ಯೋಗಿಕ ಮತದಾರ ಕ್ಷೇತ್ರ, ಸಿದ್ದಾಪುರ ಸಹಕಾರಿ ಸಂಘ, ಕಾರವಾರ ಸಹಕಾರಿ ಸಂಘ ಕ್ಷೇತ್ರ, ಗ್ರಾಹಕರ ಕ್ಷೇತ್ರ ಹಾಗೂ ಅರ್ಬನ್ ಬ್ಯಾಂಕ್ ಮತ ಕ್ಷೇತ್ರ ಸೇರಿದಂತೆ 5 ನಿರ್ದೇಶಕ ಸ್ಥಾನಗಳ ಮತ ಎಣಿಕೆ ನಡೆಯಬೇಕಿದ್ದು, ನ್ಯಾಯಾಲಯದ ಆದೇಶಕ್ಕೆ ಕಾಯಲಾಗುತ್ತಿದೆ.

ಹಾಲಿ ಅಧ್ಯಕ್ಷ, ನೂತನ ನಿರ್ದೇಶಕ ಹಾಗೂ ಶಾಸಕ ಶಿವರಾಮ ಹೆಬ್ಬಾರ್, ಕೆಡಿಸಿಸಿ ಬ್ಯಾಂಕ್ ಜಿಲ್ಲೆಯ ಸಹಕಾರಿ ಬ್ಯಾಂಕ್‌ಗಳ ದೊಡ್ಡಣ್ಣನಾಗಿದ್ದು, ಹಿರಿಯರು ಸ್ಥಾಪಿಸಿದ ಉದ್ದೇಶವನ್ನು ಸಮರ್ಪಕವಾಗಿ ನಾವು ಒಯ್ಯುತ್ತೇವೆ. ಯಾವ ಕಾರಣಕ್ಕೂ ಜಿಲ್ಲೆಯ ರೈತರು, ಬ್ಯಾಂಕಿನಲ್ಲಿ ಠೇವಣಿ ಇಟ್ಟವರಿಗೆ ಸಮಸ್ಯೆ ಆಗದಂತೆ ನೋಡಿಕೊಳ್ಳುತ್ತೇವೆ. ಸಂಸ್ಥೆಯ ಗೌರವಕ್ಕೆ ಚ್ಯುತಿ ಬಾರದಂತೆ ನೋಡಿಕೊಳ್ಳುತ್ತೇವೆ ಎಂದರು.

ಉಪವಿಭಾಗಾಧಿಕಾರಿ ಕೆ.ವಿ.ಕಾವ್ಯಾರಾಣಿ ಚುನಾವಣಾ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು.



**ಚುನಾವಣೆಯ ತನಕ ಮಾತ್ರ ಪ್ರತಿಸ್ಪರ್ಧಿಗಳು. ಇನ್ನು ಮುಂದೆ ಆಡಳಿತ ಪಕ್ಷ, ವಿರೋಧಿ ಪಕ್ಷ ಎಂಬುದು ಬ್ಯಾಂಕಿನ ಆಡಳಿತದಲ್ಲಿ ಇರುವುದಿಲ್ಲ. ಎಲ್ಲರೂ ಸೇರಿ ಬ್ಯಾಂಕ್‌ನ ಅಭಿವೃದ್ಧಿಗೆ ಶ್ರಮಿಸಲಾಗುತ್ತದೆ.**

● **ಶಿವರಾಮ ಹೆಬ್ಬಾರ,** ನೂತನ ನಿರ್ದೇಶಕ

**ಮತ ಎಣಿಕೆಯಲ್ಲಿ ಹಾಲಿ ಅಧ್ಯಕ್ಷ ಶಿವರಾಮ ಹೆಬ್ಬಾರ್ ಬಣ ಮತ್ತೆ ಮೇಲುಗೈ ಸಾಧಿಸಿದೆ. ನಾಲ್ಕರಲ್ಲಿ ಮೂರು ಸ್ಥಾನಗಳಲ್ಲಿ ಶಿವರಾಮ ಹೆಬ್ಬಾರ್ ಹಾಗೂ ಬೆಂಬಲಿಗರು ಅಧಿಕೃತವಾಗಿ ವಿಜಯಿಯಾದರೆ, ಮಂಕಾಳ ವೈದ್ಯ ಬೆಂಬಲಿಗ, ಹಾಲಿ ನಿರ್ದೇಶಕ ಸುರೇಶ್ಚಂದ್ರ ಹೆಗಡೆ ಕೆಶಿನ್ಮನೆ ಚೀಟಿ ಎತ್ತುವ ಮೂಲಕ ವಿಜಯಿಯಾದರು. ಇದುವರೆಗೆ ಪ್ರಕಟಗೊಂಡ 11 ಸ್ಥಾನಗಳಲ್ಲಿ 8 ನಿರ್ದೇಶಕ ಸ್ಥಾನಗಳಲ್ಲಿ ಶಾಸಕ ಹಾಗೂ ಹಾಲಿ ಅಧ್ಯಕ್ಷ ಶಿವರಾಮ ಹೆಬ್ಬಾರ್ ಬಣ ಮತ್ತು 3 ಸ್ಥಾನಗಳಲ್ಲಿ ಜೀಲಾಳ ಸಚಿವ ಮಂಕಾಳ ವೈದ್ಯ ಬಣ ಮುಂಚೂಣಿಗೆ ಬಂದಂತಾಗಿದೆ.**




**ಕಳೆದ 5 ವರ್ಷಗಳಿಂದ ಹಾಲು ಉತ್ಪಾದಕ ರೈತರ ಪರವಾಗಿ ಕಾರ್ಯ ನಿರ್ವಹಿಸಿ ನಾನು ಮನೆ ಮಾತಾಗಿದ್ದೇನೆ. ಆದರೆ, ಕೆಡಿಸಿಸಿ ಚುನಾವಣೆ ಇಷ್ಟು ಜಿದ್ದಾಜಿದ್ದಿ ಆಗುತ್ತದೆ ಎಂದು ಎಣಿಸಿರಲಿಲ್ಲ. ಚುನಾವಣೆಯ ವಿಚಾರದಲ್ಲಿ ಬೇರೆಯೇ ಆಗುತ್ತದೆ ಎಂಬುದನ್ನು ಈಗ ಅರ್ಥೈಸಿಕೊಂಡಿದ್ದೇನೆ.**

● **ಸುರೇಶ್ಚಂದ್ರ ಹೆಗಡೆ ಕೆಶಿನ್ಮನೆ,** ನೂತನ ನಿರ್ದೇಶಕ



# ಬಿಸಿಯೂಟ ಸೇವನೆ: 50ಕ್ಕೂ ಅಧಿಕ ಮಕ್ಕಳು ಅಸ್ವಸ್ಥ

● **ತತ್ವನಿಷ್ಠ, ಮುಂಡಗೋಡ:** ಪಟ್ಟಣದ ಸರಕಾರಿ ಶಾಸಕರ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಸಂಪೂರ್ಣ ಅವ್ಯವಸ್ಥೆ ಆಗರವಾಗಿರುವ ಬಗ್ಗೆ ಪಾಲಕರು ಹಾಗೂ ಸಾರ್ವಜನಿಕರು ಶಿರಸಿ ಉಪವಿಭಾಗಾಧಿಕಾರಿ ಕಾವ್ಯ ರಾಣಿ ಅವರ ಎದುರು ಎಳೆ ಎಳೆಯಾಗಿ ವಿವರಿಸಿ ಶಾಲಾಡಳಿತದ ವಿರುದ್ಧ ಅಸಮಾಧಾನ ಹೊರ ಹಾಕಿದ ಪ್ರಸಂಗ ನಡೆಯಿತು.

ಶಾಸಕರ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬಿಸಿಯೂಟ ಸೇವಿಸಿ 50 ಕ್ಕೂ ಅಧಿಕ ಮಕ್ಕಳು ಅಸ್ವಸ್ಥಗೊಂಡು ಆಸ್ಪತ್ರೆಗೆ ದಾಖಲಾದ ಹಿನ್ನೆಲೆಯಲ್ಲಿ ಮುಂಡಗೋಡ ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿದ ವೇಳೆಯಲ್ಲಿ ಜಮಾವಣೆಗೊಂಡ ಪಾಲಕರು ಹಾಗೂ ಸಾರ್ವಜನಿಕರು, ಈ ಶಾಲೆಯಲ್ಲಿ ಆಗಾಗ ಕಲುಷಿತ ಆಹಾರ ಸೇವಿಸಿ ಅಸ್ವಸ್ಥಗೊಳ್ಳುವುದು ಸೇರಿದಂತೆ ಒಂದಿಲ್ಲೊಂದು ಸಮಸ್ಯೆ ಆಗುತ್ತಲೇ ಇರುತ್ತವೆ. ಮಕ್ಕಳ ಜೀವಕ್ಕೆ ಹಾನಿಯಾದರೆ ಯಾರು ಹೊಣೆ ಎಂದು ಪ್ರಶ್ನಿಸಿದರು.

ಅಲ್ಲದೇ ಶಾಲಾಯಲ್ಲಿ ಸಮರ್ಪಕ ಶೌಚಾಲಯ ವ್ಯವಸ್ಥೆ ಇಲ್ಲದ ಕಾರಣಕ್ಕೆ ಬೆಳಿಗ್ಗೆ ಶಾಲೆಗೆ ಹೋಗುವ ಹೆಣ್ಣು ಮಕ್ಕಳು ಸಂಜೆ ಮನೆಗೆ ಬಂದು ಶೌಚಗೃಹಕ್ಕೆ ಹೋಗುತ್ತಾರೆ. ಹೀಗಾದರೆ ಮಕ್ಕಳ ಆರೋಗ್ಯ ಸ್ಥಿತಿ ಏನಾಗಬಾರದು? ಅಲ್ಲದೇ ಶಾಲೆಯಲ್ಲಿ ಶಿಕ್ಷಕರೇ ಇರುವುದಿಲ್ಲ. 3 ತಿಂಗಳಿಗೊಬ್ಬರು ಶಿಕ್ಷಕರು ಬದಲಾಗುತ್ತಾರೆ. ಸರಿಯಾದ ಪಾಠವಿಲ್ಲದೆ ಮಕ್ಕಳ ಶಿಕ್ಷಣ ಕುಂಠಿತಗೊಳ್ಳುತ್ತಿದೆ. ಕಳೆದ 2-3 ವರ್ಷಗಳಿಂದ ಶಾಲಾಭಿವೃದ್ಧಿ ಸಮಿತಿ ರಚನೆ ಮಾಡಲಾಗಿಲ್ಲ. ಪಾಲಕರ ಸಭೆ ಕೂಡ ಕರೆಯುವುದಿಲ್ಲ. ಯಾರ ಗಮನಕ್ಕೂ ತಾರದೆ ತಮಗೆ ಬೇಕಾದವರ ಹೆಸರನ್ನು ಶಾಲಾಭಿವೃದ್ಧಿ ಸಮಿತಿ ಯಾದಿ ಬರೆದಿಟ್ಟು ಕೊಂಡಿದ್ದಾರೆ. ಈ ಬಗ್ಗೆ ಮುಖ್ಯಾಧ್ಯಾಪಕರನ್ನು ಪ್ರಶ್ನಿಸಿದರೆ, ಶಾಸಕರ ಪಿಎಗಳ ಹೆಸರು ಹೇಳುತ್ತಾರೆ. ಶಾಲೆ ಸಂಪೂರ್ಣ ಶಿಫಾರಸ್ಸಿನ ಮೇಲೆ ನಡೆಯುತ್ತಿದೆ ಎಂದು ಆರೋಪಿಸಿದರು. ತಕ್ಷಣ ಅಡುಗೆಯವರು ಮತ್ತು ಮುಖ್ಯಾಧ್ಯಾಪಕರ ಮೇಲೆ ಕ್ರಮ ಕೈಗೊಳ್ಳಬೇಕು. ಇಲ್ಲದೇ ಹೋದರೆ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಉಪವಿಭಾಗಾಧಿಕಾರಿ, ಮಕ್ಕಳಿಗೆ ಆಗಿರುವ ಅನಾರೋಗ್ಯ ಸಮಸ್ಯೆ ಬಗ್ಗೆ ಮಾಹಿತಿ ಪಡೆದುಕೊಳ್ಳಲಾಗಿದೆ. ವರದಿ ಬಂದ ಬಳಿಕ ಸೂಕ್ತ ಕ್ರಮ ಕೈಗೊಳ್ಳಲಾಗುವುದಲ್ಲದೇ, ಶಾಲೆಯ ಕುಂದು ಕೊರತೆಗಳ ಬಗ್ಗೆ ಕೂಡ ಪರಿಶೀಲಿಸಿ ಸೂಕ್ತ ವ್ಯವಸ್ಥೆ ಕಲ್ಪಿಸುವ ಕ್ರಮ ಕೈಗೊಳ್ಳಲಾಗುವುದೆಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮುಂಡಗೋಡ ತಹಸೀಲ್ದಾರ ಶಂಕರ ಗೌಡಿ, ತಾಪಂ ಕಾರ್ಯನಿರ್ವಹಣಾಧಿಕಾರಿ ಟಿ.ವೈ. ದಾಸನಕೊಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಜಿ. ಸುಮಾ ಮುಂತಾದವರು ಉಪಸ್ಥಿತರಿದ್ದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಡಾ. ನೀರಜ್, ಮುಂಡಗೋಡ ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿ ಮಕ್ಕಳ ಆರೋಗ್ಯ ತಪಾಸಣೆ ನಡೆಸಿದರು. ಬಳಿಕ ಪತ್ರಕರ್ತರೊಂದಿಗೆ ಮಾತನಾಡಿ, ಫುಡ್ ಪಾಯಿಸನ್ ಆಗಿದೆಯೋ ಅಥವಾ ಬೇರೆ ಕಾರಣವಿದೆಯೋ ಎಂಬುವುದು ಮಾದರಿ ಪರೀಕ್ಷೆ ವರದಿ ಬಂದ ಬಳಿಕವಷ್ಟೇ ತಿಳಿಯಲಿದೆ ಎಂದರು.

ಶಿರಸಿ ಶೈಕ್ಷಣಿಕ ಜಿಲ್ಲೆ ಉಪನಿರ್ದೇಶಕ ಡಿ.ಆರ್. ನಾಯ್ಕ ಪಟ್ಟಣದ ಶಾಸಕರ ಮಾದರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ನೋಟಿಸ್ ಜಾರಿ ಮಾಡಿದರಲ್ಲದೇ ಶಿಕ್ಷಕರು ಹಾಗೂ ಅಡುಗೆಯವರೊಂದಿಗೆ ಸಭೆ ನಡೆಸುವ ಮೂಲಕ ಘಟನೆಯ ಕುರಿತು ಮಾಹಿತಿ ಪಡೆದರು.

# ರೋಗ ಬಾಧೆ: ರೈತರಿಗೆ ಅಗತ್ಯ ಮಾಹಿತಿ ಕೊಡಿ

● **ತತ್ವನಿಷ್ಠ, ಶಿರಸಿ:** ರೋಗ ಬಾಧೆಯ ತೋಟಗಳಿಗೆ ವಿಜ್ಞಾನಿಗಳು ಭೇಟಿ ನೀಡಿ, ಮುಂಜಾಗ್ರತಾ ಕ್ರಮದ ಕುರಿತು ರೈತರಿಗೆ ಅಗತ್ಯ ಮಾಹಿತಿ ನೀಡುವ ಚಿಂತನೆ ಆಗಬೇಕಿರುವುದು ಅತ್ಯವಾಗಿದೆ ಎಂದು ಶಾಸಕ ಭೀಮಣ್ಣ ನಾಯ್ಕ ಹೇಳಿದರು.




ಅವರು ಶನಿವಾರ ನಗರದ ತೋಟಗಾರಿಕಾ ಇಲಾಖೆಯ ಡಾ.ಎಮ್. ಎಚ್.ಮರಿಗೌಡ ಸಭಾಭವನದಲ್ಲಿ ಜಿಲ್ಲಾ ಪಂಚಾಯತ ಉತ್ತರಕನ್ನಡ ಹಾಗೂ ತೋಟಗಾರಿಕಾ ಇಲಾಖೆಯ ವತಿಯಿಂದ ಅಡಿಕೆ ಬೆಳೆಯ ರೋಗಗಳ ನಿಯಂತ್ರಣಕ್ಕೆ ಜೈವಿಕ ಪರಿಕರ ವಿತರಿಸಿ, ಮಾತನಾಡಿದರು.

ಅಡಿಕೆಗೆ ವ್ಯಾಪಕವಾಗಿ ಎಲೆ ಚುಕ್ಕೆ ಹಾಗೂ ಹಳದಿ ರೋಗಗಳು ಹರಡುತ್ತಿದೆ. ಸರ್ಕಾರ ಸಹ ಈ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಿದೆ. ರೈತರು ತೋಟಗಾರಿಕೆ ಇಲಾಖೆ ಅಧಿಕಾರಿಗಳ ಸಲಹೆ-ಸೂಚನೆಗಳನ್ನು ಪಾಲಿಸುವ ಮೂಲಕ ತಮ್ಮ ತೋಟಗಳನ್ನು ರಕ್ಷಣೆ ಮಾಡಿಕೊಳ್ಳಬೇಕು. ಅಡಿಕೆ ಬೆಳೆಗಾರರ ನೋವಿನ ಬಗ್ಗೆ ಮಾತನಾಡುವುದು ಸುಲಭ. ಆದರೆ ಆ ನೋವನ್ನು ಅನುಭವಿಸುವುದು ಕಷ್ಟ. ಅಡಿಕೆ ಬೆಳೆಗಾರರ ನೋವಿಗೆ ಸ್ಪಂದಿಸುವ ಕೆಲಸ ಮಾಡುತ್ತಿದ್ದೇವೆ. ರೋಗಗಳ ಬಗ್ಗೆ ಈಗಾಗಲೇ ಅಧ್ಯಯನ ನಡೆಸಲಾಗಿದೆ. ಎಲೆಚುಕ್ಕೆ ಹಾಗೂ ಹಳದಿ ರೋಗದ ನಿಯಂತ್ರಣಕ್ಕೆ ಪರಿಹಾರ ಕಂಡುಕೊಳ್ಳಲು ಪ್ರಯತ್ನ ನಡೆಯುತ್ತಲೇ ಇದೆ. ಅಡಿಕೆ ಬೆಳೆಗಾರರು ಚಿಂತಾಕ್ರಾಂತರಾಗಿದ್ದಾರೆ. ಶಿರಸಿ-ಸಿದ್ದಾಪುರ ತಾಲೂಕಿನಲ್ಲಿ ಪ್ರಯೋಗ ನಡೆಯುತ್ತಿದೆ. ಸರಿಯಾಗಿ ಅಧ್ಯಯನ ನಡೆಸಿ ಪರಿಹಾರ ನೀಡುವಂತೆ ವಿಜ್ಞಾನಿಗಳು ತಿಳಿಸಿದ್ದಾರೆ. ಕೃಷಿಗಾಗಿ ಮಾಡಿದ ಸಾಲ ತೀರಿಸಲು ಹಾಗೂ ಜೀವನ ಮಾಡುವುದು ಹೇಗೆ ಎಂಬ ಪ್ರಶ್ನೆ ರೈತರಲ್ಲಿ ಮನೆಮಾಡಿದೆ. ಸರ್ಕಾರ ಅನುದಾನ ಬಿಡುಗಡೆ ಮಾಡಿ ಪರಿಕರಗಳನ್ನು ನೀಡುತ್ತಿದೆ. ತೋಟಗಾರಿಕೆ ಇಲಾಖೆ ಅಧಿಕಾರಿಗಳು ಹೊಬಳಿಗಳಿಗೆ ಭೇಟಿ ನೀಡಿ ರೈತರಿಗೆ ಸೂಚನೆ ನೀಡಬೇಕು ಎಂದರು.

ತೋಟ ನಾಶವಾದರೆ ಮನೆತನವೇ ಸಂಕಷ್ಟಕ್ಕೆ ಬೀಳುತ್ತದೆ. ಹಳ್ಳಿ ಹಳ್ಳಿಗೆ ವಿಜ್ಞಾನಿಗಳು ಹೋಗಬೇಕು. ನಾನೂ ಕಾಫಿ ಬೆಳೆಗಾರ. ನಮ್ಮ ಭಾಗದ ವಾತಾವರಣಕ್ಕೆ ಕಾಫಿ ಬೆಳೆ ಅನುಕೂಲ ಆಗಲಿದೆ. ರೈತರು ಪರ್ಯಾಯ ಬೆಳೆಯಾಗಿ ಕಾಫಿಯನ್ನು ಬೆಳೆದರೆ ಆರ್ಥಿಕ ಸಧೃಡರಾಗಲು ಸಾಧ್ಯವಾಗುತ್ತದೆ ಎಂದರು.

ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಡಾ.ಬಿ.ಪಿ ಸತೀಶ ಪ್ರಾಸ್ತಾವಿಕವಾಗಿ ಮಾತನಾಡಿದರು. ತೋಟಗಾರಿಕಾ ಹಿರಿಯ ನಿರ್ದೇಶಕ ಸತೀಶ ಹೆಗಡೆ ಮಾತನಾಡಿದರು. ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಜಗದೀಶ ಗೌಡ, ಹುಲೇಕಲ್ ಗ್ರಾಪಂ ಅಧ್ಯಕ್ಷ ಖಾಸಗಿ ಸಾಬ್, ಹಿರಿಯ ಅಡಿಕೆ ಬೆಳೆಗಾರ ಶ್ರೀಧರ ಭಟ್ಟ ಮತ್ತಿತರರು ಉಪಸ್ಥಿತರಿದ್ದರು. ಸಹಾಯಕ ನಿರ್ದೇಶಕ ಗಣೇಶ ಹೆಗಡೆ ನಿರೂಪಿಸಿದರು.



















Owned and Published by PRAVEEN BALACHANDRA HEGDE, 28 KARJAGI BALESAR, UTTARA KANNADA, KARNATAKA - 581340. Printer: PLOT NO. 15 & 16, KIADB RAYAPUR INDUSTRIAL AREA, DHARWAD, KARNATAKA - 580009. Printed at and by METROPOLITAN MEDIA COMPANY LIMITED PLOT NO. 15 & 16, KIADB RAYAPUR INDUSTRIAL AREA, DHARWAD, KARNATAKA - 580009. Published at: Tatvanishta, Behind Hotel Mdhuvana, Yellapur Road, Sirsi-581 401 Editor: PRAVEEN HEGDE , Executive Editor: Mahesh Hegde All rights reserved. Reproduction in whole or in part without written permission is prohibited.